# ಗ್ರಾಹಕರಿಗಾಗಿ

# ಬ್ಯಾಂಕಿನ ಹೊಣೆಗಾರಿಕೆಗಳ ಸಂಹಿತೆ

ಜನವರಿ 2014

ಬ್ಯಾಂಕಿಂಗ್ ಕೋಡ್ಸ್ ಮತ್ತು ಸ್ಟ್ಯಾಂಡರ್ಡ್ಸ್

ಬೋರ್ಡ್ ಆಫ್ ಇಂಡಿಯಾ

www.bcsbi.org.in

ಇದು ಒಂದು ಸ್ವಯಂಪ್ರೇರಿತ ಸಂಹಿತೆಯಾಗಿದ್ದು ವ್ಯಕ್ತಿಗತ ಗ್ರಾಹಕರೊಂದಿಗೆ ವ್ಯವಹಾರ ನಡೆಸುವಾಗ ಬ್ಯಾಂಕುಗಳು ಅನುಸರಿಸಬೇಕಾಗಿರುವ ಬ್ಯಾಂಕಿಂಗ್ ಪದ್ಧತಿಗಳ ಕನಿಷ್ಠ ಮಾನದಂಡಗಳನ್ನು ಇದು ನಿರ್ಧರಿಸುತ್ತದೆ. ಇದು ನಿಮಗೆ ಸುರಕ್ಷೆಯನ್ನು ಒದಗಿಸುತ್ತದೆ ಮತ್ತು ನಿಮ್ಮ ದೈನಂದಿನ ವ್ಯವಹಾರಗಳಿಗೆ ಬ್ಯಾಂಕುಗಳು ನಿಮ್ಮೊಂದಿಗೆ ಯಾವ ರೀತಿಯಲ್ಲಿ ವ್ಯವಹರಿಸಬೇಕೆಂದು ನಿರೀಕ್ಷಿಸಲಾಗಿದೆ ಎನ್ನುವುದನ್ನು ವಿವರಿಸುತ್ತದೆ.

| | | | |
|---|---|---|---|
| 1. | | ಪರಿಚಯ | 7 |
| | 1.1 | ಸಂಹಿತೆಯ ಉದ್ದೇಶಗಳು | 7 |
| | 1.2 | ಸಂಹಿತೆಯ ಅನ್ವಯಿಸುವಿಕೆ | 8 |
| 2. | | ಪ್ರಮುಖ ಬದ್ಧತೆಗಳು | 9 |
| | 2.1 | ನಿಮಗಾಗಿ ನಮಗಿರುವ ಮುಖ್ಯ ಹೊಣೆಗಾರಿಕೆಗಳು | 9 |
| | 2.1.1 | ಈ ಕೆಳಗಿನಂತೆ ನಿಮ್ಮೊಂದಿಗಿನ ನಮ್ಮ ಎಲ್ಲ ವ್ಯವಹಾರಗಳಲ್ಲಿ ನಿಷ್ಪಕ್ಷಪಾತ ಮತ್ತು ನ್ಯಾಯಪರವಾಗಿ ವ್ಯವಹರಿಸುವುದು. | 9 |
| | 2.1.2 | ನಮ್ಮ ಉತ್ಪನ್ನಗಳು ಮತ್ತು ಸೇವೆಗಳು ಹೇಗೆ ಕೆಲಸ ಮಾಡುತ್ತವೆ ಎನ್ನುವುದನ್ನುತಿಳಿಯಲು ಕೆಳಕಂಡ ವಿಷಯಗಳು ನೆರವಾಗುವುವು. | 9 |
| | 2.1.3 | ನಿಮ್ಮ ಖಾತೆ ಅಥವಾ ಸೇವೆಯ ಉಪಯೋಗದಲ್ಲಿ ಕೆಳಕಂಡಂತೆ ನಿಮಗೆ ಸಹಾಯ ನೀಡುವುದು. | 10 |
| | 2.1.4 | ತಪ್ಪಾದರೆ, ಅವುಗಳ ಶೀಘ್ರ ಹಾಗೂ ಸಹಾನುಭೂತಿಪೂರ್ವಕ ವಿಲೇವಾರಿ | 11 |
| | 2.1.5 | ನಿಮ್ಮ ಎಲ್ಲ ವೈಯಕ್ತಿಕ ಮಾಹಿತಿಯನ್ನು ಖಾಸಗಿ ಮತ್ತು ಗೌಪ್ಯವೆಂದು ಪರಿಗಣಿಸುವುದು. | 11 |
| | 2.1.6 | ಸಂಹಿತೆಯ ಪ್ರಚಾರಕ್ಕಾಗಿ | 11 |
| | 2.1.7 | ತಾರತಮ್ಯರಹಿತ ನೀತಿಯ ಅಳವಡಿಕೆ ಹಾಗೂ ಆಚರಣೆ | 12 |
| 3. | | ಮಾಹಿತಿ – ಪಾರದರ್ಶಕತೆ | 12 |
| | 3.1 | ಸಾಮಾನ್ಯ ಮಾಹಿತಿ | 12 |
| | 3.2 | ಕರೆ ಮಾಡಬೇಡಿ ಸೇವೆ | 13 |
| | 3.3 | ಬಡ್ಡಿ ದರಗಳು | 13 |
| | 3.3.1. | ಬಡ್ಡಿದರಗಳಲ್ಲಿ ಬದಲಾವಣೆಗಳ | 14 |
| | 3.4 | ದರ ಸೂಚಿ | 14 |
| | 3.4.1 | ಶುಲ್ಕಗಳು ಮತ್ತು ದರಗಳು | 14 |
| | 3.4.2 | ಶುಲ್ಕಗಳು ಮತ್ತು ದರಗಳಲ್ಲಿನ ಬದಲಾವಣೆಗಳು | 15 |
| | 3.5 | ನಿಬಂಧನೆಗಳು ಮತ್ತು ಷರತ್ತುಗಳು | 15 |
| | 3.5.1 | ನಿಬಂಧನೆಗಳು ಮತ್ತು ಷರತ್ತುಗಳಿಗೆ ಬದಲಾವಣೆಗಳು | 15 |
| 4. | | ಜಾಹೀರಾತು, ಮಾರುಕಟ್ಟೆ ಮತ್ತು ಮಾರಾಟ | 16 |
| 5. | | ಖಾಸಗಿತನ ಮತ್ತು ಗೌಪ್ಯತೆ | 17 |
| | 5.1 | ಸಾಲ ಮಾಹಿತಿ ಏಜೆನ್ಸಿಗಳು | 18 |
| 6. | | ಬಾಕಿ ವಸೂಲಾತಿ | 19 |
| | 6.1. | ಭದ್ರತಾಸ್ತಿಗಳ ಮರು ಸ್ವಾಧೀನ ನೀತಿ | 20 |
| 7. | | ದೂರುಗಳು, ಕುಂದುಕೊರತೆಗಳು ಮತ್ತು ಪ್ರತಿ ಅಭಿಪ್ರಾಯಗಳು | 20 |

| | | | |
|---|---|---|---|
| | 7.1 | ಆಂತರಿಕ ಕಾರ್ಯವಿಧಾನಗಳು | 20 |
| | 7.2 | ಬ್ಯಾಂಕಿಂಗ್ ಲೋಕಪಾಲ ಯೋಜನೆ | 21 |
| | 7.3 | ಗ್ರಾಹಕ ಸಭೆಗಳು | 21 |
| | 7.4 | ಶಾಖಾ ಮಟ್ಟದ ಗ್ರಾಹಕ ಸೇವಾ ಸಮಿತಿ ಸಭೆಗಳು | 22 |
| 8. | | ಉತ್ಪನ್ನಗಳು ಮತ್ತು ಸೇವೆಗಳು | 22 |
| | 8.1 | ಠೇವಣಿ ಖಾತೆಗಳು | 22 |
| | 8.1.1 | ಖಾತೆ ತೆರೆಯುವಿಕೆ ಮತ್ತು ಠೇವಣಿ ಖಾತೆಯ ನಿರ್ವಹಣೆ | 23 |
| | 8.1.2 | ನಿಮ್ಮ ಖಾತೆಯ ಬದಲಾವಣೆ | 24 |
| | 8.1.3 | ಉಳಿತಾಯ / ಚಾಲ್ತಿ ಖಾತೆಗಳು | 24 |
| | 8.1.3.1 | ಕನಿಷ್ಠ ಶಿಲ್ಕು | 25 |
| | 8.1.3.2 | ಶುಲ್ಕಗಳು | 25 |
| | 8.1.3.3 | ಉಳಿತಾಯ ಮತ್ತು ಚಾಲ್ತಿ ಖಾತೆಗಳು | 25 |
| | 8.1.3.4 | ಪಾಸ್ ಪುಸ್ತಕಗಳು ಮತ್ತು ವಿವರಣಾ ಪಟ್ಟಿಗಳು | 25 |
| | 8.1.4 | ಠೇವಣ ಖಾತೆಗಳನ್ನು ಮೇಲ್ದರ್ಜೆಗೇರಿಸುವಿಕೆ | 26 |
| | 8.1.5 | ನಿಷ್ಕ್ರಿಯ ಮತ್ತು ವ್ಯವಹಾರವಿಲ್ಲದ ಖಾತೆಗಳು | 26 |
| | 8.1.6 | ನಿಮ್ಮ ಖಾತೆಗಳನ್ನು ಮುಕ್ತಾಯಗೊಳಿಸುವಿಕೆ | 27 |
| | 8.2 | ತೀರುವೆ ಆವರ್ತನ/ ಸಂಗ್ರಹಣಾ ಸೇವೆಗಳು | 27 |
| | 8.3 | ನಗದು ವ್ಯವಹಾರಗಳು | 28 |
| | 8.4 | ನೇರ ಖರ್ಚುಗಳು ಮತ್ತು ಸ್ಥಾಯಿ ನಿರ್ದೇಶನಗಳು | 28 |
| | 8.5 | ಪಾವತಿ ತಡೆ ಸೌಲಭ್ಯಗಳು | 29 |
| | 8.6 | ನೀವು ನೀಡಿದ ಚೆಕ್‌ಗಳು/ ಖರ್ಚು ಸೂಚನೆಗಳು | 29 |
| | 8.7 | ಸಾವಧಿ ಠೇವಣಿಗಳು | 30 |
| | 8.7.1 | ಠೇವಣಿಗಳ ಮೇಲೆ ಮುಂಗಡಗಳು | 31 |
| | 8.8 | ಮೃತ ಖಾತಾದಾರರ ಸಂಬಂಧ ಕ್ಲೇಮುಗಳ ಇತ್ಯರ್ಥ | 31 |
| | 8.8.1 | ಜೀವಂತವಿರುವವರು (survivor)/ "ನಾಮನಿರ್ದೇಶಿತ ವ್ಯಕ್ತಿ" ವಾಕ್ಯಾಂಶ | 32 |
| | 8.8.2 | ಜೀವಂತವಿರುವವರು / "ನಾಮನಿರ್ದೇಶನ" ವಾಕ್ಯಾಂಶವಿಲ್ಲದ ಖಾತೆಗಳು | 33 |
| | 8.8.3 | ಕ್ಲೇಮುಗಳ ಇತ್ಯರ್ಥಕ್ಕೆ ಸಂಬಂಧ ಕಾಲಮಿತಿ | 33 |
| | 8.8.4 | ಅವದಿ ಠೇವಣಿಗಳನ್ನು ಅವಧಿಯ ಮುನ್ನ ಕೊನೆಗೊಳಿಸುವಿಕೆ | 33 |
| | 8.8.5 | ಮೃತ ಠೇವಣಿದಾರರ ಹೆಸರಿನಲ್ಲಿ ಮಾಡಬಹುದಾದ ನಿದಿ ಸಂಬಂಧಿತ ವರ್ಗಾವಣೆಗಳು | 34 |
| | 8.9 | ಭದ್ರತಾ ಕಪಾಟುಗಳು | 34 |
| | 8.10 | ವಿದೇಶಿ ವಿನಿಮಯ ಸೇವೆಗಳು | 34 |
| | 8.11 | ಭಾರತದ ಒಳಗಿನ ರವಾನೆಗಳು | 36 |

| | | | |
|---|---|---|---|
| | 8.12 | ಸಾಲ ನೀಡಿಕೆ | 36 |
| | 8.12.1 | ಸಾಲಗಳು | 37 |
| | 8.12.1.1 | ಸಾಮಾನ್ಯ ಮಾಹಿತಿ | 37 |
| | 8.12.1.2 | ಸಾಲಗಳಿಗೆ ಅರ್ಜಿಗಳು ಮತ್ತು ಅವುಗಳ ಸಂಸ್ಕರಣೆ | 38 |
| | 8.13 | ಖಾತರಿಗಳು | 41 |
| | 8.14 | ಮಾಹಿತಿ ನೋಂದಣಿ ಕೇಂದ್ರ | 42 |
| | 8.15 | ಬಾಕಿ ಮೊತ್ತದ ಇತ್ಯರ್ಥ | 42 |
| | 8.16 | ಸಾಲಗಳ/ಕಾರ್ಡುಗಳ ಬಾಕಿ ಮೊತ್ತಗಳ ಮಾರಾಟ | 43 |
| | 8.17 | ವಿದ್ಯುನ್ಮಾನ ಬ್ಯಾಂಕಿಂಗ್ | 43 |
| | 8.17.1 | ವೈಯಕ್ತಿಕ ಗುರುತು ಸಂಖ್ಯೆಗಳು ಮತ್ತು ಪ್ರವೇಶಾನುಮತಿ ಸಂಖ್ಯೆಗಳು | 43 |
| | 8.17.2 | ಅಂತರ್ಜಾಲ ಬ್ಯಾಂಕಿಂಗ್ | 46 |
| | 8.17.3 | ಮೊಬೈಲ್ ಬ್ಯಾಂಕಿಂಗ್ | 49 |
| | 8.17.4 | ಎಟಿಎಮ್ / ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳು | 50 |
| | 8.17.4.1 | ಕಳೆದು ಹೋದ/ ಕಳುವಾದ/ ವಿವಾದಾತ್ಮಕ ವ್ಯವಹಾರಗಳನ್ನು ವರದಿ ಮಾಡುವುದು | 52 |
| | 8.17.5 | ಕ್ರೆಡಿಟ್ ಕಾರ್ಡ್ | 55 |
| | 8.17.5.1 | ಕ್ರೆಡಿಟ್ ಕಾರ್ಡ್ ವಿವರಣೆಗಳು. | 56 |
| | 8.18 | ಮೂರನೇ ಪಕ್ಷ ಕಾರರ ಉತ್ಪನ್ನಗಳು ಸಾಲ ಸಲಹಾ ಸೌಲಭ್ಯ | 57 |
| | 8.19 | ಸಾಲ ಸಲಹಾ ಸೌಲಭ್ಯಗಳು | 59 |
| | 8.20 | ದಾಖಲೆಗಳನ್ನು ಪಡೆಯುವಿಕೆ | 59 |
| 9. | | ಶಾಖೆ ಮುಚ್ಚುವಿಕೆ/ವರ್ಗಾವಣೆ | 59 |
| 10. | | ಹಣಕಾಸು ಸೇರ್ಪಡೆ | 59 |
| 11. | | ಹಿರಿಯ ನಾಗರಿಕರು ಮತ್ತು ವಿಕಲಚೇತನರು | 62 |
| 12. | | ನಿಮ್ಮ ಖಾತೆಗಳ ರಕ್ಷಣೆ | 64 |
| | 12.1 | ಸುರಕ್ಷಿತ ಮತ್ತು ನಂಬಲರ್ಹ ಬ್ಯಾಂಕಿಂಗ್ ಮತ್ತು ಪಾವತಿ ವ್ಯವಸ್ಥೆಗಳು | 64 |
| | 12.2 | ಪ್ರಸಕ್ತ ಬೆಳವಣಿಗೆಯ ಬಗ್ಗೆ ನಮಗೆ ತಿಳುವಳಿಕೆ | 64 |
| | 12.3 | ನಿಮ್ಮ ಖಾತೆಯನ್ನು ಪರೀಕ್ಷಿಸಿಕೊಳ್ಳಿ | 65 |
| | 12.4 | ಕಾಳಜಿ ವಹಿಸಿರಿ | 65 |
| | 12.5 | ಪಾವತಿಯ ರದ್ದತಿ | 66 |
| | 12.6 | ನಷ್ಟದ ಹೊಣೆಗಾರಿಕೆ | 66 |
| | | ಅನುಬಂಧ – ಲಘುಪದಕೋಶ | 67 |

# ಪರಿಚಯ

ಇದು ಒಂದು ಸ್ವಯಂಪ್ರೇರಿತ ಸಂಹಿತೆಯಾಗಿದ್ದು ವ್ಯಕ್ತಿಗತ ಗ್ರಾಹಕರೊಂದಿಗೆ ವ್ಯವಹಾರ ನಡೆಸುವಾಗ ಬ್ಯಾಂಕುಗಳು ಅನುಸರಿಸಬೇಕಾಗಿರುವ ಬ್ಯಾಂಕಿಂಗ್ ಪದ್ಧತಿಗಳ ಕನಿಷ್ಠ ಮಾನದಂಡಗಳನ್ನು ಇದು ನಿರ್ಧರಿಸುತ್ತದೆ. ಇದು ನಿಮಗೆ ಸುರಕ್ಷೆಯನ್ನು ಒದಗಿಸುತ್ತದೆ ಮತ್ತು ನಿಮ್ಮ ದೈನಂದಿನ ವ್ಯವಹಾರಗಳಿಗೆ ಬ್ಯಾಂಕುಗಳು ನಿಮ್ಮೊಂದಿಗೆ ಯಾವ ರೀತಿಯಲ್ಲಿ ವ್ಯವಹರಿಸಬೇಕೆಂದು ನಿರೀಕ್ಷಿಸಲಾಗಿದೆ ಎನ್ನುವುದನ್ನು ವಿವರಿಸುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣ ಅಥವಾ ಮೇಲ್ವಿಚಾರಣಾ ಸೂಚನೆಗಳನ್ನು ಬದಲಾಯಿಸುವುದಾಗಲೀ ಅಥವಾ ರದ್ದುಗೊಳಿಸುವುದಾಗಲೀ ಈ ಸಂಹಿತೆ ಮಾಡುವುದಿಲ್ಲ ಮತ್ತು ಕಾಲ ಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ನೀಡುವಂತಹ ಸೂಚನೆಗಳನ್ನು/ ನಿರ್ದೇಶನಗಳನ್ನು ನಾವು ಪಾಲಿಸುತ್ತೇವೆ. ನಿಯಂತ್ರಣ ಸೂಚನೆಗಳಲ್ಲಿ ಸೂಚಿಸಿರುವ ಮಾನದಂಡಗಳಿಗಿಂತ ಹೆಚ್ಚಿನ ಮಾನದಂಡಗಳನ್ನು ಈ ಸಂಹಿತೆಯ ಉಪಬಂಧಗಳು ನಿಗಧಿಪಡಿಸಬಹುದಾಗಿದೆ ಮತ್ತು ನಿಮಗೆ ಅತ್ಯುತ್ತಮ ಸೇವೆಯನ್ನು ನೀಡುವ ವಚನವನ್ನು ಈ ಸಂಹಿತೆ ಪ್ರತಿನಿಧಿಸುವುದರಿಂದ ಅಂತಹ ಹೆಚ್ಚಿನ ಮಾನದಂಡಗಳು ಚಾಲ್ತಿಯಲ್ಲಿರುತ್ತವೆ.

ಉತ್ತಮ ಗ್ರಾಹಕ ಸೇವೆ ನೀಡುವ ಸಲುವಾಗಿ ಹಾಗೂ ಹೆಚ್ಚಿನ ಮಟ್ಟದ ಗ್ರಾಹಕ ಸಂತೃಪ್ತಿ ಸಾಧಿಸುವುದಕ್ಕಾಗಿ ಉನ್ನತ ಮಟ್ಟದ ಬ್ಯಾಂಕಿಂಗ್ ಆಚರಣೆಗಳನ್ನು ಅಳವಡಿಸಿಕೊಳ್ಳಲು ನಾವು ಪ್ರಯತ್ನಿಸುತ್ತೇವೆ.

ಸಂಹಿತೆಯಲ್ಲಿ 'ನೀವು' ಎಂದರೆ ಗ್ರಾಹಕರು, ಮತ್ತು 'ನಾವು' ಎಂದರೆ ಗ್ರಾಹಕರು ವ್ಯವಹರಿಸುವ ಬ್ಯಾಂಕ್.

## ಸಂಹಿತೆಯ ಉದ್ದೇಶಗಳು

ಕೆಳಕಂಡ ಉದ್ದೇಶಗಳಿಗಾಗಿ ಈ ಸಂಹಿತೆಯನ್ನು ರಚಿಸಲಾಗಿದೆ:

ಎ) ನಿಮ್ಮೊಂದಿಗೆ ವ್ಯವಹರಿಸುವಾಗ ಕನಿಷ್ಠ ಮಾನದಂಡಗಳನ್ನು ನಿರ್ಧರಿಸುವುದರ ಮೂಲಕ ಒಳ್ಳೆಯ ಮತ್ತು ನಿಷ್ಪಕ್ಷಪಾತ ಬ್ಯಾಂಕಿಂಗ್ ಪದ್ಧತಿಗಳ ಬಳಕೆ

ಬಿ) ಸೇವೆಗಳಿಗೆ ಸಂಬಂಧಪಟ್ಟಂತೆ ನೀವು ಸಾಮಾನ್ಯವಾಗಿ ನಮ್ಮಿಂದ ಏನನ್ನು

ನಿರೀಕ್ಷಿಸಬಹುದು ಎನ್ನುವುದನ್ನು ಸರಿಯಾಗಿ ತಿಳಿದುಕೊಳ್ಳಲು ಪಾರದರ್ಶಕತೆಯನ್ನು ಹೆಚ್ಚಿಸುವುದು

ಸಿ) ಉತ್ತಮ ವ್ಯವಹರಣಾ ಮಾನದಂಡಗಳನ್ನು ಸಾಧಿಸಲು, ಸ್ಪರ್ಧಾತ್ಮಕ ಮಾರುಕಟ್ಟೆಯ ಬಲವರ್ಧನೆಗೆ ಪ್ರೋತ್ಸಾಹಿಸುವುದು.

ಡಿ) ನಿಮ್ಮ ಮತ್ತು ನಿಮ್ಮ ಬ್ಯಾಂಕಿನ ನಡುವೆ ನಿಷ್ಪಕ್ಷಪಾತ ಮತ್ತು ಸೌಹಾರ್ದಯುತವಾದ ಸಂಬಂಧವನ್ನು ವೃದ್ಧಿಸುವುದು.

ಇ) ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ವಿಶ್ವಾಸವನ್ನು ಹೆಚ್ಚಿಸುವುದು.

## ಸಂಹಿತೆಯ ಮಾನದಂಡಗಳು

ಭಾಗ 2ರಲ್ಲಿ ಇರುವ ಪ್ರಮುಖ ಹೊಣೆಗಾರಿಕೆಯ ವ್ಯಾಪ್ತಿಗೆ ಒಳಪಡುತ್ತವೆ.

## 1.2 ಸಂಹಿತೆಯ ಅನ್ವಯಿಸುವಿಕೆ

ಅನ್ಯಥಾ ಉಲ್ಲೇಖಿಸಲಾಗಿರದಿದ್ದರೆ, ಈ ಸಂಹಿತೆಯ ಎಲ್ಲ ಭಾಗಗಳು ಕೆಳಗೆ ಪಟ್ಟಿ ಮಾಡಲಾಗಿರುವ ಎಲ್ಲ ಉತ್ಪನ್ನ ಮತ್ತು ಸೇವೆಗಳಿಗೆ ಅನ್ವಯಿಸುತ್ತವೆ. ಅವು ಶಾಖೆಗಳು ಅಥವಾ ಸಹವರ್ತಿ ಸಂಸ್ಥೆಗಳ ಮೂಲಕ ಕೌಂಟರ್ ಆಚೆಯಿಂದ, ಫೋನ್ ಮೂಲಕ,ಅಂಚೆ ಮೂಲಕ ಇಂಟರಾಕ್ಟಿವ್ ಇಲೆಕ್ಟ್ರಾನಿಕ್ ಉಪಕರಣಗಳ ಮೂಲಕ, ಇಂಟರ್‌ನೆಟ್ ಮೂಲಕ ಅಥವಾ ಇನ್ನಾವುದೇ ವಿಧದಿಂದ ನೀಡಲ್ಪಟ್ಟಿರಲಿ, ಆದಾಗ್ಯೂ ಇಲ್ಲಿ ಚರ್ಚಿಸಲಾಗಿರುವ ಎಲ್ಲ ಉತ್ಪನ್ನಗಳನ್ನು ಎಲ್ಲ ಬ್ಯಾಂಕುಗಳು ನೀಡಬಹುದು ಅಥವಾ ನೀಡದಿರಬಹುದು

ಎ. ಚಾಲ್ತಿ ಖಾತೆಗಳು, ಉಳಿತಾಯ ಖಾತೆ, ಸಾವಧಿ ಠೇವಣಿಗಳು, ಆವರ್ತಕ ಠೇವಣಿ, ಪಿಪಿಎಫ್ ಖಾತೆಗಳು ಮತ್ತು ಎಲ್ಲ ಇತರ ಠೇವಣಿ ಖಾತೆಗಳು

ಬಿ. ಪಿಂಚಣಿ, ಪಾವತಿ ಆದೇಶಗಳು, ಡಿಮಾಂಡ್ ಡ್ರಾಫ್ಟ್ ಮತ್ತು ತಂತಿ ರವಾನೆಗಳು ಮತ್ತು ಎಲ್ಲಾ ವಿದ್ಯುನ್ಮಾನ ವ್ಯವಹಾರಗಳು, ಉದಾಹರಣೆಗೆ ಆರ್‌ಟಿಜಿಎಸ್, ಎನ್‌ಇಎಫ್‌ಟಿ

ಸಿ. ಸರಕಾರಿ ವ್ಯವಹಾರಗಳಿಗೆ ಸಂಬಂಧಪಟ್ಟ ಬ್ಯಾಂಕಿಂಗ್ ಸೇವೆಗಳು

ಡಿ. ಡಿಮ್ಯಾಟ್ ಖಾತೆಗಳು, ಈಕ್ವಿಟಿ, ಸರಕಾರಿ ಬಾಂಡಗಳು

ಇ. ಭಾರತೀಯ ಕರೆನ್ಸಿ ನೋಟುಗಳ/ನಾಣ್ಯಗಳ ವಿನಿಮಯ ಸೌಲಭ್ಯ

ಎಫ್. ಚೆಕ್‌ಗಳ ಸಂಗ್ರಹಣೆ, ಭದ್ರತೆಯಲ್ಲಿರುವ ವಸ್ತುಗಳ ಬಗ್ಗೆ ಸೇವೆಗಳು, ಸುರಕ್ಷಿತ ಭದ್ರತಾ ಕಪಾಟುಗಳ ಸೌಲಭ್ಯ

ಜಿ. ಸಾಲಗಳು ಮತ್ತು ಮೀರೆಳೆತ (ಓವರ್ ಡ್ರಾಫ್ಟ್) ಮತ್ತು ಖಾತರಿಗಳು (ಗ್ಯಾರಂಟಿ)

ಎಚ್. ಹಣ ಪರಿವರ್ತನೆ ಸಹಿತವಾದ ವಿದೇಶಿ ವಿನಿಮಯ ಸೇವೆಗಳು

ಐ. ನಮ್ಮ ಶಾಖೆಗಳ ಮತ್ತು ಅಥವಾ ನಮ್ಮ ಅಧಿಕೃತ ಪ್ರತಿನಿಧಿ ಅಥವಾ ಏಜಂಟರುಗಳ ಮೂಲಕ ಮಾರಾಟವಾದ ತೃತೀಯ ಪಕ್ಷ ವಿಮೆ ಹೂಡಿಕೆ ಉತ್ಪನ್ನಗಳು.

ಜೆ. ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್, ಎಟಿಎಮ್ ಕಾರ್ಡ್ ಮತ್ತು ಸ್ಮಾರ್ಟ್ ಕಾರ್ಡ್ ಸೇವೆಗಳು (ನಮ್ಮ ಸಹವರ್ತಿ ಸಂಸ್ಥೆಗಳು/ ನಮ್ಮ ಮೂಲಕ ಪ್ರವರ್ತಿತವಾದ ಸಂಸ್ಥೆಗಳು ನೀಡುವ ಕ್ರೆಡಿಟ್ ಕಾರ್ಡ್‌ಗಳ ಸಹಿತ) ಎದ್ದು ಕಾಣುವಂತೆ ಕಪ್ಪು ಬಣ್ಣದಲ್ಲಿ ಮುದ್ರಿಸಿರುವ ಮುಖ್ಯ ಪದಗಳಿಗೆ ಅರ್ಥವನ್ನು ಲಘುಶಬ್ದಕೋಶದಲ್ಲಿ ನೀಡಲಾಗಿದೆ.

## 2. ಪ್ರಮುಖ ಬದ್ಧತೆಗಳು

### 2.1 ನಿಮಗಾಗಿ ನಮಗಿರುವ ಮುಖ್ಯ ಹೊಣೆಗಾರಿಕೆಗಳು

2.1.1 ಈ ಕೆಳಗಿನಂತೆ ನಿಮ್ಮೊಂದಿಗಿನ ನಮ್ಮ ಎಲ್ಲ ವ್ಯವಹಾರಗಳಲ್ಲಿ ನಿಷ್ಪಕ್ಷಪಾತ ಮತ್ತು ನ್ಯಾಯಪರವಾಗಿ ವ್ಯವಹರಿಸುವುದು.

ಎ. ಬ್ಯಾಂಕಿನ ಕೌಂಟರ್‌ನಲ್ಲಿ ನಗದು/ಚೆಕ್‌ಗಳ ಸ್ವೀಕಾರ ಮತ್ತು ಪಾವತಿಯ ಸಂಬಂಧ ಮೂಲಭೂತ ಬ್ಯಾಂಕಿಂಗ್ ಸೌಕರ್ಯಗಳನ್ನು ಒದಗಿಸುವುದು

ಬಿ. ನಾವು ನೀಡುವ ಉತ್ಪನ್ನ ಮತ್ತು ಸೇವೆಗಳ ವಿಚಾರದಲ್ಲಿ ಮತ್ತು ನಮ್ಮ ಸಿಬ್ಬಂದಿ ಅನುಸರಿಸುವ ಕಾರ್ಯವಿಧಾನ ಮತ್ತು ಪದ್ಧತಿಗಳ ವಿಚಾರದಲ್ಲಿ ಈ ಸಂಹಿತೆಯಲ್ಲಿರುವ ಬದ್ಧತೆ ಮತ್ತು ಮಾನದಂಡಗಳನ್ನು ಕಾಯ್ದುಕೊಳ್ಳುವುದು

ಸಿ. ನಮ್ಮ ಉತ್ಪನ್ನಗಳು ಮತ್ತು ಸೇವೆಗಳು ಪ್ರಸ್ತುತ ಕಾನೂನುಗಳನ್ನು ಮತ್ತು ನಿಯಮಾವಳಿಗಳನ್ನು ಸಂಪೂರ್ಣವಾಗಿ ಅನುಸರಿಸುತ್ತವೆ ಹಾಗೂ ನಿಮ್ಮ ಅಗತ್ಯಗಳಿಗೆ ಅನುಕೂಲಕರವಾಗಿದೆ ಎಂಬುದನ್ನು ಖಚಿತಪದಿಸಿಕೊಳ್ಳುವುದು.

ಡಿ. ನಿಮ್ಮೊಂದಿಗಿನ ನಮ್ಮ ವ್ಯವಹಾರ ಪಾರದರ್ಶಕತೆಯ ನೈತಿಕ ಸಿದ್ಧಾಂತಗಳ ಮೇಲೆ ಆಧಾರಿತವಾಗಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು

ಇ, ಸುರಕ್ಷಿತವಾದ ವಿಶ್ವಾಸಾರ್ಹ ಬ್ಯಾಂಕಿಂಗ್ ಮತ್ತು ಪಾವತಿ ವ್ಯವಸ್ಥೆಗಳನ್ನು ನಿರ್ವಹಿಸುವುದು.

2.1.2 ನಮ್ಮ ಉತ್ಪನ್ನಗಳು ಮತ್ತು ಸೇವೆಗಳು ಹೇಗೆ ಕೆಲಸ ಮಾಡುತ್ತವೆ ಎನ್ನುವುದನ್ನು ತಿಳಿಯಲು ಕೆಳಕಂಡ ವಿಷಯಗಳು ನೆರವಾಗುವುವು.

ಎ. ಹಿಂದಿ, ಇಂಗ್ಲೀಷ್ ಅಥವಾ ಸೂಕ್ತವಾದ ಸ್ಥಳೀಯ ಭಾಷೆಗಳ ಪೈಕಿ ಒಂದು ಅಥವಾ ಅದಕ್ಕಿಂತ ಹೆಚ್ಚಿನದರಲ್ಲಿ ನಿಮಗೆ ಅವುಗಳ ಬಗ್ಗೆ ಮಾಹಿತಿ ನೀಡುವುದು

ಬಿ. ನಮ್ಮ ಜಾಹೀರಾತು ಮತ್ತು ಬಳಕೆ ಉತ್ತೇಜನ ಸಾಹಿತ್ಯವು ಸ್ಪಷ್ಟವಾಗಿದೆ, ದಾರಿತಪ್ಪಿಸುವುದಿಲ್ಲ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು

ಸಿ. ನಮ್ಮ ಉತ್ಪನ್ನ ಸೇವೆಗಳ ಬಗ್ಗೆ ಅವುಗಳಿಗೆ ಅನ್ವಯವಾಗುವ ಷರತ್ತು ಹಾಗೂ ನಿಬಂಧನೆಗಳು ಮತ್ತು ಬಡ್ಡಿದರಗಳು/ ಸೇವಾಶುಲ್ಕಗಳ ಬಗ್ಗೆ ನಿಮಗೆ ಸ್ಪಷ್ಟವಾದ ಮಾಹಿತಿಯನ್ನು ನೀಡಲಾಗುತ್ತದೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು.

ಡಿ. ನಿಮಗೆ ಸಿಗುವ ಪ್ರಯೋಜನಗಳು ಯಾವುವು? ನೀವು ಈ ಪ್ರಯೋಜನವನ್ನು ಹೇಗೆ ಪಡೆಯಬಲ್ಲಿರಿ? ಎಂಬ ನಿಮ್ಮ ಪ್ರಶ್ನೆಗಳ ವಿಚಾರದಲ್ಲಿ ನೀವು ಯಾರನ್ನು ಮತ್ತು ಹೇಗೆ ಸಂಪರ್ಕಿಸಬಹುದು ಎನ್ನುವುದರ ಬಗ್ಗೆ ಮಾಹಿತಿ ನೀಡುವುದು.

### 2.1.3 ನಿಮ್ಮ ಖಾತೆ ಅಥವಾ ಸೇವೆಯ ಉಪಯೋಗದಲ್ಲಿ ಕೆಳಕಂಡಂತೆ ನಿಮಗೆ ಸಹಾಯ ನೀಡುವುದು

ಎ. ನಿಮಗೆ ಪ್ರಸ್ತುತ ವಿದ್ಯಮಾನದ ಮಾಹಿತಿಯ ನಿಯತ ಪೂರೈಕೆ

ಬಿ. ಬಡ್ಡಿದರಗಳು, ಶುಲ್ಕಗಳು ಅಥವಾ ನಿಬಂಧನೆಗಳು ಮತ್ತು ಷರತ್ತುಗಳಲ್ಲಿನ ಬದಲಾವಣೆಗಳು ಆದಾಗ ನಿಮಗೆ ಸೂಚನೆ ಕೊಡುವ ಮೂಲಕ

ಸಿ. ನಿಮ್ಮ ಮಾಹಿತಿಗಾಗಿ, ನಮ್ಮ ಶಾಖೆಗಳಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಫಲಕ ಪ್ರದರ್ಶನ

i. ನಾವು ನೀಡುವ ಸೇವೆಗಳು

ii. ಉಳಿತಾಯ ಖಾತೆಗಳಿಗೆ ಮತ್ತು ಚಾಲ್ತಿ ಖಾತೆಗಳಿಗೆ ಸಂಬಂಧಿಸಿದಂತೆ ಇಡಬೇಕಾದ ಕನಿಷ್ಠ ಶಿಲ್ಕು ಮತ್ತು ಅವುಗಳನ್ನು ನಿರ್ವಹಿಸದೇ ಇದ್ದರೆ ನೀಡಬೇಕಾದ ಶುಲ್ಕ

iii. ಕುಂದುಕೊರತೆಗಳ ಬಗ್ಗೆ ನಿಮ್ಮ ಬ್ಯಾಂಕ್ ಶಾಖೆಯಲ್ಲಿ ನೀವು ಕಾಣಬಹುದಾದ ಅಧಿಕಾರಿಯ ಹೆಸರು.

iv. ಶಾಖಾ ಮಟ್ಟದಲ್ಲಿ ಕುಂದುಕೊರತೆಗೆ ನಿಮಗೆ ಪರಿಹಾರ ದೊರಕದ ಸಂದರ್ಭ ದಲ್ಲಿ ನೀವು ಸಂಪರ್ಕಿಸಬಹುದಾದ ವಲಯ/ ಪ್ರಾದೇಶಿಕ ವ್ಯವಸ್ಥಾಪಕರ/ ಮುಖ್ಯ ನೋಡಲ್ ಅಧಿಕಾರಿಯ ಹೆಸರು ಮತ್ತು ವಿಳಾಸ

v. ನಿಮ್ಮ ಶಾಖೆ ಯಾವ ಬ್ಯಾಂಕಿಂಗ್ ಲೋಕಪಾಲರ ಕಚೇರಿಯ ವ್ಯಾಪ್ತಿಗೆ ಒಳಪಡುವುದೋ, ಅವರ ಹೆಸರು ಮತ್ತು ಸಂಪರ್ಕ ವಿವರಗಳು

vi. ಕಿರುಹೊತ್ತಿಗೆಯ ರೂಪದಲ್ಲಿ ಮಾಹಿತಿ ಲಭ್ಯತೆಯ ಬಗ್ಗೆ

ಡಿ. ಕೆಳಕಂಡ ವಿಷಯಗಳ ಬಗ್ಗೆ ನಮ್ಮ ನೀತಿಯನ್ನು ಕುರಿತಂತೆ ವೆಬ್ ತಾಣದಲ್ಲಿ ಪ್ರಕಟಣೆ ನೀಡುವುದು

i. ಠೇವಣಿ.

ii. ಚೆಕ್ ಸಂಗ್ರಹಣೆ.

iii. ಕುಂದುಕೊರತೆಯ ಪರಿಹಾರ

iv. ಪರಿಹಾರ

v. ಬಾಕಿ ಸಂಗ್ರಹಣೆ ಮತ್ತು ಭದ್ರತಾಸ್ತಿಗಳ ಪುನಸ್ವಾಧೀನ

## 2.1.4 ತಪ್ಪಾದರೆ, ಅವುಗಳ ಶೀಘ್ರ ಹಾಗೂ ಸಹಾನುಭೂತಿಪೂರ್ವಕ ವಿಲೇವಾರಿ

ಎ. ತಪ್ಪುಗಳನ್ನು ಪ್ರಾಮಾಣಿಕವಾಗಿ ತಿದ್ದಿಕೊಂಡು, ನಮ್ಮ ತಪ್ಪಿನಿಂದಾಗಿ ಅನ್ವಯವಾಗುವ ಯಾವುದೇ ಬ್ಯಾಂಕಿನ ಶುಲ್ಕಗಳನ್ನು ರದ್ದುಪಡಿಸುವುದು ಮತ್ತು ನಮ್ಮ ತಪ್ಪಿನಿಂದಾಗಿ ನಿಮಗುಂಟಾಗುವ ಯಾವುದೇ ಆರ್ಥಿಕ ನಷ್ಟವನ್ನು ನಮ್ಮ ನಷ್ಟ ಪರಿಹಾರ ನೀತಿಯ ಅನುಸಾರ ತುಂಬಿಕೊಡುವುದು

ಬಿ. ನಿಮ್ಮ ದೂರುಗಳ ಬಗ್ಗೆ ಪ್ರಾಮಾಣಿಕ ನಿರ್ವಹಣೆ

ಸಿ. ನಿಮಗೆ ಇನ್ನೂ ತೃಪ್ತಿಯಾಗದಿದ್ದರೆ, ನಿಮ್ಮ ದೂರನ್ನು ಮುಂದೆ ಕೊಂಡೊಯ್ಯುವುದು ಹೇಗೆ ಎನ್ನುವುದನ್ನು ನಿಮಗೆ ತಿಳಿಸುವುದು

ಡಿ. ತಾಂತ್ರಿಕ ವಿಫಲತೆಗಳಿಂದಾಗಿ ಉಂಟಾಗುವ ಸಮಸ್ಯೆಗಳ ಪರಿಹಾರಕ್ಕಾಗಿ ಸೂಕ್ತ ಪರ್ಯಾಯ ಮಾರ್ಗಗಳನ್ನು ಒದಗಿಸುವುದು.

## 2.1.5 ನಿಮ್ಮ ಎಲ್ಲ ವೈಯಕ್ತಿಕ ಮಾಹಿತಿಯನ್ನು ಖಾಸಗಿ ಮತ್ತು ಗೌಪ್ಯವೆಂದು ಪರಿಗಣಿಸುವುದು.

ಕೆಳಗೆ ನೀಡಲಾಗಿರುವ ಪ್ಯಾರಾ 5ರಲ್ಲಿ ತಿಳಿಸಿರುವ ಮಾಹಿತಿಗೆ ಒಳಪಟ್ಟು ನಿಮ್ಮ ಎಲ್ಲ ವೈಯಕ್ತಿಕ ಮಾಹಿತಿಯನ್ನು ನಾವು ಖಾಸಗಿ ಮತ್ತು ಗೌಪ್ಯವೆಂದು ಪರಿಗಣಿಸುತ್ತೇವೆ.

## 2.1.6 ಸಂಹಿತೆಯ ಪ್ರಚಾರಕ್ಕಾಗಿ

ಎ. ನೀವು ನಮ್ಮಲ್ಲಿ ಖಾತೆ ತೆರೆದಾಗ ಅಥವಾ ವಿನಂತಿಸಿಕೊಂಡರೆ ನಿಮಗೆ ಸಂಹಿತೆಯ ಪ್ರತಿಯನ್ನು ಒದಗಿಸುತ್ತೇವೆ.

ಬಿ. ಈ ಸಂಹಿತೆಯ ಬಗೆಗಿನ ಮಾಹಿತಿಯು ನಮ್ಮ ಎಲ್ಲಾ ಶಾಖೆಗಳಲ್ಲಿ ಮತ್ತು ವೆಬ್ ತಾಣದಲ್ಲಿ ಲಭ್ಯವಿರುವಂತೆ ನೋಡಿಕೊಳ್ಳಲಾಗುವುದು.

ಸಿ. ಸಂಹಿತೆಯ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡಲು ಮತ್ತು ಅದನ್ನು ಅನುಷ್ಠಾನಕ್ಕೆ ತರಲು ನಮ್ಮ ಸಿಬ್ಬಂದಿ ತರಬೇತಿ ಹೊಂದಿದ್ದಾರೆ ಎಂಬುದನ್ನು ಖಚಿತಪಡಿಸಿ ಕೊಳ್ಳುತ್ತೇವೆ.

ಡಿ. ಸಂಹಿತೆ ಮತ್ತು ಅದರ ಉಪಬಂಧಗಳ ಬಗ್ಗೆಗ್ರಾಹಕರಿಗೆತಿಳುವಳಿಕೆ ನೀಡಲು ಕ್ರಮ ತೆಗೆದುಕೊಳ್ಳುತ್ತೇವೆ.

### 2.1.7 ತಾರತಮ್ಯರಹಿತ ನೀತಿಯ ಅಳವಡಿಕೆ ಹಾಗೂ ಆಚರಣೆ

ನಾವು ವಯಸ್ಸು, ಜನಾಂಗ, ಲಿಂಗ, ವೈವಾಹಿಕ ಸ್ಥಿತಿ, ಧರ್ಮ ಅಥವಾ ಅಂಗವಿಕಲತೆಯನ್ನು ಆಧರಿಸಿದಂತೆ ಯಾವುದೇ ತಾರತಾಮ್ಯವನ್ನು ಮಾಡುವುದಿಲ್ಲ.

## 3. ಮಾಹಿತಿ – ಪಾರದರ್ಶಕತೆ

ನೀವು ಈ ಕೆಳಗಿನ ಯಾವುದೇ ಮಾರ್ಗದ ಮೂಲಕ, ಬಡ್ಡಿದರಗಳು, ಶುಲ್ಕ ಮತ್ತು ಇತರೇ ದರಗಳ ವಿಚಾರವಾಗಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಎ. ನಮ್ಮ ಶಾಖೆಗಳ ಸೂಚನಾ ಫಲಕಗಳನ್ನು ನೋಡಿ

ಬಿ. ನಮ್ಮ ಶಾಖೆಗಳಿಗೆ ಅಥವಾ ಸಹಾಯವಾಣಿಗಳಿಗೆ ಕರೆ ಮಾಡಿ

ಸಿ. ನಮ್ಮ ವೆಬ್‌ತಾಣವನ್ನು ನೋಡಿ

ಡಿ. ಗೊತ್ತುಪಡಿಸಿದ ಸಿಬ್ಬಂದಿ/ ಸಹಾಯ ಡೆಸ್ಕ್‌ನಲ್ಲಿ ಕೇಳಿ

ಇ. ನಮ್ಮ ಶಾಖೆಗಳಲ್ಲಿ ಹಾಗೂ ವೆಬ್ ತಾಣದಲ್ಲಿರುವ ಸೇವಾ ಮಾರ್ಗದರ್ಶಿ/ದರ ಸೂಚಿಯನ್ನು ನೋಡಿ

### 3.1 ಸಾಮಾನ್ಯ ಮಾಹಿತಿ

ಎ. ಅನ್ವಯಿಸುವ ಬಡ್ಡಿ ದರ/ ಶುಲ್ಕ ವೆಚ್ಚಗಳೂ ಸೇರಿದಂತೆ ನಿಮಗೆ ಆಸಕ್ತಿಯಿದೆ ಎಂದು ನೀವು ಹೇಳಿಕೊಳ್ಳುವ ಸೇವೆಗಳ ಮತ್ತು ಉತ್ಪನ್ನಗಳ ಮುಖ್ಯ ಲಕ್ಷಣಗಳನ್ನು ವಿವರಿಸುವ ಸ್ಪಷ್ಟ ಮಾಹಿತಿಯನ್ನು ನೀಡುತ್ತೇವೆ.

ಬಿ. ಸಾಮಾನ್ಯ ಉಳಿತಾಯ ಖಾತೆಯನ್ನು ತೆರೆಯುವುದಕ್ಕಾಗಿ ನೀಡಬೇಕಾದ ದಾಖಲೆಗಳ ವಿವರಗಳನ್ನು ದ್ವಿಭಾಷೆ/ತ್ರಿಭಾಷೆಗಳಲ್ಲಿ ಎದ್ದು ಕಾಣುವಂತೆ ಶಾಖೆಗಳಲ್ಲಿ ಪ್ರದರ್ಶಿಸುತ್ತೇವೆ.

ಸಿ. ಅನ್ವಯಿಸುವ ಬಡ್ಡಿ ದರ/ ಶುಲ್ಕ ವೆಚ್ಚಗಳೂ ಸೇರಿದಂತೆ ನಿಮಗೆ ಆಸಕ್ತಿಯಿದೆ ಎಂದು ನೀವು ಹೇಳಿಕೊಳ್ಳುವ ಸೇವೆಗಳ ಮತ್ತು ಉತ್ಪನ್ನಗಳ ಮುಖ್ಯ ಲಕ್ಷಣಗಳನ್ನು ವಿವರಿಸುವ ಸ್ಪಷ್ಟ ಮಾಹಿತಿಯನ್ನು ನೀಡುತ್ತೇವೆ.

ಡಿ. ನಮ್ಮ ಉತ್ಪನ್ನಗಳು ಮತ್ತು ಸೇವೆಗಳು ದೊರಕುವಂತಹ ವಿವಿಧ ಮಾರ್ಗಗಳ ಬಗ್ಗೆ ತಿಳಿಸುತ್ತೇವೆ ಒಂದಕ್ಕಿಂತ ಹೆಚ್ಚಿನ ಮಾರ್ಗದ ಮೂಲಕ ನಾವು ಉತ್ಪನ್ನ ಮತ್ತು ಸೇವೆಗಳನ್ನು ನೀಡುತ್ತಿದ್ದರೆ, (ಉದಾಹರಣೆಗೆ ಶಾಖೆಗಳು, ಎಟಿಎಮ್, ದೂರವಾಣಿ,

ನೆಟ್ ಬ್ಯಾಂಕಿಂಗ್) ಅವುಗಳ ಬಗ್ಗೆ ಹೇಳುತ್ತೇವೆ ಮತ್ತು ಅವುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯುವುದು ಹೇಗೆ ಎನ್ನುವುದನ್ನು ನಮಗೆ ತಿಳಿಸುತ್ತೇವೆ.

ಡಿ. ಕಾನೂನಿನ ಮತ್ತು ಆಂತರಿಕ ನೀತಿ ಅಗತ್ಯಗಳನ್ನು ಪೂರೈಸುವ ಸಲುವಾಗಿ ನಿಮ್ಮ ಗುರುತು ಮತ್ತು ವಿಳಾಸವನ್ನು ಸಾಬೀತುಪಡಿಸುವುದಕ್ಕಾಗಿ ನಮಗೆ ನಿಮ್ಮಿಂದ ಯಾವ ಮಾಹಿತಿ ಬೇಕು ಎನ್ನುವುದನ್ನು ತಿಳಿಸುತ್ತೇವೆ.

ಇ. ನಿಮ್ಮ ಹಕ್ಕು, ಹೊಣೆಗಾರಿಕೆಗಳ ಬಗ್ಗೆ ಅದರಲ್ಲೂ ವಿಶೇಷವಾಗಿ ಎಲ್ಲಾ ಠೇವಣಿಖಾತೆ, ಭದ್ರತೆಯಲ್ಲಿರುವ ವಸ್ತುಗಳು ಮತ್ತು ಭದ್ರತಾ ಕಪಾಟುಗಳ ಬಗ್ಗೆ ನೀಡಲಾಗುವ ನಾಮನಿರ್ದೇಶನದ ಸೌಲಭ್ಯಗಳ ವಿಚಾರವಾಗಿ ನಿಮಗೆ ಮಾಹಿತಿ ನೀಡುತ್ತೇವೆ.

## 3.2 'ಕರೆ ಮಾಡಬೇಡಿ' ಸೇವೆ

ನೀವು ನಮ್ಮ ಬ್ಯಾಂಕಿನ ಕರೆ ಮಾಡಬೇಡಿ ಸೇವಾ ವ್ಯವಸ್ಥೆಗೆ ನೋಂದಣಿ ಮಾಡಿಕೊಂಡಿದ್ದರೆ ಅಥವಾ ನಿಮ್ಮ ಸೇವಾ ನೀಡಿಕೆದಾರರ ಮೂಲಕ ಅಥವಾ ನೇರವಾಗಿ ರಾಷ್ಟ್ರೀಯ ಕರೆ ಮಾಡಬೇಡಿ ಸೇವಾ ವ್ಯವಸ್ಥೆಗೆ ನೋಂದಾಯಿತರಾಗಿದ್ದರೆ ನಮ್ಮ ಉತ್ಪನ್ನ ಮತ್ತು ಸೇವೆಗಳ ಬಗ್ಗೆ ಯಾವುದೇ ವಾಣಿಜ್ಯ ಮಾಹಿತಿಯನ್ನುದೂರವಾಣೀ/ಎಸ್ ಎಮ್ ಎಸ್/ಈ–ಅಂಚೆಯ ಮೂಲಕವಾಗಲೀ ನಿಮಗೆ ಮಾಹಿತಿ ನೀಡುವುದಿಲ್ಲ. ಆದರೆ ನಮ್ಮ ಖಾತೆ ವಿವರಣ ಪಟ್ಟಿ ಮಾಹಿತಿ ಸ್ವೀಕರಣೆ ಮತ್ತು ನಿಮ್ಮ ಖಾತೆ ವ್ಯವಹಾರ ಮತ್ತು ಪ್ರಸ್ತುತ ನೀವು ಹೊಂದಿರುವ ಉತ್ಪನ್ನ ಹಾಗೂ ಸೇವೆಗಳ ಬಗ್ಗೆ ಸಂದೇಶ ಸೇರಿದಂತೆ ಇತರೇ ಮುಖ್ಯ ಸೂಚನೆಗಳನ್ನು ಸ್ವೀಕರಿಸುವುದಕ್ಕೆ ಇದು ಅನ್ವಯಿಸುವುದಿಲ್ಲ.

## 3.3 ಬಡ್ಡಿ ದರಗಳು

ಈ ಕೆಳಕಂಡ ವಿಷಯಗಳ ಬಗ್ಗೆ ನಾವು ನಿಮಗೆ ಮಾಹಿತಿ ನೀಡುತ್ತೇವೆ :

a. ನಿಮ್ಮ ಠೇವಣಿ ಮತ್ತು ಸಾಲಖಾತೆಗಳನ್ನು ಅನ್ವಯಿಸುವ ಬಡ್ಡಿ ದರಗಳ ಬಗ್ಗೆ ತಿಳಿಸುತ್ತೇವೆ.

b. ಸಾಲಗಳು ನಿಶ್ಚಿತ ಬಡ್ಡಿದರದ ಪ್ರಕಾರವಿದ್ದರೆ, ಸಾಲ ಕರಾರು ಪತ್ರದಲ್ಲಿ "ಪುನರ್ನಿರ್ಧರಣೆ" ಷರತ್ತುಗಳೇನಾದರೂ ಇದ್ದಲ್ಲಿ, ಅದರ ವಿವರಗಳು ಹಾಗೂ ಜಾರಿಗೊಳ್ಳುವ ದಿನಾಂಕ

c. ಸಾಲಗಳು ಚರ ಬಡ್ಡಿದರದ ಪ್ರಕಾರವಿದ್ದರೆ, ನಿಮ್ಮ ಚರ ದರವು ಯಾವ ಪ್ರಸ್ತಾಪಿತ ದರಕ್ಕೆ (Reference rate) ಸಂಬಂಧಿಸುತ್ತದೆ ಮತ್ತು ನಿಮ್ಮ ಸಾಲಗಳ ಬಡ್ಡಿ ದರವನ್ನು ನಿರ್ಧರಿಸುವ ಸಲುವಾಗಿ ಪ್ರಸ್ತಾಪಿತ ದರಕ್ಕೆ ಅನ್ವಯಿಸುವ ಅಧಿಕ ಅಥವ ಸೋಡಿ ದರದ ಮಾಹಿತಿ. ಬೇರೆ ಬೇರೆ ಸಮಯದಲ್ಲಿ ಸಾಲವನ್ನು ಪಡೆಯುವ ಗ್ರಾಹಕರಿಗೆ, ಈ ಪ್ರಸ್ತಾಪಿತ ದರವು ಒಂದೇ ಸಮನಾಗಿರುತ್ತದೆ.

d. ನಿಮ್ಮ ಸಾಲವನ್ನು ನಿಶ್ಚಿತ ದರದಿಂದ ಚರ ದರಕ್ಕೆ ಹಾಗೂ ಇದರಿಂದ ಅದಕ್ಕೆ ಪರಿವರ್ತಿಸಲು ನಾವು ನಿಮಗೆ ಆಯ್ಕೆಯ ಅವಕಾಶವನ್ನು ನೀಡುತ್ತೇವ್ರೋ ಇಲ್ಲವ್ರೋ ಎಂಬುದರ ಬಗ್ಗೆ ಮತ್ತು ಹಾಗಿದ್ದಲ್ಲಿ ಅದಕ್ಕೆ ತಗಲುವ ವೆಚ್ಚದ ಬಗ್ಗೆ

e. ನಿಮ್ಮ ಠೇವಣಿಗಳ ಮೇಲೆ ನಾವು ಎಂದು ಬಡ್ಡಿ ನೀಡುತ್ತೇವೆ ಅಥವಾ ನಿಮ್ಮ ಸಾಲ ಖಾತೆಗಳ ಮೇಲೆ ಎಂದು ಬಡ್ಡಿ ಹಾಕುತ್ತೇವೆ ಎಂಬುದರ ಬಗ್ಗೆ

f. ನಿಮ್ಮ ಠೇವಣಿಗಳ ಮತ್ತು ಸಾಲ ಖಾತೆಗಳ ಮೇಲೆ ನಾವು ಹೇಗೆ ಬಡ್ಡಿ ಅನ್ವಯಿಸುತ್ತೇವೆ ಮತ್ತು ಅದರ ಮೇಲೆ ಹೇಗೆ ಬಡ್ಡಿ ಲೆಕ್ಕಾಚಾರ ಮಾಡುತ್ತೇವೆ ಎಂಬುದರ ಬಗ್ಗೆ

### 3.3.1 ಬಡ್ಡಿದರಗಳಲ್ಲಿ ಬದಲಾವಣೆಗಳು

ನಮ್ಮ ಸಾಲ ಉತ್ಪನ್ನಗಳ ಮೇಲೆ ಬಡ್ಡಿ ದರ ಮತ್ತು ಚರ ದರಕ್ಕೆ ಹೊಂದಿಕೊಂಡ ಪ್ರಸ್ತಾಪಿತ ದರಗಳಲ್ಲಿನ ಬದಲಾವಣೆಗಳ ಬಗ್ಗೆ 15 ದಿನಗಳ ಒಳಗೆ ಕೆಳಗೆ ಸೂಚಿಸಿರುವ ಯಾವುದೇ ಮಾರ್ಗದ ಮೂಲಕ ತಿಳಿಸುತ್ತೇವೆ.

i. ಪತ್ರಗಳು

ii. ಇ–ಅಂಚೆ

iii. ಎಸ್. ಎಮ್. ಎಸ್ ನಮ್ಮ ಶಾಖೆಗಲ್ಲಿನ ಸೂಚನಾ ಫಲಕದಲ್ಲಿ ಹಾಗೂ ನಮ್ಮವೆಬ್ ತಾಣದಲ್ಲಿ ಈ ಮಾಹಿತಿಯನ್ನು ಪ್ರದರ್ಶಿಸುತ್ತೇವೆ.

## 3.4 ದರ ಸೂಚಿ

### 3.4.1 ಶುಲ್ಕಗಳು ಮತ್ತು ದರಗಳು

ಎ. ನಮ್ಮ ಶುಲ್ಕ ಮತ್ತು ನಾನಾ ಸೇವೆಗಳ ಸೇವಾ ಶುಲ್ಕಗಳಿಗೆ. ಬ್ಯಾಂಕಿನ ಆಡಳಿತ ಮಂಡಲಿಯಿಂದ ಅಧಿಕೃತವಾಗಿ ನೇಮಕಗೊಂಡ ಯಾವುದೇ ಸಕ್ಷಮ ಪ್ರಾಧಿಕಾರವು ಅಂಗೀಕಾರ ನೀಡುವುದನ್ನು ಖಚಿತಪಡಿಸಿಕೊಳ್ಳುತ್ತೇವೆ ಮತ್ತು ಅವುಗಳು ಸಮಾನ ವರ್ಗದ ಗ್ರಾಹಕರುಗಳಿಗೆ ದುಬಾರಿಯಾಗದಂತೆ ಹಾಗೂ ತಾರತಮ್ಯವಿಲ್ಲದೇ ಇರುವುದನ್ನೂ ಸಹಾ ಖಚಿತಪಡಿಸಿಕೊಳ್ಳುತ್ತೇವೆ.

ಬಿ. ನಮ್ಮ ದರ ಪಟ್ಟಿಯನ್ನು ನಾವು ನಮ್ಮ ವೆಬ್ ತಾಣದಲ್ಲಿ ಪ್ರಕಟಿಸುತ್ತೇವೆ ಮತ್ತು ಅದರ ಪ್ರತಿಯನ್ನು ನಮ್ಮ ಎಲ್ಲಾ ಶಾಖೆಗಳಲ್ಲೂ ತಮ್ಮ ಅವಗಾಹನೆಗಾಗಿ ಇಟ್ಟಿರುತ್ತೇವೆ. ಶಾಖೆಯಲ್ಲಿ ದರಪಟ್ಟಿ ದೊರಕುತ್ತವೆ ಎಂಬ ಸೂಚನೆಯನ್ನು ಶಾಖೆಯಲ್ಲಿ ಪ್ರದಶಿಸುತ್ತೇವೆ.

ಸಿ. ನೀವು ಆಯ್ಕೆ ಮಾಡಿಕೊಂಡ ಯಾವುದೇ ಸೇವೆ ಮತ್ತು ಉತ್ಪನ್ನಗಳ ವಿಚಾರದಲ್ಲಿ

ಷರತ್ತು ಮತ್ತು ನಿಬಂಧನೆಗಳ ಉಲ್ಲಂಘನೆಯಾದಲ್ಲಿ, ಅವುಗಳನ್ನು ಪಾಲಿಸದೇ ಹೋದರೆ ವಿಧಿಸಲಾಗುವ ದಂಡಗಳ ಬಗೆಗಿನ ಮಾಹಿತಿಯನ್ನೂ ನಾವು ನಿಮಗೆ ನೀಡುತ್ತೇವೆ.

### 3.4.2 ಶುಲ್ಕಗಳು ಮತ್ತು ದರಗಳಲ್ಲಿನ ಬದಲಾವಣೆಗಳು

ನಾವು ಈ ದರಗಳಲ್ಲಿ ಯಾವುದನ್ನೇ ಹೆಚ್ಚಿಸಿದ ಪಕ್ಷದಲ್ಲಿ ಅಥವಾ ಹೊಸ ದರವನ್ನು ಅನ್ವಯಿಸಿದ ಪಕ್ಷದಲ್ಲಿ ಪರಿಷ್ಕೃತ ದರಗಳು ಅನ್ವಯವಾಗುವ ದಿನಾಂಕದ ಒಂದು ತಿಂಗಳ ಮೊದಲು ಸೂಚನೆಯನ್ನು ನೀಡಲಾಗುವುದು. ಈ ಸೂಚನೆಗಳನ್ನು ಲೆಕ್ಕ ವಿವರಣಾ ಪಟ್ಟಿ/ ಎಸ್.ಎಂ.ಎಸ್/ ಶಾಖೆಗಳ ಸೂಚನಾ ಫಲಕಗಳಲ್ಲಿ ಹಾಗೂ ನಮ್ಮ ವೆಬ್ ತಾಣದಲ್ಲಿ ಪ್ರದರ್ಶಿಸಲಾಗುವುದು

### 3.5 ನಿಬಂಧನೆಗಳು ಮತ್ತು ಷರತ್ತುಗಳು

ಎ. ನೀವು ಒದಗಿಸುವಂತೆ ಕೇಳಲಾದ ಸೇವೆಗಳ ಸಂಬಂಧ ನಿಬಂಧನೆಗಳು ಮತ್ತು ಷರತ್ತುಗಳನ್ನು ತಿಳಿಸುತ್ತೇವೆ.

ಬಿ. ಎಲ್ಲಾ ನಿಬಂಧನೆಗಳು ಮತ್ತು ಷರತ್ತುಗಳು ನ್ಯಾಯ ಸಮ್ಮತವಾಗಿರುತ್ತವೆ ಮತ್ತು ಹೊಣೆಗಾರಿಕೆಗಳು ಹಾಗೂ ಬಾಧ್ಯತೆಗಳ ಸ್ಪಷ್ಟ ಉಲ್ಲೇಖಗಳಿರುತ್ತವೆ ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಸರಳ ಹಾಗೂ ಸುಲಭವಾಗಿ ಓದಬಹುದಾಗಿರುತ್ತದೆ.

### 3.5.1 ನಿಬಂಧನೆಗಳು ಮತ್ತು ಷರತ್ತುಗಳಿಗೆ ಬದಲಾವಣೆಗಳು

ಎ. ಷರತ್ತುಗಳು ಮತ್ತು ನಿಬಂಧನೆಗಳಲ್ಲಿನ ಬದಲಾವಣೆಗಳು ಆದಾಗ ಈ ಕೆಳಗಿನ ಯಾವುದೇ ಮಾಧ್ಯಮದ ಮೂಲಕ ಪರಿಷ್ಕೃತ ದರಗಳ ಅನ್ವಯವಾಗುವ ದಿನಾಂಕದ ಒಂದು ತಿಂಗಳ ಮೊದಲು ಸೂಚನೆ ನೀಡಲಾಗುವುದು

i. ಪತ್ರ ವ್ಯವಹಾರ

ii. ವಿವರಣಾ ಪಟ್ಟಿ

iii. ಎಸ್.ಎಮ್.ಎಸ್.ಗಳು

iv. ಇ–ಅಂಚೆ

ಈ ಮಾಹಿತಿಯನ್ನು ಶಾಖೆಗಳ ಸೂಚನಾ ಫಲಕಗಳಲ್ಲಿ ಮತ್ತು ನಮ್ಮ ವೆಬ್ ತಾಣದಲ್ಲಿ ಪ್ರದರ್ಶಿಸಲಾಗುವುದು

ಬಿ. ಸಾಮಾನ್ಯವಾಗಿ ಒಂದು ತಿಂಗಳ ಸೂಚನೆಯನ್ನು ನೀಡಿ ಮುಂದೆ ಸೂಚಿಸುವ ದಿನಾಂಕದಿಂದಲೇ ಬದಲಾವಣೆಗಳನ್ನು ಮಾಡಲಾಗುವುದು.

ಸಿ. ಸೂಚನೆಯಿಲ್ಲದೆ ನಾವು ಯಾವುದೇ ಬದಲಾವಣೆಯನ್ನು ಮಾಡಿದ್ದರೆ, 30 ದಿನಗಳೊಳಗೆ ಬದಲಾವಣೆಯ ಸೂಚನೆಯನ್ನು ನೀಡುತ್ತೇವೆ. ಇಂತಹ ಬದಲಾವಣೆ ನಿಮಗೆ ಅನುಕೂಲಕರವಾಗಿರದಿದ್ದರೆ 60 ದಿನಗಳ ಒಳಗೆ ಮತ್ತು ಯಾವ ಸೂಚನೆಯನ್ನು ನೀಡದೆ ನಿಮ್ಮ ಖಾತೆಯನ್ನು ಮುಚ್ಚಬಹುದು ಅಥವಾ ಪರಿಷ್ಕೃತ ದರ ಅಥವಾ ಬಡ್ಡಿಯಿಲ್ಲದೇ ಮತ್ತೊಂದು ಸೇವೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಡಿ. ನಿಬಂಧನೆ ಮತ್ತು ಷರತ್ತುಗಳಲ್ಲಿ ಕಾಲಕಾಲಕ್ಕೆ ಆದ ಬದಲಾವಣೆಗಳನ್ನು ನಾವು ನಮ್ಮ ವೆಬ್ ತಾಣದಲ್ಲಿ ತಕ್ಷಣವೇ ಸೇರಿಸುತ್ತೇವೆ. ಕೋರಿಕೆಯ ಮೇರೆಗೆ ಹೊಸ ಷರತ್ತು ಮತ್ತು ನಿಬಂಧನೆಗಳ ಪ್ರತಿಯನ್ನು ಅಥವಾ ಬದಲಾವಣೆಯ ಸಾರಾಂಶವನ್ನು ನೀಡುತ್ತೇವೆ.

## 4. ಜಾಹೀರಾತು, ಮಾರುಕಟ್ಟೆ ಚಟುವಟಿಕೆಗಳು ಮತ್ತು ಮಾರಾಟ

ಎ. ಎಲ್ಲ ಜಾಹೀರಾತು ಮತ್ತು ಬಳಕೆ ಉತ್ತೇಜನ ಸಂಬಂಧಿ ಸಾಹಿತ್ಯವು ಸ್ಪಷ್ಟವಿರುತ್ತದೆ ಮತ್ತು ದಾರಿ ತಪ್ಪಿಸುವಂತಿರುವುದಿಲ್ಲ, ಎಂಬುದನ್ನು ಖಚಿತಪಡಿಸಿಕೊಳ್ಳುತ್ತೇವೆ.

ಬಿ. ಯಾವುದೇ ಮಾಧ್ಯಮ ಮತ್ತು ಬಳಕೆ ಉತ್ತೇಜನ ಸಂಬಂಧಿ ಸಾಹಿತ್ಯವು ಯಾವುದೇ ಜಾಹೀರಾತು ಬ್ಯಾಂಕಿಂಗ್ ಸೇವೆ ಅಥವಾ ಉತ್ಪನ್ನವೊಂದರತ್ತ ಗಮನ ಸೆಳೆಯುವಂತಿದ್ದು ಮತ್ತು ಬಡ್ಡಿ ದರದ ಉಲ್ಲೇಖವನ್ನು ಒಳಗೊಂಡಿದ್ದರೆ, ಇತರೇ ದರಗಳು ಮತ್ತು ಶುಲ್ಕಗಳು ಅನ್ವಯವಾಗುತ್ತವೆಯೇ ಎನ್ನುವುದನ್ನು ತಿಳಿಸುತ್ತೇವೆ ಮತ್ತು ಕೋರಿಕೆಯ ಮೇರೆಗೆ ಹೊಸ ನಿಬಂಧನೆಗಳು ಮತ್ತು ಷರತ್ತುಗಳ ಮಾಹಿತಿಗಳನ್ನು ನೀಡುತ್ತೇವೆ.

ಸಿ. ಬೆಂಬಲ ಸೇವೆಯನ್ನು ಒದಗಿಸಲು ನಾವು ಮೂರನೇ ಪಕ್ಷಕಾರರ ಸೇವೆಯನ್ನು ಪಡೆದ ಸಂದರ್ಭದಲ್ಲಿ, ಅಂತಹ ಮೂರನೇ ಪಕ್ಷಕಾರರು ನಿಮ್ಮ ವೈಯಕ್ತಿಕ ಮಾಹಿತಿಯ ನಿರ್ವಹಣೆಯಲ್ಲಿ (ಅಂತಹ ಮಾಹಿತಿ ಅವರಿಗೆ ನೀಡಿದ್ದಲ್ಲಿ) ನಾವು ವಹಿಸುವಷ್ಟೇ ಗೌಪ್ಯತೆ ಹಾಗೂ ಭದ್ರತೆಯನ್ನು ಕಾಯ್ದುಕೊಳ್ಳಬೇಕೆಂಬುದನ್ನು ನಾವು ಅಪೇಕ್ಷಿಸುತ್ತೇವೆ.

ಡಿ. ನೀವು ಬಳಕೆ ಮಾಡುವ ನಮ್ಮ ಉತ್ಪನ್ನಗಳ ನಾನಾ ಲಕ್ಷಣಗಳ ಬಗ್ಗೆ ನಾವು ಕಾಲಕಾಲಕ್ಕೆ ನಿಮಗೆ ಇ–ಅಂಚೆ/ ಎಸ್ ಎಮ್ ಎಸ್ ಮೂಲಕ ಅಥವಾ ದೂರವಾಣಿ ಮೂಲಕ ತಿಳಿಸಬಹುದು. ನಮ್ಮ ಇತರ ಉತ್ಪನ್ನಗಳ/ ಸೇವೆಗಳ ವಿಚಾರವಾಗಿ ಬಳಕೆ ಉತ್ತೇಜನಾ ಸಂಬಂಧಿ ಸಾಹಿತ್ಯಗಳನ್ನು ಪಡೆಯಲು ಮಾಹಿತಿಯನ್ನು ನೀವು "ಕರೆ ಮಾಡಬೇಡಿ" ಸೇವೆಗೆ ನೋಂದಾಯಿಸಿಕೊಳ್ಳದಿದ್ದರೆ ಮಾತ್ರ ನಿಮಗೆ ನೀಡಲಾಗುವುದು

ಇ. ನಮ್ಮ ಉತ್ಪನ್ನ / ಸೇವೆಗಳ ಮಾರಾಟ ಚಟುವಟಿಕೆಗಳಿಗಾಗಿ ನಾವು ಬಳಸಿಕೊಳ್ಳುವ ನೇರ ಮಾರಾಟ ಏಜೆನ್ಸಿಗಳಿಗಾಗಿ ನಾವು ಒಂದು ಆಚಾರ ಸಂಹಿತೆಯನ್ನು ರೂಪಿಸಿದ್ದೇವೆ. ಇದರಲ್ಲಿ ಅನ್ಯ ವಿಚಾರಗಳೊಂದಿಗೆ, ಅವರು ವೈಯಕ್ತಿಕವಾಗಿ ಅಥವಾ ಫೋನ್ ಮೂಲಕ ನಮ್ಮ ಉತ್ಪನ್ನಗಳ ನೇರ ಮಾರಾಟಕ್ಕಾಗಿ ಸಂಪರ್ಕಿಸಿದಾಗ ಅವರು ತಮ್ಮ ಗುರುತು ಪರಿಚಯ ನೀಡಬೇಕಾಗುತ್ತದೆ. ನಮ್ಮ ಪರವಾಗಿ ವ್ಯವಹರಿಸುವ ಅಥವಾ ನಮ್ಮ ಉತ್ಪನ್ನ ಮಾರಾಟ ಮಾಡುವ, ನಮ್ಮ ಪರವಾಗಿ ಯಾವುದೇ ಮೂರನೇ ಪಕ್ಷಕಾರ ಅಥವಾ ಏಜೆಂಟ್, ಸಂಹಿತೆಯಡಿಯಲಿ ಬರುವ ಎಲ್ಲಾ ಉತ್ಪನ್ನ ಹಾಗೂ ಸೇವೆಗಳ ಸಂಬಂಧ, ಈ ಸಂಹಿತೆಯನ್ನು ಪಾಲಿಸುವುದನ್ನು ಖಚಿತಪಡಿಸಿಕೊಳ್ಳುತ್ತೇವೆ.

ಎಫ್. ನಮ್ಮ ಪ್ರತಿನಿಧಿ/ ಕೊರಿಯರ್ ಅಥವಾ ಏಜೆಂಟರು ಯಾವುದೇ ಅನುಚಿತ ವರ್ತನೆಯಲ್ಲಿ ತೊಡಗಿದ್ದರೆ ಅಥವಾ ಈ ಕೋಡ್‌ನ್ನು ಉಲ್ಲಂಘಿಸುತ್ತಿದ್ದಾರೆ ಎಂಬ ಯಾವುದೇ ದೂರು ನಿಮ್ಮಿಂದ ಬಂದ ಪಕ್ಷದಲ್ಲಿ ಈ ವಿಚಾರದ ತನಿಖೆಗಾಗಿ ಮತ್ತು ದೂರನ್ನು ನಿರ್ವಹಿಸುವ ಸಲುವಾಗಿ ಮತ್ತು ನಷ್ಟದ ಭರ್ತಿಗಾಗಿ ನಮ್ಮ ನಷ್ಟ ಪರಿಹಾರ ನೀತಿಯಂತೆ ಸಮರ್ಪಕ ಕ್ರಮ ತೆಗೆದುಕೊಳ್ಳುತ್ತೇವೆ.

ಜಿ. ನಮ್ಮ ಪರವಾಗಿ ವ್ಯವಹರಿಸುವ ಯಾವುದೇ ಮೂರನೇ ಪಕ್ಷಕಾರ ಅಥವಾ ನಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಯಾವುದೇ ಏಜಂಟರು ಮಾರಾಟದ ನಂತರ ಪಡೆಯುವ ಶುಲ್ಕ ಅಥವಾ ದಲ್ಲಾಳಿ ರುಸುಮನ್ನು ಬಹಿರಂಗಪಡಿಸುವುದನ್ನು ಖಚಿತ ಪಡಿಸಿಕೊಳ್ಳುತ್ತೇವೆ.

## 5. ಖಾಸಗಿತನ ಮತ್ತು ಗೌಪ್ಯತೆ

ಎ. ನಾವು ನಿಮ್ಮ ಎಲ್ಲ ವೈಯಕ್ತಿಕ ಮಾಹಿತಿಯನ್ನು ಖಾಸಗಿಯಾಗಿ ಮತ್ತು ಗೌಪ್ಯವಾಗಿ ಇಡುತ್ತೇವೆ. ನೀವು ನಮ್ಮೊಂದಿಗೆ ವ್ಯವಹಾರವನ್ನು ಸ್ಥಗಿತಗೊಳಿಸಿದ್ದಾಗಲೂ ಮತ್ತು ನಾವು ಕೆಳಗಿನ ಸೂತ್ರ ಮತ್ತು ನೀತಿಗಳಿಗನುಸಾರವಾಗಿ ಮಾರ್ಗದರ್ಶನಗಳ ಅನುಸಾರವಾಗಿ ನಡೆದುಕೊಳ್ಳುತ್ತೇವೆ.

ಬಿ. ಕೆಳಗೆ ನೀಡಲಾಗಿರುವ ವಿಶೇಷ ಪ್ರಕರಣಗಳನ್ನು ಹೊರತುಪಡಿಸಿ, ನಮ್ಮ ಗುಂಪಿನಲ್ಲಿರುವ ಇತರ ಕಂಪೆನಿಗಳೂ ಸೇರಿದಂತೆ, ಬೇರೆ ಯಾರಿಗೂ ನಾವು ನಿಮ್ಮ ಖಾತೆಗಳಿಗೆ ಸಂಬಂಧಪಟ್ಟ ಮಾಹಿತಿ ಅಥವಾ ದತ್ತಾಂಶವನ್ನು, ಅದನ್ನು ನೀವೇ ಕೊಟ್ಟಿದ್ದರೂ ಅಥವಾ ಕೊಡದಿದ್ದರೂ ಬಹಿರಂಗಪಡಿಸುವುದಿಲ್ಲ:

i. ಕಾನೂನಿಗೆ ಅನುಗುಣವಾಗಿ ನಾವು ಮಾಹಿತಿಯನ್ನು ನೀಡಬೇಕಾದರೆ

ii. ಮಾಹಿತಿಯನ್ನು ಬಹಿರಂಗಪಡಿಸುವುದು ಸಾರ್ವಜನಿಕರ ವಿಚಾರದಲ್ಲಿ ನಮ್ಮ ಕರ್ತವ್ಯವಾಗಿದ್ದರೆ

iii. ನಾವ ನಮ್ಮ ಹಿತರಕ್ಷಣೆಗಾಗಿ ಮಾಹಿತಿಯನ್ನು ನೀಡಬೇಕಾದರೆ (ಉದಾಹರಣೆ ಗಾಗಿ, ವಂಚನೆಯನ್ನು ತಡೆಗಟ್ಟಲು). ಆದರೆ ಈ ಮಾಹಿತಿಯನ್ನು ನಾವು ಮಾರುಕಟ್ಟೆ ಚಟುವಟಿಕೆಗಳಿಗಾಗಿ, ನಮ್ಮ ಗುಂಪಿನಲ್ಲಿರುವ ಇತರ ಕಂಪೆನಿಗಳೂ ಸೇರಿದಂತೆ, ಬೇರೆ ಯಾರಿಗೂ ನಿಮ್ಮ ಬಗ್ಗೆ ಅಥವಾ ನಿಮ್ಮ ಖಾತೆಗಳ ಬಗ್ಗೆ (ನಿಮ್ಮ ಹೆಸರು ಮತು ವಿಳಾಸ ಸೇರಿದಂತೆ) ಮಾಹಿತಿಯನ್ನು ನೀಡಲು ಇದನ್ನೊಂದು ನಿಮಿತ್ತವಾಗಿ ಬಳಸಿಕೊಳ್ಳುವುದಿಲ್ಲ.

iv. ನೀವು ಮಾಹಿತಿಯನ್ನು ಬಹಿರಂಗಪಡಿಸುವಂತೆ ನಮ್ಮನ್ನು ಕೇಳಿಕೊಂಡರೆ ಅಥವಾ ನಮಗೆ ನಿಮ್ಮ ಲಿಖಿತ ಅನುಮತಿ ಇದ್ದರೆ

v. ನಿಮ್ಮ ಬಗೆಗೆ ನಾವು "ಬ್ಯಾಂಕ್ ಪರಿಚಯ" ನೀಡಬೇಕಾದರೆ, ನಾವು ಅದನ್ನು ನೀಡುವ ಮೊದಲು ನಿಮ್ಮ ಲಿಖಿತ ಅನುಮತಿಯ ಅಗತ್ಯವಿದೆ.

ಸಿ. ನೀವು ನಮಗೆ ಅನುಮತಿ ನೀಡದ ಹೊರತು ನಮ್ಮನ್ನೂ ಸೇರಿದಂತೆ ಬೇರೆ ಯಾರಿಗೂ ನಿಮ್ಮ ವೈಯಕ್ತಿಕ ಮಾಹಿತಿಯನ್ನು ಮಾರ್ಕೆಟಿಂಗ್ ಉದ್ದೇಶಗಳ ಸಲುವಾಗಿ ಬಳಕೆಗೆ ನಾವು ಅವಕಾಶ ನೀಡುವುದಿಲ್ಲ.

## 5.1 ಸಾಲ ಮಾಹಿತಿ ಏಜೆನ್ಸಿಗಳು

### ನೀವು ಸಾಲ ಸೌಲಭ್ಯಕ್ಕೆ ಅರ್ಜಿ ಹಾಕಿದಾಗ

ಎ. ಸಾಲಮಾಹಿತಿ ಏಜೆನ್ಸಿಗಳ (ಸಿ.ಐ.ಸಿಗಳು) ಪಾತ್ರದ ಬಗ್ಗೆ ಹಾಗೂ ಅವುಗಳ ಮೇಲೆ ನಮಗಿರುವ ನಿಯಂತ್ರಣಗಳ ಬಗ್ಗೆ ತಿಳಿಸುತ್ತೇವೆ ಹಾಗೂ ಅವುಗಳು ನೀಡುವ ಮಾಹಿತಿಯು ನೀವು ಪಡೆಯುವ ಸಾಲ ಸಾಮರ್ಥ್ಯದ ಮೇಲೆ ಬೀರುವ ಪರಿಣಾಮದ ಬಗ್ಗೆಯೂ ಸಹ ವಿವರಿಸುತ್ತೇವೆ.

ಬಿ. ನಿಮ್ಮ ಕೋರಿಕೆಯ ಮೇರೆಗೆ ಮತ್ತು ನಿಗದಿತ ಶುಲ್ಕ ಪಡೆದು ಸಿ.ಐ.ಸಿ ಯಿಂದ ಲಭ್ಯವಾದ ಸಾಲಮಾಹಿತಿಯ ಪ್ರತಿಯನ್ನು ನಿಮಗೆ ಒದಗಿಸುತ್ತೇವೆ.

ಸಿ. ನಮ್ಮಿಂದ ಪಡೆದ ಸಾಲಗಳ ಮಾಹಿತಿಯನ್ನು ನಾವು ಸಾಲ ಮಾಹಿತಿ ಏಜೆನ್ಸಿಗಳಿಗೆ ತಿಂಗಳಿಗೊಮ್ಮೆ ವರದಿ ಮಾಡುತ್ತೇವೆ.

ಡಿ. ಸಾಲ ಮಾಹಿತಿ ಏಜೆನ್ಸಿಗೆ ವರದಿ ಮಾಡುವ ಮಾಹಿತಿಯು ಈ ಕೆಳಗಿನ ಸಂದರ್ಭಗಳಲ್ಲಿ ನೀವು ನಮಗೆ ನೀಡಬೇಕಾದ ವೈಯಕ್ತಿಕ ಸಾಲದ ವಿವರಗಳನ್ನು ಹೊಂದಿರುತ್ತದೆ.

i. ನೀವು ಪಾವತಿ ಮಾಡುವಲ್ಲಿ ವಿಳಂಬ ಮಾಡಿದಾಗ

ii. ಕೊಡಬೇಕಾದ ಮೊತ್ತದ ಬಗ್ಗೆ ವಿವಾದವಿದ್ದರೆ

ಇ. ನಿಮ್ಮ ಸಾಲ ಖಾತೆಯಲ್ಲಿ ಕಂತು ಪಾವತಿ ತಪ್ಪಿದ್ದು ನಂತರದಲ್ಲಿ ಕ್ರಮಬದ್ಧ ಗೊಳಿಸಲ್ಪಟ್ಟಿದ್ದರೆ, ಈ ಮಾಹಿತಿಯನ್ನು ಸಾಲ ಮಾಹಿತಿ ಏಜೆನ್ಸಿಗೆ ನೀಡಲು ಮುಂದಿನ ತಿಂಗಳಿನ ವರದಿಯಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

ಎಫ್. ನಾವು ಸಾಲ ಸೌಲಭ್ಯ ಎಜೆನ್ಸಿಗಳಿಗೆ ನೀಡಲಾಗುವ, ನೀವು ನಮ್ಮಲ್ಲಿ ಪಡೆದ ಸಾಲಸೌಲಭ್ಯಗಳ ವಿವರಗಳನ್ನು, ನಿಮ್ಮ ಕೋರಿಕೆಯ ಮೇರೆಗೆ ನಿಮಗೆ ನೀಡುತ್ತೇವೆ.

## 6. ಬಾಕಿ ವಸೂಲಿ

ಎ. ನಾವು ನಿಮಗೆ ಸಾಲ ನೀಡುವಾಗ ನಿಮಗೆ ಮರುಪಾವತಿಯ ಪ್ರಕ್ರಿಯೆಯ ಬಗ್ಗೆ ಎಂದರೆ ಮೊತ್ತ, ಅವದಿ ಮತ್ತು ಮರುಪಾವತಿ ಕಂತುಗಳ ಅವಧಿಯ ವಿವರಗಳನ್ನು ತಿಳಿಸುತ್ತೇವೆ. ಆದಾಗ್ಯೂ ನೀವು ಮರುಪಾವತಿಯ ವೇಳಾಪಟ್ಟಿಯನ್ನು ಪಾಲಿಸದೇ ಇದ್ದಲ್ಲಿ, ದೇಶದ ಪ್ರಚಲಿತ ಕಾನೂನಿನಡಿಯಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಗಳಿಗ ಅನುಗುಣವಾಗಿ, ಬಾಕಿವಸೂಲಿಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಬಿ. ಬಾಕಿ ವಸೂಲಿಗಾಗಿ ಮತ್ತು ಶಿಸ್ತಿ ಮರು ಸ್ವಾಧೀನ ಹಾಗೂ ವಸೂಲಾತಿ ಏಜಂಟರುಗಳ ನೇಮಕಾತಿಗಾಗಿ ಮಂಡಳಿ ಅನುಮೋದಿತ ನೀತಿಯನ್ನು ಹೊಂದಿರುತ್ತೇವೆ.

ಸಿ. ವಸೂಲಾತಿ ಏಜಂಟರುಗಳನ್ನು ನೇಮಿಸಿಕೊಳ್ಳುವಾಗ ಎಲ್ಲ ಕಾನೂನು, ನಿಯಮಾವಳಿ ಮತ್ತು ಅನುಮತಿ ನೀಡುವುದಕ್ಕೆ ಇರುವಂತಹ ಮಾರ್ಗದರ್ಶನ ಹಾಗೂ ಷರತ್ತುಗಳೂ, ಪರವಾನಗಿ ಅಥವಾ ನೋಂದಣೀ ಮುಂತಾದವುಗಳನ್ನು ಪರಿಗಣಿಸುತ್ತೇವೆ.

ಡಿ. ವಸೂಲಾತಿ ಏಜಂಟರುಗಳು ತಮ್ಮ ಹೊಣೆಗಾರಿಕೆಯನ್ನು ಎಚ್ಚರಿಕೆಯಿಂದ ಮತ್ತು ಸೂಕ್ಷ್ಮವಾಗಿ ನಿರ್ವಹಿಸುವುದನ್ನು ನಾವು ಖಚಿತ ಪಡಿಸಿಕೊಳ್ಳುತ್ತೇವೆ. ಅವರುಗಳು ಹದ್ದುಮೀರಿ ವರ್ತಿಸದೇ ಇರುವುದನ್ನು ಖಚಿತ ಪಡಿಸಿಕೊಳ್ಳುತ್ತೇವೆ.

ಇ. ನಮ್ಮ ವಸೂಲಾತಿ ನೀತಿಯು ಸಭ್ಯತೆ, ನ್ಯಾಯ ಸಮ್ಮತ ಮತ್ತು ಮನವೊಲಿಕೆಯ ಮೇಲೆ ನಿಂತಿದೆ. ಗ್ರಾಹಕರ ನಂಬಿಕೆ ಮತ್ತು ದೀರ್ಘಕಾಲ ಸಂಬಂಧದಲ್ಲಿ ನಮಗೆ ನಂಬಿಕೆಯಿದೆ.

ಎಫ್. ನಿಮ್ಮ ಬಾಕಿ ಮೊತ್ತದ ಬಗ್ಗೆ ಸಂಪೂರ್ಣ ಮಾಹಿತಿ ನಿಮಗೆ ನೀಡುತ್ತೇವೆ. ಮತ್ತು ಬಾಕಿ ಪಾವತಿ ಬಗ್ಗೆ ಸಾಕಷ್ಟು ಮುಂಚಿತವಾಗಿ ಸೂಚನೆ ನೀಡುತ್ತೇವೆ.

ಜಿ. ನಮ್ಮ ತಪ್ಪಿನಿಂದ ನಿಮಗೆ ತೊಂದರೆಯಾಗದಂತೆ ಪಾವತಿ ತಪ್ಪಿದ ಪ್ರಕರಣಗಳನ್ನು ಏಜಂಟರುಗಳಿಗೆ ಒಪ್ಪಿಸುವ ಮೊದಲು ತಪಾಸಣಾ ವ್ಯವಸ್ಥೆ ಮಾಡಿರುತ್ತೇವೆ.

ಎಚ್. ನಿಮ್ಮ ವಿರುದ್ಧ ವಸೂಲಾತಿ ಪ್ರಕ್ರಿಯೆ ಪ್ರಾರಂಭಿಸುವ ಮುನ್ನ ನಿಮಗೆ ಪತ್ರ ಬರೆಯುತ್ತೇವೆ ಮತ್ತು ನಿಮ್ಮ ಪ್ರಕರಣ ವನ್ನು ಒಪ್ಪಿಸುವ ಏಜನ್ಸಿ ಹೆಸರು ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ತಿಳಿಸುತ್ತೇವೆ

ಐ. ನಾವು ಗೊತ್ತು ಪಡಿಸಿದ ವಸೂಲಾತಿ ಸಂಸ್ಥೆ /ಕಂಪನಿಗಳ ವಿವರಗಳನ್ನು ನಮ್ಮ ವೆಬ್ ತಾಣದಲ್ಲಿ ಪ್ರಕಟಿಸುತ್ತೇವೆ

ಜೆ. ನಿಮ್ಮ ಕೋರಿಕೆಯ ಮೇರೆಗೆ ನಿಮಗೆ ಸಂಬಂಧಿಸಿದ ವಸೂಲಾತಿ ಏಜನ್ಸಿ /ಕಂಪನಿಯ ವಿವರಗಳನ್ನು ನಮ್ಮ ಶಾಖೆಗಳಲ್ಲಿ ನೀಡುತ್ತೇವೆ.

ಕೆ. ವಸೂಲಾತಿಗಾಗಿ ನಮ್ಮ ಪರವಾಗಿ ಬರುವ ಸಿಬ್ಬಂದಿ ಅಥವಾ ನಮ್ಮಿಂದ ಅಧಿಕೃತ ಗೊಳಿಸಲ್ಪಟ್ಟ ವ್ಯಕ್ತಿ ಆತ / ಆಕೆ ತನ್ನನ್ನು ಪರಿಚಯ ಮಾಡಿಕೊಳ್ಳುವರು ಮತ್ತು ನಮ್ಮಿಂದ ನೀಡಲ್ಪಟ್ಟ ಅಧಿಕಾರ ಪತ್ರವನ್ನು ನಿಮಗೆ ತೋರಿಸುವರು ನಿಮ್ಮ ಕೋರಿಕೆಯ ಮೇರೆಗೆ ಆತ/ ಆಕೆ ಬ್ಯಾಂಕಿನಿಂದ ನೀಡಲ್ಪಟ್ಟ ಗುರುತು ಚೀಟಿ ಅಥವಾ ಅಧಿಕಾರ ಪತ್ರವನ್ನು ನಿಮಗೆ ತೋರಿಸುವರು.

## 6.1 ಭದ್ರತಾಸ್ತಿಗಳ ಮರು ಸ್ವಾಧೀನ ನೀತಿ

ಕಾನೂನಿಗೆ ಅನುಗುಣವಾಗಿ ಭದ್ರತಾಸ್ತಿಗಳ ಮರುಸ್ವಾಧೀನ ನೀತಿಯನ್ನು ಅನುಸರಿಸು ತ್ತೇವೆ. ಈ ನೀತಿಯನ್ನು ನಮ್ಮ ವೆಬ್ ತಾಣದಲ್ಲಿ ಪ್ರದರ್ಶಿಸಲಾಗುವುದು ಮತ್ತು ಇದರ ಪ್ರತಿಯನ್ನು ನಮ್ಮ ಶಾಖೆಗಳಲ್ಲಿ ಅವಗಾಹಿಸಬಹುದು.

# 7. ದೂರುಗಳು, ಕುಂದು ಕೊರತೆಗಳು ಮತ್ತು ಪ್ರತಿ ಅಭಿಪ್ರಾಯಗಳು (ಫೀಡ್‌ಬ್ಯಾಕ್)

## 7.1 ಆಂತರಿಕ ಕಾರ್ಯವಿಧಾನಗಳು

ಎ. ನೀವು ದೂರು ನೀಡಬೇಕಿದ್ದಲ್ಲಿ

i. ಇದನ್ನು ಹೇಗೆ ಮಾಡಬೇಕು?

ii. ದೂರನ್ನು ಎಲ್ಲಿ ಸಲ್ಲಿಸಬೇಕು?
ದೂರನ್ನು ಯಾರಿಗೆ ಸಲ್ಲಿಸಬೇಕು?

iii. ಎಂದು ಉತ್ತರವನ್ನು ನಿರೀಕ್ಷಿಸಬಹುದು?

iv. ನಿವಾರಣೋಪಾಯಗಳಿಗಾಗಿ ಯಾರನ್ನು ಸಂಪರ್ಕಿಸಬೇಕು?

v. ಫಲಿತಾಂಶದಿಂದ ನೀವು ಅಸಂತುಷ್ಟರಾಗಿದ್ದರೆ ಏನು ಮಾಡಬೇಕು?– ಇವೆಲ್ಲದರ ಬಗ್ಗೆ ನಾವು ನಿಮಗೆ ತಿಳಿಸುತ್ತೇವೆ.

ಬಿ. ನಮ್ಮ ಸಿಬ್ಬಂದಿಯು ನಿಮ್ಮ ಯಾವುದೇ ಪ್ರಶ್ನೆಗೆ ಉತ್ತರಿಸುತ್ತಾರೆ.

ಸಿ. ದೂರುಗಳನ್ನು ನ್ಯಾಯಸಮ್ಮತವಾಗಿ ಮತ್ತು ಶೀಘ್ರವಾಗಿ ಪರಿಹರಿಸುವುದಕ್ಕೆ ಇರುವ ನಮ್ಮ ಕಾರ್ಯವಿಧಾನದ ವಿವರಗಳನ್ನು ಎಲ್ಲಿ ಪಡೆಯಬಹುದು ಎಂಬುದನ್ನು ತಿಳಿಸುತ್ತೇವೆ.

ಡಿ. ನೀವು ಸಂಪರ್ಕಿಸಬೇಕಾದ ದೂರು ಸ್ವೀಕರಿಸುವ ಅಧಿಕಾರಿಯ ಹೆಸರನ್ನು ಶಾಖೆಗಳಲ್ಲಿ ಪ್ರದರ್ಶಿಸಲಾಗುವುದು. ಶಾಖಾ ಮಟ್ಟದಲ್ಲಿ ದೂರು ಇತ್ಯರ್ಥವಾಗದಿದ್ದಲ್ಲಿ ನೀವು ಸಂಪರ್ಕಿಸಬೇಕಾದ ನಮ್ಮ ಪ್ರಾದೇಶಿಕ /ವಲಯ ವ್ಯವಸ್ಥಾಪಕ/ಪ್ರಧಾನ ನೋಡಲ್ ಅಧಿಕಾರಿಗಳ ವಿಳಾಸವನ್ನು ಶಾಖೆಗಳಲ್ಲಿ ಪ್ರದರ್ಶಿಸಲಾಗುವುದು.

ಇ. ನಿಮ್ಮ ದೂರು ಲಿಖಿತರೂಪದಲ್ಲಿದ್ದರೆ, ನಿಮಗೆ ಸ್ವೀಕೃತಿಯನ್ನು/ಪ್ರತಿಕ್ರಿಯೆಯನ್ನು ಒಂದುವಾರದ ಒಳಗೆ ನೀಡಲು ಪ್ರಯತ್ನಿಸುತ್ತೇವೆ. ನಿಮ್ಮ ದೂರು ನಮ್ಮಿಂದ ನಿರ್ದಿಷ್ಟಪಡಿಸಿದ ಸಹಾಯವಾಣಿಯ ಸಂಖ್ಯೆಯ ಮೂಲಕ ಅಥವಾ ಗ್ರಾಹಕ ಸೇವಾ ಸಂಖ್ಯೆಯ ಮೂಲಕ ಸ್ವೀಕರಿಸಿದ್ದರೆ, ನಿಮಗೆ ದೂರು ಪ್ರಸ್ತಾಪ ಸಂಖ್ಯೆಯನ್ನು ನೀಡುತ್ತೇವೆ / ಮತ್ತು ನಂತರದ ಬೆಳವಣಿಗೆಗಳನ್ನು ಸಮುಚಿತ ಕಾಲಾವಧಿಯೊಳಗೆ ನಿಮಗೆ ತಿಳಿಸಲಾಗುವುದು.

ಎಫ್. ವಿಷಯವನ್ನು ಪರಿಶೀಲಿಸಿದ ತರುವಾಯ, ನಮ್ಮ ಅಂತಿಮ ಪ್ರತಿಕ್ರಿಯೆಯನ್ನು ತಿಳಿಸುತ್ತೇವೆ. ಅಥವಾ ಪ್ರತಿಕ್ರಿಯೆ ನೀಡಲು ಮತ್ತಷ್ಟು ಕಾಲಾವಕಾಶ ಏಕೆ ಬೇಕೆಂದು ವಿವರಿಸುತ್ತೇವೆ ಮತ್ತು ನಿಮ್ಮ ದೂರನ್ನು ಸ್ವೀಕರಿಸಿದ 30 ದಿನಗಳ ಒಳಗೆ ಇದನ್ನು ಬಗೆಹರಿಸಲು ಯತ್ನಿಸುತ್ತೇವೆ ಮತ್ತು ನಿಮಗೆ ಇನ್ನೂ ಸಮಾಧಾನವಾಗದಿದ್ದಲ್ಲಿ ದೂರನ್ನು ಮುಂದಕ್ಕೆ ತೆಗೆದುಕೊಂಡು ಹೋಗುವ ಬಗೆ ಹೇಗೆ ಎಂಬುದನ್ನೂ ತಿಳಿಸುತ್ತೇವೆ.

ಜಿ. ನಮ್ಮೊಂದಿಗೆ ದೂರು ದಾಖಲಿಸಿದ 30 ದಿನದೊಳಗೆ ನಮ್ಮಿಂದ ನಿಮಗೆ ತೃಪ್ತಿಕರ ಪ್ರತಿಕ್ರಿಯೆ ಸಿಗದಿದ್ದಲ್ಲಿ ಹಾಗೂ ನೀವು ಪರಿಹಾರೋಪಾಯವಾಗಿ ಬೇರೆ ಮಾರ್ಗಗಳನ್ನು ಅನುಸರಿಸಲು ಬಯಸಿದಲ್ಲಿ ಬ್ಯಾಂಕಿಂಗ್ ಲೋಕಪಾಲ ಯೋಜನೆಯನ್ವಯ ಭಾರತೀಯ ರಿಸರ್ವ್ ಬ್ಯಾಂಕಿನಿಂದ ನಿಯುಕ್ತ ಗೊಂಡಿರುವ ಬ್ಯಾಂಕಿಂಗ್ ಲೋಕಪಾಲರನ್ನು ಸಂಪರ್ಕಿಸಬಹುದು. ನಮ್ಮ ಸಿಬ್ಬಂದಿಯಿಂದ ಈ ವಿಧಾನದ ಬಗ್ಗೆ ವಿವರಣೆ ಪಡೆಯಬಹುದು.

## 7.2 ಬ್ಯಾಂಕಿಂಗ್ ಲೋಕಪಾಲರ ಯೋಜನೆ

ನಾವು ಬ್ಯಾಂಕಿಂಗ್ ಲೋಕಪಾಲರ ಯೋಜನೆಯನ್ನು ನಮ್ಮ ವೆಬ್ ತಾಣದಲ್ಲಿ ಪ್ರಕಟಿಸುತ್ತೇವೆ. ಕೋರಿಕೆಯ ಮೇರೆಗೆ ಪ್ರತಿಯನ್ನು ನಾಮ ಮಾತ್ರ ದರದಲ್ಲಿ ಒದಗಿಸಲಾಗುವುದು. ನಾವು, ಶಾಖೆಯು ಯಾವ ಬ್ಯಾಂಕಿಂಗ್ ಲೋಕಪಾಲರ ವ್ಯಾಪ್ತಿಯಲ್ಲಿ ಬರುವುದೋ ಅವರ ಹೆಸರು ಮತ್ತು ಸಂಪರ್ಕ ವಿವರಗಳನ್ನು ನಮ್ಮ ಶಾಖೆಯಲ್ಲಿ ಪ್ರದರ್ಶಿಸುತ್ತೇವೆ.

## 7.3 ಗ್ರಾಹಕ ಸಭೆಗಳು

ವಿಚಾರ ಹಾಗೂ ಸಲಹಾ ವಿನಿಮಯದ ಉದ್ದೇಶದಿಂದ ಗ್ರಾಹಕ ಸಭೆಗಳನ್ನು ನಾವು ಕಾಲ – ಕಾಲಕ್ಕೆ ಏರ್ಪಡಿಸುತ್ತೇವೆ.

## 7.4 ಶಾಖಾ ಮಟ್ಟದ ಗ್ರಾಹಕ ಸೇವಾ ಸಮಿತಿ ಸಭೆಗಳು

ನೀವು ಪಾಲ್ಗೊಳ್ಳಬಹುದಾದ ಮಾಸಿಕ ಶಾಖಾ ಮಟ್ಟದ ಗ್ರಾಹಕ ಸೇವಾ ಸಮಿತಿ ಸಭೆಗಳ ದಿನಾಂಕವನ್ನು ನಮ್ಮ ಶಾಖೆಗಳಲ್ಲಿ ಪ್ರದರ್ಶಿಸಲಾಗುವುದು. ನೀವು ಬಯಸಿದಲ್ಲಿ ಈ ಸಭೆಗಳಲ್ಲಿ ನೀವು ಪಾಲ್ಗೊಳ್ಳಬಹುದು.

## 8. ಉತ್ಪನ್ನಗಳು ಮತ್ತು ಸೇವೆಗಳು

### 8.1 ಠೇವಣಿ ಖಾತೆಗಳು

ಎ. ಸುಲಭ ಖಾತೆಯೂ ಸೇರಿದಂತೆ, ಉಳಿತಾಯ ಖಾತೆಗಳು, ಅವಧಿ ಠೇವಣಿಗಳು ಚಾಲ್ತಿ ಖಾತೆಯಂತಹ ವೈವಿಧ್ಯಮಯ ಖಾತೆಗಳನ್ನು ನಮ್ಮಲ್ಲಿ ತೆರೆಯಬಹುದು. ಈ ಕೆಳಗಿನ ರೀತಿಯಲ್ಲಿ ನೀವು ಅಂತಹ ಖಾತೆಗಳನ್ನು ತೆರೆಯಬಹುದು.

i. ವ್ಯಕ್ತಿಗತ

ii. ಜಂಟಿ

iii. ಜಂಟಿ (ಇಬ್ಬರಲ್ಲೊಬ್ಬರು ಅಥವಾ ಜೀವಂತವಿರುವವರು)

iv. ಜಂಟಿ (ಮೊದಲಿನವರು ಅಥವಾ ಜೀವಂತವಿರುವವರು )

v. ಜಂಟಿ (ನಂತರದವರು ಅಥವಾ ಜೀವಂತವಿರುವವರು)

vi. ಅಥವಾ ಇನ್ನಾವುದೇ ರೀತಿಯಲ್ಲಿ

ಬಿ. ಯಾವುದೇ ಕನಿಷ್ಠ ಶಿಲ್ಕು ಇಲ್ಲದ ಮೂಲಭೂತ ಉಳಿತಾಯ ಬ್ಯಾಂಕ್ ಖಾತೆ(ಬಿ. ಎಸ್. ಬಿ.ಡಿ) ಯನ್ನು ನಾವು ಎಲ್ಲ ಗ್ರಾಹಕರಿಗೂ ಒದಗಿಸುತ್ತೇವೆ. ಯಾವುದೇ ಶುಲ್ಕವಿಲ್ಲದೇ ಕನಿಷ್ಠ ಸಾಮಾನ್ಯ ಸೌಲಭ್ಯಗಳನ್ನು ಈ ಖಾತೆಯೊಂದಿಗೆ ನೀಡಲಾಗುವುದು/ಒದಗಿಸಲಾಗುವುದು.ಖಾತೆ ತೆರೆಯುವ ಸಂದರ್ಭದಲ್ಲಿ ಈ ಎಲ್ಲ ವಿವರಗಳನ್ನು ನೀಡುವಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಲಾಗುವುದು.

ಸಿ. ಈ ಮೇಲಿನ ಖಾತೆಗಳನ್ನು ನಾಮನಿರ್ದೇಶನ ಸೌಲಭ್ಯದೊಂದಿಗೂ ತೆರೆಯಬಹುದು. ಖಾತೆ ತೆರೆಯುವ ಅರ್ಜಿ ನಮೂನೆಯಲ್ಲಿ ನಾಮ ನಿರ್ದೇಶನದ ಆಯ್ಕೆ ಹಾಗೂ ನಾಮನಿರ್ದೇಶಿತ ವ್ಯಕ್ತಿಯ ಹೆಸರುಗಳನ್ನು ಪಾಸ್ ಬುಕ್/ ಖಾತಾ ವಿವರಣಾ ಪಟ್ಟಿ/ ಎಫ್.ಡಿಆರ್‌ಗಳಲ್ಲಿ ನಮೂದಿಸಬಹುದಾಗಿದೆ. ಖಾತೆ ತೆರೆಯುವ ಸಂದರ್ಭದಲ್ಲಿ ನಾಮ ನಿರ್ದೇಶನದ ಸೌಲಭ್ಯಗಳು ಹಾಗೂ ಸಂಬಂಧಪಟ್ಟ ಖಾತೆಗಳ ಪರಿಣಾಮಗಳ ಬಗ್ಗೆ ವಿವರಿಸಲಾಗುವುದು.

ಡಿ. ನಿಮ್ಮ ನಾಮ ನಿರ್ದೇಶನ ವಿವರಗಳನ್ನು ಸ್ವೀಕರಿಸಿದ ಬಗ್ಗೆ ತಿಳಿಸಿ, ಪಾಸ್ ಪುಸ್ತಕ/ ಖಾತಾ ಲೆಕ್ಕ ವಿವರಣೆ ಪಟ್ಟಿ/ ನಿಶ್ಚಿತ ಠೇವಣಿ ಪ್ರಮಾಣಪತ್ರಗಳ ಮೇಲೆ

ನಾಮನಿರ್ದೇಶನ ಮಾಹಿತಿಯನ್ನು ನಮೂದಿಸುತ್ತೇವೆ. ಕೋರಿಕೆಯ ಮೇರೆಗೆ ನಾಮನಿರ್ದೇಶಿತ ವ್ಯಕ್ತಿಯ ಹೆಸರನ್ನೂ ತಿಳಿಸಲಾಗುವುದು.

ಇ. ಲಿಕ್ವಿಡ್ ಡೆಪಾಸಿಟ್ ಸೌಲಭ್ಯ, ಸ್ವೀಪ್ ಖಾತೆ ಮತ್ತು ನಮ್ಮಿಂದ ನೀಡಲ್ಪಡುವ ಇದೇ ರೀತಿಯ ಉತ್ಪನ್ನಗಳು ಮತ್ತು ಅದರ ಸಂಬಂಧದ ತೊಡಕುಗಳು ಮತ್ತು ಪಾಲಿಸಬೇಕಾದ ಕಾರ್ಯವಿಧಾನ ಬಗ್ಗೆಯೂ ಸಹ ಖಾತೆ ತೆರೆಯುವ ಸಮಯದಲ್ಲಿ ತಿಳಿಸಲಾಗುವುದು.

### 8.1.1 ಖಾತೆ ತೆರೆಯುವಿಕೆ ಮತ್ತು ಠೇವಣಿ ಖಾತೆಯ ನಿರ್ವಹಣೆ

ಯಾವುದೇ ಖಾತೆಯನ್ನು ತೆರೆಯುವ ಮುನ್ನ :

ಎ. "ನಿಮ್ಮ ಗ್ರಾಹಕರ ಬಗ್ಗೆ ತಿಳಿದುಕೊಳ್ಳಿ" (ಕೆ.ವೈ.ಸಿ) ಬಗ್ಗೆ ಬ್ಯಾಂಕಿನ ಮಾರ್ಗದರ್ಶಿ ಸೂತ್ರಗಳನ್ನು ಶ್ರದ್ಧೆಯಿಂದ ಪಾಲಿಸುತ್ತೇವೆ.

ಬಿ. ಹಾಗೆ ಮಾಡಲು, ನಿಮ್ಮನ್ನು ಅಗತ್ಯ ದಾಖಲೆ ಅಥವಾ ಸಾಕ್ಷ್ಯಗಳನ್ನು ನೀಡಲು ಅಥವಾ ಒದಗಿಸುವಂತೆ ಕೇಳುತ್ತೇವೆ.

ಸಿ. ನಾವು ಕೇವಲ "ನಿಮ್ಮ ಗ್ರಾಹಕರ ಬಗ್ಗೆ ತಿಳಿದುಕೊಳ್ಳಿ", ಕಪ್ಪುಹಣ ಪ್ರತಿಬಂಧಕಕ್ಕೆ ಅಥವಾ ಇನ್ನಾವುದೇ ಶಾಸನಬದ್ಧ ಅಗತ್ಯಗಳಿಗೆ ಬೇಕಾದ ಮಾಹಿತಿಯನ್ನಷ್ಟೇ ಪಡೆಯುತ್ತೇವೆ. ಒಂದು ವೇಳೆ ಯಾವುದೇ ಹೆಚ್ಚುವರಿ ಮಾಹಿತಿ ಕೇಳಬೇಕಿದ್ದಲ್ಲಿ, ಅದನ್ನು ಪ್ರತ್ಯೇಕವಾಗಿಯೇ ಕೇಳಲಾಗುವುದು ಮತ್ತು ಅಂತಹ ಹೆಚ್ಚುವರಿ ಮಾಹಿತಿ ಪಡೆಯುವ ಉದ್ದೇಶವನ್ನು ಸ್ಪಷ್ಟವಾಗಿ ತಿಳಿಸುತ್ತೇವೆ. ಅಂತಹ ಮಾಹಿತಿಯನ್ನು ಒದಗಿಸುವುದು ಸ್ವಯಂ ಪ್ರೇರಿತವಾಗಿರುತ್ತದೆ. ನಿಮ್ಮ ಮಾಹಿತಿಯನ್ನು ಗುಪ್ತವಾಗಿಡಲಾಗುತ್ತದೆ. ಆದರೆ ಕಾನೂನು ಜಾರಿಗೊಳಿಸುವ ಏಜನ್ಸಿಗಳಿಗೆ/ ಬ್ಯಾಂಕಿಂಗ್ ನಿಯಂತ್ರಕರಿಗೆ ಅಗತ್ಯವಿದ್ದಲ್ಲಿ ಅವರಿಗೆ ಮಾಹಿತಿ ನೀಡಲಾಗುವುದು.

ಡಿ. ನಿಮಗೆ ಖಾತಾ ತೆರೆಯುವ ನಮೂನೆಗಳನ್ನು ಮತ್ತು ಇತರೇ ಸಾಮಗ್ರಿಗಳನ್ನು ಒದಗಿಸುತ್ತೇವೆ. ಅದು ಒದಗಿಸಬೇಕಾದ ಅಗತ್ಯ ಮಾಹಿತಿ ವಿವರಗಳನ್ನು ಮತ್ತು ಪರಿಶೀಲನೆಗಾಗಿ ನೀಡಬೇಕಾದ ದಾಖಲಾತಿಗಳ ಮತ್ತು ಅಥವಾ ನಿಮ್ಮ ಗ್ರಾಹಕರ ಬಗ್ಗೆ ತಿಳಿದುಕೊಳ್ಳಿ ಬಗ್ಗೆ ದಾಖಲಿಸಬೇಕಾದ ವಿವರಗಳನ್ನು ಹೊಂದಿರುತ್ತವೆ.

ಇ. ದಾಖಲೆ ವರ್ತಮಾನ ಪರಿಷ್ಕರಣೆಗೆ ಅನುಸಾರವಾಗಿ "ನಿಮ್ಮ ಗ್ರಾಹಕರ ಬಗ್ಗೆ ತಿಳಿದುಕೊಳ್ಳಿ"ಗೆ ಸಂಬಂಧಿಸಿದ ದಾಖಲೆಗಳನ್ನು ನೀವು ಕಾಲ ಕಾಲಕ್ಕೆ ಸಲ್ಲಿಸುತ್ತಿರ ಬೇಕು.

ಎಫ್. ಅನುಸರಿಸಬೇಕಾದ ಕಾರ್ಯವಿಧಾನಗಳ ಬಗ್ಗೆ ವಿವರಿಸುತ್ತೇವೆ ಮತ್ತು ನೀವು ಠೇವಣಿ ಖಾತೆಯನ್ನು ತೆರೆಯುವಾಗ ನಿಮಗೆ ಬೇಕಾದ ಸ್ಪಷ್ಟೀಕರಣಗಳನ್ನು ನೀಡುತ್ತೇವೆ.

ಜಿ. ನೀವು ಪಡೆಯಬಯಸುವ ಠೇವಣಿ ಸೌಲಭ್ಯಗಳಿೀಗೆ ಸಂಬಂಧಿಸಿದ ಅತಿ ಮುಖ್ಯ ನಿಬಂಧನೆಗಳು ಮತ್ತು ಷರತ್ತುಗಳನ್ನು (ಎಮ್ ಐ ಟಿ ಸಿ)ಒದಗಿಸುವುದು.

ಎಚ್. ಖಾತೆ ತೆರೆಯುವ ಸಮಯದಲ್ಲಿ, ಠೇವಣಿ ವಿಮೆ ಮತ್ತು ಭಾರತೀಯ ಸಾಲ ಖಾತರಿ ನಿಗಮ (ಡಿ.ಐ.ಸಿ.ಜಿ.ಸಿ)ವು ನಿರ್ದಿಷ್ಟ ಮಿತಿಗೆ ಮತ್ತು ಷರತ್ತುಗಳಿಗೊಳಪಟ್ಟು ನೀಡುವ, ಚಾಲ್ತಿಯಲ್ಲಿರುವ ವಿಮಾ ರಕ್ಷಣೆಯ ವಿವರಗಳನ್ನು ನೀಡುತ್ತೇವೆ.

### 8.1.2 ನಿಮ್ಮ ಖಾತೆಯ ಬದಲಾವಣೆ

ಎ. ನೀವು ಆಯ್ಕೆ ಮಾಡಿದ ಚಾಲ್ತಿ/ಉಳಿತಾಯ ಖಾತೆಯ ಬಗ್ಗೆ ನೀವು ಅಸಂತುಷ್ಟರಾಗಿದ್ದರೆ, ಖಾತೆಗೆ ನೀವು ಮೊದಲನೇ ಸಲ ಹಣ ಹಾಕಿದಾಗಿನಿಂದ 14 ದಿನಗಳ ಒಳಗೆ, ನೀವು ನಮ್ಮ ಬೇರೊಂದು ಖಾತೆಗೆ ಬದಲಾವಣೆ ಮಾಡಿಕೊಳ್ಳುವುದಕ್ಕಾಗಿ ನಿಮಗೆ ಸಹಾಯ ಮಾಡುತ್ತೇವೆ ಅಥವಾ ನಿಮ್ಮ ಹಣವನ್ನು ಅದು ಗಳಿಸಿರಬಹುದಾದ ಬಡ್ಡಿ ಸಮೇತ ನಿಮಗೆ ವಾಪಸ್ಸು ಮಾಡುತ್ತೇವೆ ಮತ್ತು ಯಾವುದೇ ಸೂಚನೆಯ ಅವಧಿ ಅಥವಾ ಹೆಚ್ಚುವರಿ ಶುಲ್ಕವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಬಿ. ನೀವು ನಿಮ್ಮ ಚಾಲ್ತಿ/ ಉಳಿತಾಯ ಖಾತೆಯನ್ನು ಮುಕ್ತಾಯಗೊಳಿಸಲು ನಿರ್ಧರಿಸಿದಲ್ಲಿ, ಅದರ ಬಗ್ಗೆ ಅಗತ್ಯವಿರುವ ಎಲ್ಲ ದಾಖಲೆ ಒದಗಿಸಿ ಹಾಗೂ ಎಲ್ಲ ಔಪಚಾರಿಕತೆಗಳನ್ನು ಪೂರೈಸಿದ್ದಲ್ಲಿ ನಿಮ್ಮ ಸೂಚನೆ ಬಂದ ಮೂರು ಕೆಲಸದ ದಿನಗಳಲ್ಲಿ ನಿಮ್ಮ ಖಾತೆಯನ್ನು ಮುಕ್ತಾಯಗೊಳಿಸುತ್ತೇವೆ.

ಸಿ. ನೀವು ನಿಮ್ಮ ಚಾಲ್ತಿ/ ಉಳಿತಾಯಖಾತೆಯನ್ನು ಮುಕ್ತಾಯಗೊಳಿಸಲು ನಿರ್ಧರಿಸಿದರೆ ನಿಮ್ಮಿಂದ ಸೂಚನೆ ಸ್ವೀಕರಿಸಿದ ಮೂರು ಕೆಲಸದ ದಿನಗಳಲ್ಲಿ ನೀವು ಎಲ್ಲ ಔಪಚಾರಿಕತೆಯನ್ನು ಪೂರೈಸಿ ಅಗತ್ಯ ದಾಖಲೆಗಳನ್ನು ನೀಡಿದರೆ ಖಾತೆಯನ್ನು ಮುಕ್ತಾಯಗೊಳಿಸುತ್ತೇವೆ.

### 8.1.3 ಉಳಿತಾಯ / ಚಾಲ್ತಿ ಖಾತೆಗಳು

ನೀವು ಉಳಿತಾಯ ಖಾತೆಯನ್ನು ತೆರೆದಾಗ:

ಎ) ಒಂದು ಗೊತ್ತುಪಡಿಸಿದ ಅವಧಿಯಲ್ಲಿ, ನೀವು ಉಚಿತವಾಗಿ ಎಷ್ಟು ಬಾರಿ ವ್ಯವಹಾರ, ಹಣ ಹಿಂತೆಗೆತವನ್ನು ಮಾಡಬಹುದು ಎಂಬುದನ್ನು ತಿಳಿಸುತ್ತೇವೆ.

ಬಿ) ಅಂತಹ ಮಿತಿಯನ್ನು ಮೀರಿದಾಗ, ಶುಲ್ಕಗಳ ಬಗ್ಗೆ, ಇದ್ದಲ್ಲಿ, ನಿಮಗೆ ತಿಳಿಸುತ್ತೇವೆ. ದರಸೂಚಿಯಲ್ಲಿ ಶುಲ್ಕವಿವರಗಳನ್ನು ನೀಡುತ್ತೇವೆ.

ಸಿ) ನಿಮ್ಮ ಉಳಿತಾಯ ಖಾತೆಯ ಮೇಲೆ ಯಾವ ದರದಲ್ಲಿ ಬಡ್ಡಿ ಪಾವತಿಸಲಾಗುವುದು? ಹೇಗೆ ಲೆಕ್ಕ ಹಾಕಲಾಗುವುದು ಮತ್ತು ಅದರ ಅವಧಿಯ ಬಗ್ಗೆ ನಿಮಗೆ ತಿಳಿಸುತ್ತೇವೆ.

## 8.1.3.1ಕನಿಷ್ಠ ಶಿಲ್ಕು

ಎ. ಉಳಿತಾಯ ಖಾತೆಯಲ್ಲಿ ಇಟ್ಟಿರಬೇಕಾದ ಕನಿಷ್ಠ ಶಿಲ್ಕಿನ ಬಗ್ಗೆ ನಮ್ಮ ಶಾಖೆಗಳಲ್ಲಿ ಪ್ರದರ್ಶಿಸಲಾಗುವುದು.

ಬಿ. ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆ ಅಥವಾ ಇನ್ನಾವುದೇ ವಿಧವಾದ ಠೇವಣಿ ಖಾತೆಯಂತಹ ಉತ್ಪನ್ನಗಳ ಬಗ್ಗೆ, ನಾವು ನಿಮಗೆ ಈ ಕೆಳಕಂಡ ಮಾಹಿತಿಯನ್ನು ನೀಡುತ್ತೇವೆ.

i. ಅಂತಹ ಖಾತೆಗಳ ನಿರ್ವಹಣೆ ಸಂಬಂಧ ಚಾಲ್ತಿಯಲ್ಲಿರುವ ಷರತ್ತು ಮತ್ತು ನಿಬಂಧನೆಗಳ ಒಂದು ಭಾಗವಾಗಿ ಖಾತೆಯಲ್ಲಿ ಇಟ್ಟಿರಬೇಕಾದ ಕನಿಷ್ಠ ಶಿಲ್ಕಿನ ಬಗ್ಗೆ.

ii. ನೀವು ಖಾತೆಯಲ್ಲಿ ಅಂತಹ ಕನಿಷ್ಟ ಶಿಲ್ಕನ್ನು ಇಟ್ಟಿರದೇ ಇದ್ದ ಸಂದರ್ಭದಲ್ಲಿ ವಿಧಿಸಲಾಗುವ ಶುಲ್ಕದ ಬಗ್ಗೆ ತಿಳಿಸಲಾಗುವುದು ಹಾಗೂ ಶುಲ್ಕದ ವಿವರಗಳನ್ನು ದರ ಸೂಚಿಯಲ್ಲಿ ಸೇರಿಸಲಾಗುವುದು. ನಿರ್ವಹಿಸಬೇಕಾದ ಕನಿಷ್ಟ ಶಿಲ್ಕಿನ ಬಗ್ಗೆ ಬದಲಾವಣೆಗಳಾದಲ್ಲಿ, 30 ದಿನಗಳ ಮುಂಚಿತವಾಗಿ ತಿಳಿಸಲಾಗು ವುದು. ಈ ಸೂಚನಾವಧಿಯಲ್ಲಿ ನಿರ್ದಿಷ್ಟಪಡಿಸಿದ ಹೆಚ್ಚು ಕನಿಷ್ಟ ಶಿಲ್ಕನ್ನು ನಿರ್ವಹಿಸದೇ ಇರುವುದಕ್ಕೆ ನಾವು ನಿಮಗೆ ಯಾವುದೇ ಶುಲ್ಕ ವಿಧಿಸುವುದಿಲ್ಲ.

## 8.1.3.2. ಶುಲ್ಕಗಳು

ಚೆಕ್ ಪುಸ್ತಕಗಳು, ಹೆಚ್ಚುವರಿ/ ಲೆಕ್ಕ ವಿವರಣಾ ಪಟ್ಟಿಯ ನಕಲು ನೀಡುವುದಕ್ಕೆ, ಪಾಸ್ ಪುಸ್ತಕದ ನಕಲು ನೀಡುವುದಕ್ಕೆ, ಸಂದಾಯಿತ ಚೆಕ್ಕುಗಳ ಪ್ರತಿ ನೀಡುವುದಕ್ಕೆ, ಫೋಲಿಯೋ ಶುಲ್ಕ, ಸಹಿ ಪರಿಶೀಲನೆಗೆ, ಡೆಬಿಟ್ ಕಾರ್ಡ್, ಎ.ಟಿ.ಎಮ್. ಕಾರ್ಡ್ ನೀಡುವುದಕ್ಕೆ, ಚೆಕ್ ವಾಪಸಾತಿಗೆ, ಆದೇಶಗಳ ಅಥವಾ ಖಾತಾ ಸ್ವರೂಪದಲ್ಲಿ ಬದಲಾವಣೆಗೆ, ಉಳಿತಾಯ ಖಾತೆ/ ಚಾಲ್ತಿ ಖಾತೆಯನ್ನು ಮುಕ್ತಾಯಗೊಳಿಸುವುದೇ ಮುಂತಾದವುಗಳಿಗೆ ಇರುವ ಶುಲ್ಕಗಳನ್ನು ದರಸೂಚಿಯಲ್ಲಿ ಸೇರಿಸಲಾಗುವುದು. ರಿಯಾಯತಿ ಅಥವಾ ಪರಿಹಾಂವನ್ನು ರಿಯಾಯಿತಿ/ಪರಿಹಾರದ ಮೂಲ ಸಿಂಧುತ್ವ ಅವಧಿಯಲ್ಲಿ ಹಿಂತೆಗೆದುಕೊಳ್ಳುವುದಿಲ್ಲ.

## 8.1.3.3 ಪಾಸ್ ಪುಸ್ತಕಗಳು

### ವಿವರಣಾಪಟ್ಟಿಗಳು

ಎ. ನಿಮ್ಮ ಖಾತೆಯನ್ನು ನಿರ್ವಹಿಸುವಲ್ಲಿ ಮತ್ತು ಅವುಗಳಲ್ಲಿನ ಉಲ್ಲೇಖಗಳನ್ನು ಪರೀಕ್ಷಿಸುವ ಸಲುವಾಗಿ ನಿಮಗೆ ಸಹಾಯ ಮಾಡಲು, ನೀವು ಪಾಸ್ ಪುಸ್ತಕವನ್ನು ಪಡೆಯಲು ಆಯ್ಕೆ ಮಾಡಿಕೊಂಡಿರದೇ ಇದ್ದರೆ, ಮಾಸಿಕ ಲೆಕ್ಕ ವಿವರಣಾ ಪಟ್ಟಿಯನ್ನು /ಇ –ಅಂಚೆ ವಿವರಣಾ ಪಟ್ಟಿಯನ್ನು (ನಿಮ್ಮ ಒಪ್ಪಿಗೆ ಇದ್ದಲ್ಲಿ) ನಿಮಗೆ ನೀಡುತ್ತೇವೆ.

ಬಿ. ನಿಮ್ಮ ಖಾತಾ ಸ್ವರೂಪಕ್ಕೆ ಅನುಗುಣವಾಗಿ, ಖಾತಾ ವಿವರಣಾಪಟ್ಟಿಗಳನ್ನು ನಿಮಗೆ ಸಾಮಾನ್ಯವಾಗಿ ಒದಗಿಸುವುದನ್ನು ಹೊರತುಪಡಿಸಿಯೂ, ನೀವು ನಮ್ಮನ್ನು ಹೆಚ್ಚು ಬಾರಿ ಕೇಳಬಹುದು. ಆದರೆ ಇದಕ್ಕೆ ಶುಲ್ಕ ಪಾವತಿಸಬೇಕಾಗುವುದು. ದರ ಸೂಚಿಯಲ್ಲಿ ಈ ಶುಲ್ಕವನ್ನು ನಿರ್ದಿಷ್ಟಪಡಿಸಲಾಗುವುದು.

ಸಿ. ಎಮ್ ಐ ಸಿ ಆರ್ ಕೋಡ್ ಮತ್ತು ಐ ಎಫ್ ಎಸ್ ಕೋಡ್ ಅನ್ನು ಪಾಸ್ ಪುಸ್ತಕಗಳಲ್ಲಿ ಮತ್ತು ವಿವರಣಾ ಪಟ್ಟಿಯಲ್ಲಿ ಸೂಚಿಸಿರುತ್ತೇವೆ.

ಡಿ. ಬ್ಯಾಂಕಿನ "ಗ್ರಾಹಕರ ಕೇರ್ ನಂಬರ್" /ಶಾಖೆಯ ಸಂಪರ್ಕ ಸಂಖ್ಯೆಯನ್ನು ಪಾಸ್ ಪುಸ್ತಕಗಳಲ್ಲಿ ಮತ್ತು ಖಾತಾ ವಿವರಣಾ ಪಟ್ಟಿಯಲ್ಲಿ ಒದಗಿಸಿರುತ್ತೇವೆ.

ಇ. ನಿಮ್ಮ ಪಾಸ್ ಪುಸ್ತಕ/ ವಿವರಣಾಪಟ್ಟಿಗಳಲ್ಲಿನ ಉಲ್ಲೇಖಗಳು ಸಂಕ್ಷಿಪ್ತ, ಮತ್ತು ಗ್ರಹಿಸಲು ಸಾಧ್ಯವಾಗಿರುವಂತೆ ಖಚಿತಪಡಿಸಿಕೊಳ್ಳುತ್ತೇವೆ.

### 8.1.3.4. ಠೇವಣಿ ಖಾತೆಗಳನ್ನು ಮೇಲ್ದರ್ಜೆಗೇರಿಸುವಿಕೆ

ಮೇಲ್ದರ್ಜೆಗೇರಿಸಲು ನಿಮ್ಮ ಖಾತೆಯು ಅಗತ್ಯ ನಿಬಂಧನೆಗಳನ್ನು ಪೂರೈಸಿದರೆ ನಿಮ್ಮ ಲಿಖಿತ ಸಮ್ಮತಿ ಅಥವಾ ಇತರ ಯಾವುದೇ ಮಾರ್ಗ ಅಥವಾ ಅಧಿಕೃತ ವಿದ್ಯುನ್ಮಾನ ಮಾಧ್ಯಮದ ನಿಮ್ಮ ಸಮ್ಮತಿ ಪಡೆದು ಮಾನ್ಯ ಮಾಡಿ ಖಾತೆಯನ್ನು ಮೇಲ್ದರ್ಜೆಗೇರಿಸುತ್ತೇವೆ.

### 8.1.4 ಅಪ್ರಾಪ್ತ ವಯಸ್ಕರ ಖಾತೆಗಳು

ಎ. ನೀವು ಬಯಸಿದಲ್ಲಿ ಅಪ್ರಾಪ್ತ ವಯಸ್ಕರ ಹೆಸರಿನಲ್ಲಿ ಹೇಗೆ ಠೇವಣಿ ಖಾತೆಯನ್ನು ತೆಗೆಯಬೇಕು ಹಾಗೂ ಅದನ್ನು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ತಿಳಿಸುತ್ತೇವೆ.

ಬಿ. ಯಾವ ದಿನಾಂಕದಂದು ಅಪ್ರಾಪ್ತ ವಯಸ್ಕರು ಪ್ರಾಪ್ತ ವಯಸ್ಕರಾಗುತ್ತಾರೆ ಎಂಬುದನ್ನು ತಿಳಿಸುತ್ತೇವೆ.

### 8.1.5 ನಿಷ್ಕ್ರಿಯ ಮತ್ತು ವ್ಯವಹಾರವಿಲ್ಲದ ಖಾತೆಗಳು

ಎ. ನೀವು ಖಾತೆ ತೆರೆಯುವಾಗ, ಎಷ್ಟು ದಿನ ಖಾತೆಯನ್ನು ನಿರ್ವಹಿಸದೇ ಇದ್ದರೆ ಅದನ್ನು ನಿಷ್ಕ್ರಿಯ ಮತ್ತು ವ್ಯವಹಾರವಿಲ್ಲದ ಖಾತೆಗಳು ಎಂದು ವರ್ಗೀಕರಿಸ ಲಾಗುವುದು ಎಂಬುದನ್ನು ನಿಮಗೆ ತಿಳಿಸಲಾಗುತ್ತೇವೆ. ನಿಮ್ಮ ಖಾತೆಯನ್ನು ನಿಷ್ಕ್ರಿಯ/ ವ್ಯವಹಾರವಿಲ್ಲದ ಅಥವಾ ಕ್ಲೇಮು ಮಾಡದೇ ಇರುವ ಖಾತೆಯೆಂದು ವರ್ಗೀಕರಿಸುವ ಮೂರು ತಿಂಗಳ ಮುನ್ನ ನಂತರದ ಪರಿಣಾಮಗಳ ಸಮೇತ ನಿಮಗೆ ಸೂಚನೆ ನೀಡುತ್ತೇವೆ.

ಬಿ. ಒಂದು ಖಾತೆಯನ್ನು ನಿಷ್ಕ್ರಿಯ ಮತ್ತು ವ್ಯವಹಾರವಿಲ್ಲದ ಖಾತೆಗಳು ಎಂದು

ವರ್ಗೀಕರಿಸುವ ಮುನ್ನ ಈ ಬಗ್ಗೆ ಎಸ್ ಎಮ್ ಎಸ್ /ಇ ಅಂಚೆಯ ಮೂಲಕ ಸೂಚನೆ ನೀಡಲಾಗುವುದು.

ಸಿ. ಒಂದು ಖಾತೆಯನ್ನು ನಿಷ್ಕ್ರಿಯ ಮತ್ತು ವ್ಯವಹಾರವಿಲ್ಲದ ಖಾತೆಗಳು ಎಂದು ವರ್ಗೀಕರಿಸುವ ಮುನ್ನ ಜಂಟಿ ಖಾತಾದಾರ/ ರಿಗೆ ಸೂಚನೆ ನೀಡಲಾಗುವುದು.

ಡಿ. ಖಾತೆಯ ಮರು ಆರಂಭಕ್ಕಾಗಿ ನೀವು ಇಚ್ಛಿಸಿದಲ್ಲಿ, ಪಾಲಿಸಬೇಕಾದ ಕಾರ್ಯ ವಿಧಾನಗಳ ಬಗ್ಗೆ ತಿಳಿಸುತ್ತೇವೆ.

ಇ. ಖಾತೆಯು ಕೇವಲ ವ್ಯವಹಾರ ರಹಿತ ಹಾಗೂ ನಿಷ್ಕ್ರಿಯ ಎಂಬ ಕಾರಣಕ್ಕೆ ಶುಲ್ಕ ವಿಧಿಸುವುದಿಲ್ಲ.

ಎಫ್. ವ್ಯವಹಾರವಿಲ್ಲದ ಖಾತೆಗಳ ಮರು ಕಾರ್ಯಾರಂಭ ಪ್ರಕ್ರಿಯೆಗೆ ನಿಮಗೆ ಯಾವುದೇ ಶುಲ್ಕ ವಿಧಿಸುವುದಿಲ್ಲ.

### 8.1.6 ನಿಮ್ಮ ಖಾತೆಗಳನ್ನು ಮುಕ್ತಾಯಗೊಳಿಸುವಿಕೆ

ಸಾಮಾನ್ಯ ಪರಿಸ್ಥಿತಿಗಳಲ್ಲಿ ನಿಮಗೆ ಕನಿಷ್ಠ 30 ದಿನಗಳ ಸೂಚನೆ ನೀಡದೇ ಕಾರಣವನ್ನು ತಿಳಿಸದೆ ನಿಮ್ಮ ಖಾತೆಯನ್ನು ನಾವು ಮುಕ್ತಾಯಗೊಳಿಸುವುದಿಲ್ಲ. ಇಂತಹ ಎಲ್ಲಾ ಪ್ರಕರಣ ಗಳಲ್ಲೂ ನೀವು ಈಗಾಗಲೇ ನೀಡಿದ ಚೆಕ್ಕುಗಳ ಸಂಬಂಧ ಬದಲೀ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು ಮತ್ತು ಇಂತಹ ಖಾತೆಗಳ ಸಂಬಂಧ ಹೊಸದಾಗಿ ಚೆಕ್ಕುಗಳನ್ನು ನೀಡುವುದರಿಂದ ದೂರವಿರತಕ್ಕದ್ದು.

### 8.2 ತೀರುವ ಆವರ್ತನ/ಸಂಗ್ರಹ ಸೇವೆಗಳು

ಎ. ಸಂಗ್ರಹಣೆಗಾಗಿ ಕಳುಹುಸುವ ಚೆಕ್ಕುಗಳನ್ನು ಹಾಕುವುದಕ್ಕಾಗಿ ಪೆಟ್ಟಿಗೆ ಸೌಲಭ್ಯವನ್ನು ನೀಡುತ್ತೇವೆ. ಒಳಗೆ ಹಾಕಿದ ಚಕ್ಕುಗಳನ್ನು ನಿಖರವಾಗಿ ಹಾಗೂ ಪ್ರಾಮಾಣಿಕವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದಕ್ಕೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳ ಲಾಗುವುದು. ಆದಾಗ್ಯೂ ನೀವು ಬಯಸಿದಲ್ಲಿ ಪೆಟ್ಟಿಗೆಯೊಳಗೆ ಹಾಕುವುದರ ಬದಲು ಕೌಂಟರಿನಲ್ಲಿ ಚೆಕ್ಕುಗಳನ್ನು ನೀಡಿ ಸ್ವೀಕೃತಿ ಪಡೆಯಬಹುದು.

ಬಿ. ಸ್ಥಳೀಯ ಸಂಲೇಖಗಳ ತೀರುವೆ ಆವರ್ತನವನ್ನು ನಿಮಗೆ ತಿಳಿಸಲಾಗುವುದು.ಮತ್ತು ಪರಸ್ಥಳದ ಸಂಲೇಖಗಳ ತೀರುವೆ ಆವರ್ತನವನ್ನು ನಿಮಗೆ ತಿಳಿಸಲಾಗುವುದುಮತ್ತು ಪರಸ್ಥಳದ, ಸಂಲೇಖಗಳ ತೀರುವೆ ವಿವರಗಳನ್ನು ಅದೇ ದಿನದ ತೀರುವೆಗಾಗಿ ಸಂಲೇಖಗಳನ್ನು ಸಲ್ಲಿಸಲು ಇರುವಂತಹ ಕಾಲಮಿತಿ, ಸಂಲೇಖಗಳನ್ನು ಸಲ್ಲಿಸಿದ ನಂತರ ಬಂದು ಹಣವನ್ನು ಹಿಂತೆಗೆಯಬಹುದು ಮತ್ತು ನಮ್ಮ ಚೆಕ್ ಸಂಗ್ರಹಣಾ ನೀತಿಯನ್ವಯ ವಿಳಂಬ ಸಂಗ್ರಹಣೆಗಾಗಿ ಬಡ್ಡಿ ಪಡೆಯುವುದಕ್ಕೆ ಹೇಗೆ ಅರ್ಹತೆ ಪಡೆಯುತ್ತೀರಿ ಎಂಬುದರ ಬಗ್ಗೆ ತಿಳಿಸುತ್ತೇವೆ.

ಸಿ. ನೀವು ಸಲ್ಲಿಸಿದ ಚೆಕ್ಕು ಪಾವತಿಯಾಗದೇ ವಾಪಸ್ಸು ಬಂದ ತಕ್ಷಣವೇ ನಿಮಗೆ ಎಸ್ ಎಮ್ ಎಸ್ / ಇ ಅಂಚೆಯ ಮೂಲಕ ಸಂದೇಶ ರವಾನಿಸುತ್ತೇವೆ.

ಇ. ಪಾವತಿಯಾಗದ / ಮಾನ್ಯವಾಗದ ಚೆಕ್ಕನ್ನು ವಾಪಸ್ಸಾದ ದಿನಾಂಕ, ವಾಪಸಾತಿ ಕಾರಣ/ ತಿರಸ್ಕೃತ ಕಾರಣ ಸೂಚಿಸಿರುವ ಅಧಿಕೃತ ಸಹಿಯೊಂದಿಗೆ ಟಿಪ್ಪಣಿಯನ್ನು 24 ಗಂಟೆಗಳ ಒಳಗೆ ನಿಮಗೆ ನೀಡಲಾಗುವುದು

ಎಫ್. ಒಂದು ವೇಳೆ ಪರಸ್ಥಳದ ಚೆಕ್ಕುಗಳಿಗೆ ತಕ್ಷಣವೆ ಹಣ ಪಾವತಿ ನೀಡಿದರೆ ಅದಕ್ಕೆ ಸಂಬಂಧಿಸಿದ ನಿಬಂಧನೆ ಮತ್ತು ಷರತ್ತುಗಳನ್ನು ತಿಳಿಸುತ್ತೇವೆ. ಅಂದರೆ ನೀವು ಸಲ್ಲಿಸುವ ಸಂಲೇಖುಗಳಿಗೆ ನೀಡಲಾಗುವ ಜಮಾ ಮೊತ್ತದ ಮಿತಿ ಹಾಗೂ ಖಾತೆಗಲ ತೃಪ್ತಿದಾಯಕ ನಿರ್ವಹಣೆ ಮುಂತಾದವುಗಳ ಬಗ್ಗೆ ತಿಳಿಸುತ್ತೇವೆ.

ಜಿ. ನೀವು ಸಲ್ಲಿಸಿದ ಚೆಕ್ಕು/ ಸಂಲೇಖುವು ಸಾಗಣೆಯಲ್ಲಿ ಕಳೆದುಹೋದ ಸಂದರ್ಭದಲ್ಲಿ, ನಮ್ಮ ಚೆಕ್ ಸಂಗ್ರಹಣಾ ನೀತಿಯನುಸಾರ ನಡೆದುಕೊಳ್ಳುತ್ತೇವೆ ಮತ್ತು ಚೆಕ್ಕಿನ/ ಸಂಲೇಖುದ ನಕಲನ್ನು ಪಡೆಯುವುದಕ್ಕೆ ಎಲ್ಲಾ ಸಹಾಯ ಮಾಡುತ್ತೇವೆ.

ಎಚ್. ನೀವು ಖಾತೆಯನ್ನು ತೆರೆಯುವಾಗ ಮತ್ತು ನೀವು ಕೇಳಿದಾಗಲೆಲ್ಲಾ ಮೇಲಿನ ಮಾಹಿತಿಯನ್ನು ನೀಡುತ್ತೇವೆ. ನಮ್ಮ ನೀತಿಯಲಿ ಯಾವುದೇ ಬದಲಾವಣೆಗಳಿದ್ದಲ್ಲಿ, ಪರಿಷ್ಕೃತ ನೀತಿಯನ್ನು ನಮ್ಮ ವೆಬ್ ತಾಣದಲ್ಲಿ ಮತ್ತು ನಮ್ಮ ಎಲ್ಲ ಶಾಖೆಗಳಲ್ಲಿ ಪ್ರಕಟಿಸುತ್ತೇವೆ.

## 8.3 ನಗದು ವ್ಯವಹಾರಗಳು

ಎ. ಶುಲ್ಕಗಳು ಅಥವಾ ವ್ಯವಹಾರ ಸ್ವರೂಪಕ್ಕೆ ಅನ್ವಯಿಸುವ ನಿರ್ಬಂಧನೆಗಳಿಗೆ ಒಳಪಟ್ಟು ಇದ್ದಲ್ಲಿ ಕೋರ್‌ಬ್ಯಾಂಕ್ ಅಡಿಯಲ್ಲಿ, ನಾವು ನಮ್ಮ ಯಾವುದೇ ಶಾಖೆಯಲ್ಲಿ ನಗದನ್ನು ಸ್ವೀಕರಿಸುತ್ತೇವೆ ಮತ್ತು ನಗದನ್ನು ನೀಡುತ್ತೇವೆ.

ಬಿ. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ, ನಿರ್ದಿಷ್ಟಪಡಿಸಿದ ನಮ್ಮ ಶಾಖೆಗಳಲ್ಲಿ ನಾವು ಕೊಳೆಯಾದ ವಿರೂಪಗೊಂಡ ಮತ್ತು/ಅಥವಾ ಸಣ್ಣ ನಾಣ್ಯಗಳನ್ನು ಬದಲಾವಣೆ ಮಾಡಿ ಕೊಡುತ್ತೇವೆ. ಈ ಸೌಲಭ್ಯವನ್ನು ವಿಧಿಸಲಾದ ಪರಿಮಿತಿಯ ಒಳಗೆ ಎಂದೋ ಒಮ್ಮೊಮ್ಮೆ ಸಹಜವಾಗಿ ಒಳ ಬರುವ /ಬ್ಯಾಂಕಿಗೆ ಕಾಲಿಡುವ ಗ್ರಾಹಕರಿಗೂ ವಿಸ್ತರಿಸುತ್ತೇವೆ.

ಸಿ. ಒಂದು ನಿರ್ದಿಷ್ಟ ಮೊತ್ತಕ್ಕಿಂತ ಹೆಚ್ಚು ಮೊತ್ತದ ವ್ಯವಹಾರ ಮಾಡಬೇಕಾದರೆ, ನೀವು ನಿಮ್ಮ ಶಾಶ್ವತ ಖಾತಾ ಸಂಖ್ಯೆ( ಪ್ಯಾನ್)ಯನ್ನು ನೀಡಬೇಕಾದ ಅಗತ್ಯವಿರುತ್ತದೆ.

## 8.4 ನೇರ ಖರ್ಚುಗಳು ಮತ್ತು ಸ್ಥಾಯಿ ನಿರ್ದೇಶನಗಳು

ಎ. ನೇರ ಖರ್ಚುಗಳು/ ಸ್ಥಾಯಿ ನಿರ್ದೇಶನಗಳು ಹೇಗೆ ಕೆಲಸ ಮಾಡುತ್ತವೆ ಮತ್ತು

ಅವುಗಳನ್ನು ನೀವು ದಾಖಲಿಸುವ/ ರದ್ದುಪಡಿಸುವ ಬಗ್ಗೆ ಮತ್ತು ಅವುಗಳಿಗೆ ಸಂಬಂಧಿಸಿದ ಶುಲ್ಕಗಳ ಬಗ್ಗೆ ನೀವು ಖಾತೆ ತೆರೆಯುವಾಗ ನಿಮಗೆ ತಿಳಿಸುತ್ತೇವೆ. ಕಾಲಕಾಲಕ್ಕೆ ತಿದ್ದುಪಡಿಯಾಗುವ ದರಸೂಚಿಯಂತೆ ಶುಲ್ಕ ವಿಧಿಸಲಾಗುವುದು.

ಬಿ. ನೇರ ಖರ್ಚು ಹಾಕುವುದಕ್ಕೆ (ವಿದ್ಯುನ್ಮಾನ ತೀರುವೆ ಸೇವೆ[ಇಸಿಎಸ್] ಎಂದಿಟ್ಟುಕೊಳ್ಳಿ) ನೀವು ನೀಡಿದ ಅಧಿಕೃತ ನಿರ್ದೇಶನಗಳನ್ನು ಮತ್ತು ಇತರೇ ಸ್ಥಾಯೀ ನಿರ್ದೇಶನ ಗಳಂತೆ ಕಾರ್ಯನಿರ್ವಹಿಸುತ್ತೇವೆ. ಅಧಿಕೃತನಿರ್ದೇಶನಗಳ ಪಾಲನೆಯಲ್ಲಿ ವಿಳಂಬ ಅಥವಾ ವಿಫಲತೆಯಿಂದ ಉಂಟಾದ ಹಣಕಾಸು ನಷ್ಟವಾದ ಅಥವಾ ಅಧಿಕ ವೆಚ್ಚ ಭರಿಸಬೇಕಾದ ಸಂದರ್ಭದಲ್ಲಿ, ಬ್ಯಾಂಕಿನ ಪರಿಹಾರ ನೀತಿಯ ಪ್ರಕಾರ ಪರಿಹಾರ ನೀಡುತ್ತೇವೆ. ಖಾತೆಯಲ್ಲಿ ಸಾಕಷ್ಟು ಶಿಲ್ಕು ಇಲ್ಲದೆ ಇರುವ ಕಾರಣದಿಂದ ನಿಮ್ಮ ಅಧಿಕೃತ ನಿರ್ದೇಶನಗಳನ್ನು ನಿರ್ವಹಿಸಲಾಗದಿದ್ದಲ್ಲಿ, ನಾವು ಕಾಲಕಾಲಕ್ಕೆ ತಿದ್ದುಪಡಿಯಾಗುವ ದರ ಸೂಚಿಯಂತೆ ಶುಲ್ಕ ವಿಧಿಸುತ್ತೇವೆ.

ಸಿ. ನೇರ ಖರ್ಚಿನಡಿ, ನಿಮ್ಮ ಖಾತೆಯಲ್ಲಿ ಅನಧಿಕೃತವಾಗಿ ಅಥವಾ ತಪ್ಪಾಗಿ ಖರ್ಚು ಹಾಕಿರುವುದು ದೃಢಪಟ್ಟಲ್ಲಿ, ಬಡ್ಡಿ ಸಮೇತ ನಿಮ್ಮ ಖಾತೆಗೆ ಮರುಪಾವತಿ ಮಾಡುತ್ತೇವೆ ಮತ್ತು ಬ್ಯಾಂಕಿನ ಪರಿಹಾರ ನೀತಿಯನುಸಾರ ನಿಮಗೆ ಪರಿಹಾರ ನೀಡಲಾಗುವುದು.

## 8.5 ಪಾವತಿ ತಡೆ ಸೌಲಭ್ಯಗಳು

ಎ. ನೀವು ನೀಡಿದ ಚೆಕ್ಕುಗಳ ಸಂಬಂಧ ನಿಮ್ಮಿಂದ 'ಪಾವತಿ ತಡೆ' ಸೂಚನೆಗಳನ್ನು ಅಂಗೀಕರಿಸುತ್ತೇವೆ. ನಿಮ್ಮ ಸೂಚನೆ ಸ್ವೀಕರಿಸಿದ ತಕ್ಷಣ ನಿಮಗೆ ಸ್ವೀಕೃತಿ ನೀಡುತ್ತೇವೆ ಮತ್ತು ನಮ್ಮಿಂದ ಈ ಚೆಕ್ಕುಗಳು ತೀರುವೆಯಾಗದೇ ಇದ್ದರೆ, ಈ ಸಂಬಂಧ ಕ್ರಮ ತೆಗೆದುಕೊಳ್ಳುತ್ತೇವೆ.

ಬಿ. ಈ ಸಂಬಂಧ ಶುಲ್ಕಗಳೇನಾದರೂ ಇದ್ದಲ್ಲಿ ದರ ಪಟ್ಟಿಯ ಅನ್ವಯ ವಿಧಿಸಲಾಗು ವುದು.

ಸಿ. ಒಂದು ವೇಳೆ ಪಾವತಿ ತಡೆ ಸೂಚನೆ ಸ್ವೀಕರಿಸಿದ ನಂತರವೂ ಚೆಕ್ಕು ಪಾವತಿ ಯಾದರೆ ಬ್ಯಾಂಕಿನ ಪರಿಹಾರ ನೀತಿಯನುಸಾರ ಮರಳಿಸುತ್ತೇವೆ ಮತ್ತು ಪರಿಹಾರ ನೀಡುತ್ತೇವೆ.

## 8.6 ನೀವು ನೀಡಿದ ಚೆಕ್ಕುಗಳು/ ಖರ್ಚು ಸೂಚನೆಗಳು

ಎ. ಮೂಲಚೆಕ್ಕುಗಳನ್ನು/ ನಿಮ್ಮ ಖಾತೆಯಿಂದ ಪಾವತಿಯಾದ ಖರ್ಚು ಸೂಚನೆಗಳನ್ನು ಅಥವಾ ನಕಲುಗಳನ್ನು ಅಥವಾ ಅದರ ಛಾಯಾಪ್ರತಿ, ಕಾನೂನು ಪ್ರಕಾರ ಅಗತ್ಯವಿರುವ ಅವಧಿಯವರೆಗೂ ಇಟ್ಟಿರಲಾಗುವುದು.

ಬಿ. ಚೆಕ್ಕು/ಖರ್ಚು ಸೂಚನೆ ಅಥವಾ ಅದರ ಪ್ರತಿಯೊಂದನ್ನು ಸಾಕ್ಷಿಯಾಗಿ ನಮ್ಮಲ್ಲಿ ದಾಖಲೆಗಳು ಲಭ್ಯವಿರುವವರೆಗೂ ನಿಮಗೆ ನೀಡುತ್ತೇವೆ. ನಿಮ್ಮ ಖಾತೆಯಲ್ಲಿನ ಪಾವತಿಸಿದ ಚೆಕ್ಕು/ ಖರ್ಚು ಸೂಚನೆಯ ಬಗ್ಗೆ ಏನಾದರೂ ವಿವಾದವಿದ್ದಲ್ಲಿ, ಒಂದು ವರ್ಷದ ಒಳಗೆ ಕೋರಿಕೆಯನ್ನು ಸಲ್ಲಿಸಿದಲ್ಲಿ ಶುಲ್ಕಗಳನ್ನು ವಿಧಿಸುವುದಿಲ್ಲ ಮತ್ತು ಒಂದು ವರ್ಷದ ನಂತರದ ಕೋರಿಕೆಗೆ, ನಮ್ಮ ದರ ಸೂಚಿಯನ್ವಯ ಶುಲ್ಕವನ್ನು ವಿಧಿಸಲಾಗುವುದು.

ಸಿ. ಪಾವತಿಯಾಗದ ಮತ್ತು ಅವಧಿ ಮೀರಿದ ಚೆಕ್ಕುಗಳ ಬಗ್ಗೆ ನಾವು ಹೇಗೆ ವ್ಯವಹರಿಸುತ್ತೇವೆ ಎಂಬುದರ ಬಗ್ಗೆ ನಿಮಗೆ ತಿಳಿಸುತ್ತೇವೆ. ವಿಧಿಸಲಾಗುವ ಶುಲ್ಕಗಳ ವಿವರಗಳನ್ನು, ಕಾಲಕಾಲಕ್ಕೆ ತಿದ್ದುಪಡಿಯಾಗುವ ದರಸೂಚಿಯಲ್ಲಿ ಸೇರಿಸುತ್ತೇವೆ.

## 8.7 ಸಾವಧಿ ಠೇವಣಿಗಳು

ನೀವು ನಮ್ಮಲ್ಲಿ ಸಾವಧಿ ಠೇವಣಿ ಇಟ್ಟರೆ, ನಾವು

ಎ. ನಿಮ್ಮ ಠೇವಣಿಗಳು ಪಕ್ವತೆಗೆ ಬಂದಾಗ ಹೇಗೆ ವಿಲೇವಾರಿ ಮಾಡಬೇಕೆಂಬುದರ ಬಗ್ಗೆ ಅರ್ಜಿ ನಮೂನೆಯಲ್ಲಿ ನಿಮ್ಮ ಸೂಚನೆಗಳನ್ನು ಪಡೆಯುತ್ತೇವೆ.

ಬಿ. ನಿಮ್ಮ ಠೇವಣಿಗಳು ಪಕ್ವತೆಗೆ ಬಂದಾಗ ಹೇಗೆ ವಿಲೇವಾರಿ ಮಾಡಬೇಕೆಂಬುದರ ಬಗ್ಗೆ ನಿಮ್ಮ ಸೂಚನೆಗಳ ಅಭಾವದಲ್ಲಿ ನಾವು ನಿಮಗೆ ಪತ್ರ/ಇ ಅಂಚೆ/ಎಸ್ ಎಮ್ ಎಸ್ ಮೂಲಕ ಠೇವಣಿಯ ಪಕ್ವತೆ ದಿನಾಂಕವನ್ನು ಸಾಕಷ್ಟು ಮೊದಲೇ ತಿಳಿಸುತ್ತೇವೆ.

ಸಿ. ಒಂದು ವೇಳೆ ನಾವು ನಿಮ್ಮಿಂದ ಯಾವುದೇ ಸೂಚನೆಯನ್ನು ಪಡೆಯದಿದ್ದಲ್ಲಿ ನಾವು ಠೇವಣಿಯನ್ನು, ಕರ/ತೆರಿಗೆ ಉಳಿತಾಯ ಠೇವಣಿಯಂತಹ ಠೇವಣಿಗಳನ್ನು ಹೊರತು ಪಡಿಸಿ, ಆಗ ಇರುವ ಬಡ್ಡಿ ದರದಂತೆ, ಅದೇ ಪಕ್ವತಾ ಅವಧಿಯುಳ್ಳದ್ದಾಗಿ , ನವೀಕರಿಸುತ್ತೇವೆ.

ಡಿ. ಪಕ್ವತಾ ಅವಧಿಗೆ ಮುನ್ನ ಸಾವಧಿ ಠೇವಣಿಗಳನ್ನು ಹಿಂಪಡೆಯಲು ಇರುವ ಕಾರ್ಯವಿಧಾನಗಳ ಬಗ್ಗೆ ತಿಳಿಸುತ್ತೇವೆ. ಇದರ ಮಾಹಿತಿಯನ್ನು ಖಾತಾ ಪ್ರಾರಂಭದ ಅರ್ಜಿನಮೂನೆ/ಎಮ್‌ಐಟಿಸಿ/ಎಫ್‌ಡಿಆರ್‌ನ ಹಿಂಭಾಗದಲ್ಲಿ ಒದಗಿಸಿರುತ್ತೇವೆ.

ಇ. ಅವಧಿ ಠೇವಣಿಯನ್ನು ಪಕ್ವತಾವಧಿಗೆ ಮುನ್ನ ಹಿಂತೆಗೆಯಲು ಅನ್ವಯವಾಗುವ ಬಡ್ಡಿದರ ಮತ್ತು ಶುಲ್ಕಗಳನ್ನು ನಿಮಗೆ ತಿಳಿಸಲಾಗುವುದು.

ಎಫ್. ಸಾವಧಿ ಠೇವಣಿಗಳನ್ನು ಅವಧಿ ಪೂರ್ವ ಹಿಂಪಡೆಯುವ ಸಲುವಾಗಿ "ಮೊದಲಿನ ಅಥವಾ ಉಳಿದವರು/ ಇಬ್ಬರಲ್ಲೊಬ್ಬರು ಅಥವ ಉಳಿದವರು" ಬಗ್ಗೆ ನೀಡುರುವ ಸೂಚನೆಗನುಗುಣವಾಗಿ ಈ ಕಾರಣಕ್ಕಾಗಿ ನೀಡಿರುವ ಎಲ್ಲಾ

ಠೇವಣಿದಾರರ ಜಂಟಿ ಸೂಚನೆ ನೀಡಿದ್ದರೆ ಸಾವಧಿ ಠೇವಣಿ ಗಳನ್ನು ಹಿಂತೆಗೆಯಲು ಅನುಮತಿಸಲಾಗುವುದು. ಖಾತೆ ತೆರೆಯುವ ಅರ್ಜಿಯಲ್ಲಿ ಎಲ್ಲಾ ಸೂಚನೆಯನ್ನು ಅಳವಡಿಸಲಾಗುವುದು.

ಜಿ. ಠೇವಣಿಗಳನ್ನು ಸ್ವೀಕರಿಸುವ ಸಮಯದಲ್ಲಿ, ಠೇವಣಿ ಪಕ್ವತಾ ದಿನಾಂಕದ ನಂತರ ನೀವು ನವೀಕರಿಸಿದಲ್ಲಿ, ಅನ್ವಯವಾಗುವ ನಿಬಂಧನೆಗಳು ಮತ್ತು ಷರತ್ತುಗಳನ್ನು ಮತ್ತು ಬಡ್ಡಿ ದರಗಳನ್ನು ತಿಳಿಸುತ್ತೇವೆ. ಇದರ ಮಾಹಿತಿಯನ್ನು ಖಾತಾ ಪ್ರಾರಂಭದ ಅರ್ಜಿನಮೂನೆ/ಎಮ್ಐಟಿಸಿ/ಎಫ್‌ಡಿ ಆರ್‌ನ ಹಿಂಭಾಗದಲ್ಲಿ ಒದಗಿಸಿರುತ್ತೇವೆ.

ಎಚ್. ನಿಮ್ಮ ಠೇವಣಿಗಳ ಮೇಲೆ ಬರುವ ಬಡ್ಡಿ ಆದಾಯಕ್ಕೆ ಅನ್ವಯಿಸುವ ಆದಾಯ ತೆರಿಗೆ ಉಪಬಂಧಗಳು, ಅಧಿನಿಯಮದಡಿ ನಮಗಿರುವ ಹೊಣೆಗಾರಿಕೆ ಮತ್ತು ಮೂಲದಲ್ಲಿ ತೆರಿಗೆ ಕಡಿತದಿಂದ ವಿನಾಯಿತಿ ಪಡೆಯಲು ನಿಮಗಿರುವ ಅವಕಾಶ ಗಳ ಬಗ್ಗೆ ತಿಳಿಸುತ್ತೇವೆ.

ಐ. ನೀವು, ನಿಮ್ಮ ಬಡ್ಡಿ ಆದಾಯದ ಮೇಲೆ ತೆರಿಗೆ ನೀಡುವಂತಿಲ್ಲದೇ ಇದ್ದರೆ, ನಿಮ್ಮಿಂದ ನಮೂನೆ 15ಜಿ/15ಎಚ್‌ಅನ್ನು ಅರ್ಜಿ ಸ್ವೀಕರಿಸುವಾಗ ಪಡೆಯುತ್ತೇವೆ. ನೀವು, ನಿಮ್ಮ ಬಡ್ಡಿ ಆದಾಯದ ಮೇಲೆ ತೆರಿಗೆ ನೀಡುವಂತಿಲ್ಲದೇ ಇದ್ದರೆ ಅಂತಹ ನಮೂನೆಗಳನ್ನು ನೀವು ಕಾಲ ಕಾಲಕ್ಕೆ ನಮಗೆ ಸಲ್ಲಿಸಬೇಕು. ಅಂತಹ ನಮೂನೆಗಳು ನಮ್ಮಿಂದ ಸ್ವೀಕೃತವಾದ ಬಗ್ಗೆ ಪಾವತಿಸುತ್ತೇವೆ.

ಜೆ. ನಿಮ್ಮ ಠೇವಣಿಗಳ ಮೇಲೆ ಪಾವತಿಯಾದ ಬಡ್ಡಿ/ ಕೂಡಿಹಾಕಲ್ಪಟ್ಟ ಬಡ್ಡಿಯಿಂದ ನಾವು ತೆರಿಗೆಯನ್ನು ಕಡಿತ ಮಾಡಿದಂ ನಿರ್ದಿಷ್ಟ ಪಡಿಸಲಾದ ಸಮಯದ ಒಳಗೆ ಅಗತ್ಯ ದೃಢೀಕರಣ ಪತ್ರವನ್ನು ನೀಡುತ್ತೇವೆ.

ಕೆ. ನಿಮ್ಮ ಉಳಿತಾಯ /ಚಾಲ್ತಿ ಖಾತೆಗೆ ಪಾವತಿಯಾದ ಸಾವಧಿ ಠೇವಣಿ ಬಡ್ಡಿಯ ಮೇಲಿನ ತೆರಿಗೆ ಕಡಿತದ ವಿವರವನ್ನು ಪಾಸ್ ಮಸ್ತಕ /ಖಾತಾ ವಿವರಣಾ ಪಟ್ಟಿಯಲ್ಲಿ ಸೂಚಿಸಲಾಗುವುದು.

### 8.7.1 ಠೇವಣಿಗಳ ಮೇಲೆ ಮುಂಗಡಗಳು

ಅವಧಿ ಠೇವಣಿಗಳ ಮೇಲೆ ಲಭ್ಯವಿರುವ ಸಾಲ/ ಮೀರೆಳೆತ ಸೌಲಭ್ಯಗಳ ಬಗ್ಗೆ ವಿವರಿಸುತ್ತೇವೆ.

## 8.8 ಮೃತ ಖಾತಾದಾರರ ಸಂಬಂಧ ಕ್ಲೇಮುಗಳ ಇತ್ಯರ್ಥ

ಎ. ಮೃತ ಖಾತಾದಾರರ ಸಂಬಂಧ ಲೆಕ್ಕ ಇತ್ಯರ್ಥಕ್ಕಾಗಿ ಒಂದು ಸರಳ ಕಾರ್ಯ ವಿಧಾನವನ್ನು ಪಾಲಿಸುತ್ತೇವೆ.

ಬಿ. ಮೃತ ಖಾತೆದಾರರ ಖಾತೆಗಳ ಇತ್ಯರ್ಥಕ್ಕೆ ಸಂಬಂಧಿಸಿದ ನಮ್ಮನ್ನು ಸಂಪರ್ಕಿಸ ಬಹುದು. ಈ ಅರ್ಜಿ ಫ಼ಾರ್ಮ್‌ಗಳನ್ನು ನಮ್ಮ ವೆಬ್‌ತಾಣದಲ್ಲೂ ಪ್ರದರ್ಶಿಸಲಾಗಿದೆ.

### 8.8.1 ಜೀವಂತವಿರುವವರು (survivor)/ "ನಾಮನಿರ್ದೇಶಿತ ವ್ಯಕ್ತಿ" ವಾಕ್ಯಾಂಶ

ಎ. ಮೃತ ಠೇವಣಿದಾರನ ಠೇವಣಿ ಖಾತೆಯ ಪ್ರಕರಣಗಳಲ್ಲಿ, ಠೇವಣಿದಾರನು ನಾಮನಿರ್ದೇಶನದ ಸೌಲಭ್ಯದ ಉಪಯೋಗ ಪಡೆದುಕೊಂಡಿದ್ದ ಸಂದರ್ಭದಲ್ಲಿ ಮತ್ತು ಸಕ್ರಮ ನಾಮನಿರ್ದೇಶನ ಮಾಡಿದ್ದಲ್ಲಿ ಅಥವಾ ಖಾತೆಯನ್ನು 'ಜೀವಂತವಿರುವವರ ಅಧಿಕಾರ' ವಾಕ್ಯಾಂಶ ಎಂಬ ("ಇಬ್ಬರೂ ಅಥವಾ ಜೀವಂತ ವಿರುವವರು" ಅಥವಾ "ಯಾರಾದರೊಬ್ಬರು ಅಥವಾ ಜೀವಂತವಿರುವವರು ಅಥವಾ "ಮೊದಲಿನವರು ಅಥವಾ ಜೀವಂತವಿರುವವರು ಅಥವಾ ನಂತರದವರು ಅಥವಾ ಜೀವಂತವಿರುವವರು") ಎಂಬ ವಾಕ್ಯಾಂಶದೊಡನೆ ತೆರೆದಿದ್ದಲ್ಲಿ, ಠೇವಣಿ ಖಾತೆಯಲ್ಲಿರುವ ಹಣವನ್ನು, ಮೃತ ಠೇವಣಿ ಖಾತಾದಾರನ ಖಾತೆಗೆ ಸಂಬಂಧಿಸಿದಂತೆ ಜೀವಂತವಿರುವವರಿಗೆ/ ನಾಮನಿರ್ದೇಶಿತ ವ್ಯಕ್ತಿಗೆ ಈ ಕೆಳಕಂಡ ಷರತ್ತುಗೊಳಪಟ್ಟು ಪಾವತಿಸಲಾಗುವುದು:

i. ಜೀವಂತವಿರುವವ(ರು)/ ನಾಮನಿರ್ದೇಶಿತ(ರು) ವ್ಯಕ್ತಿಯ ಗುರುತು ಮತ್ತು ಖಾತಾದಾರನ ಮರಣದ ಬಗ್ಗೆ ಸೂಕ್ತ ದಾಖಲೆ ಸಾಕ್ಷಿಯೊಡನೆ ಪ್ರತಿಪಾದಿಸ ಬೇಕು.

ii. ಮೃತ ಖಾತಾದಾರನ ಖಾತೆಯಿಂದ ಪಾವತಿ ಮಾಡಲು ಬ್ಯಾಂಕಿಗೆ ಯಾವುದೇ ಸಕ್ಷಮ ನ್ಯಾಯಾಲಯದ ತಡೆಯಾಜ್ಞೆಯಿರಬಾರದು. ಅಂತಹ ಪ್ರಕರಣಗಳಲ್ಲಿ, ಮೃತ ಠೇವಣಿದಾರರಿಗೆ ಸಂಬಂಧಿಸಿದಂತೆ ಜೀವಂತವಿರುವವ(ರು)/ ನಾಮನಿರ್ದೇಶಿತರಿಗೆ, ಮೃತ ಠೇವಣಿದಾರರ ಹೆಸರಿನಲ್ಲಿ ಇರುವ ಮೊತ್ತವನ್ನು ಗಣನೆಗೆ ತೆಗೆದುಕೊಳ್ಳದೆ, ಅವರಿಂದ ಉತ್ತರಾಧಿಕಾರದ ಪ್ರಮಾಣಪತ್ರ, ನಿರ್ವಹಣಾಪತ್ರ ಅಥವಾ ಉಯಿಲು ಮುಂತಾದವುಗಳು ಅಥವಾ ನಷ್ಟ ಭರ್ತಿ ಬಂಧಪತ್ರ ಅಥವಾ ಜಾಮೀನು ನೀಡಲು ಒತ್ತಾಯಯಪಡಿಸದೇ ಪಾವತಿ ಮಾಡಲಾಗುವುದು.

ಬಿ. ಜೀವಂತವಿರುವವ(ರು)/ ನಾಮನಿರ್ದೇಶಿತ(ರು)ರಿಗೆ, ಅವರು, ಮೃತ ಠೇವಣಿದಾರರ ಕಾನೂನುಸಮ್ಮತ ವಾರಸುದಾರರ ಟ್ರಸ್ಟಿಯಾಗಿ ಪಾವತಿ ಸ್ವೀಕರಿಸುವರು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ, ಎಂದರೆ ಅವರಿಗೆ ಮಾಡಿದ ಅಂತಹ ಪಾವತಿಯು, ಯಾವುದೇ ವ್ಯಕ್ತಿಯು ಜೀವಂತವಿರುವವ(ರು)/ನಾಮನಿರ್ದೇಶಿತ(ರು)ರ ವಿರುದ್ಧ ಹೊಂದಿರುವ ಅಧಿಕಾರಕ್ಕೆ ಅಥವಾ ಕ್ಲೇಮಿಗೆ ಬಾಧಕವಾಗುವುದಿಲ್ಲ.

ಸಿ. ಮೇಲ್ಕಂಡ ಷರತ್ತುಗಳಿಗೆ ಹೊರತಾಗಿ, ಜೀವಂತವಿರುವವ(ರು)/ ನಾಮನಿರ್ದೇಶಿತರಿಗೆ ಮಾಡಿದ ಪಾವತಿಯು, ಬ್ಯಾಂಕಿನ ಹೊಣೆಗಾರಿಕೆಯ ಪೂರ್ಣ ಬಿಡುಗಡೆಯನ್ನು ಒಳಗೊಂಡಿರುತ್ತದೆ.

ಡಿ. ''ಇಬ್ಬರಲ್ಲೊಬ್ಬರು ಅಥವಾ ಉಳಿದವರು ಅಥವಾ ಮೊದಲಿನವರು ಅಥವಾ ಉಳಿದವರು ಸೂಚನೆಯಿರುವ ಸಾವಧಿ ಠೇವಣಿ ಪ್ರಕರಣಗಳಲ್ಲಿ, ಠೇವಣಿದಾರರಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಾಗ ಬದುಕುಳಿದ ಜಂಟಿ ಖಾತಾದಾರರು ಅವಧಿ ಪೂರ್ವಕವಾಗಿ ಠೇವಣಿ ಹಿಂಪಡೆಯಲು ಎಲ್ಲಾ ಠೇವಣಿ ದಾರರು ಇದಕ್ಕೆ ಸೂಚನೆ ನೀಡಿದ್ದರೆ ಮಾತ್ರ ಅನುಮತಿಸಲಾಗುವುದು.

## 8.8.2. "ಜೀವಂತವಿರುವವರು/ನಾಮನಿರ್ದೇಶನ" ವಾಕ್ಯಾಂಶವಿಲ್ಲದ ಖಾತೆಗಳು

ಮೃತ ಠೇವಣಿದಾರ ಯಾವುದೇ ನಾಮನಿರ್ದೇಶನವನ್ನು ಮಾಡದೇ ಇದ್ದ ಪ್ರಕರಣಗಳಲ್ಲಿ ಅಥವಾ "ಇಬ್ಬರಲ್ಲೊಬ್ಬರು ಅಥವಾ ಜೀವಂತವಿರುವವರು" (ಒಬ್ಬರೇ ಅಥವಾ ಜಂಟಿಯಾಗಿ ನಿರ್ವಹಿಸುವ ಖಾತೆಗಳು) ಸ್ವರೂಪದ ಖಾತೆಗಳನ್ನು ಹೊರತುಪಡಿಸಿ ಜನಸಾಮಾನ್ಯನಿಗೆ ಅನಾನುಕೂಲತೆ ಮತ್ತು ಅನಗತ್ಯ ಕಷ್ಟ ನಷ್ಟಗಳುಂಟಾಗುವುದನ್ನು ತಪ್ಪಿಸುವ ಅಗತ್ಯತೆಯ ದೃಷ್ಟಿಯಿಂದ ಠೇವಣಿದಾರರ ಕಾನೂನುಸಮ್ಮತ ವಾರಸುದಾರ(ರು)ರಿಗೆ ಪಾವತಿಸಲು ಒಂದು ಸರಳ ಕಾರ್ಯವಿಧಾನವನ್ನು ಪಾಲಿಸುತ್ತೇವೆ. ನಮ್ಮ ಸಂಭಾವ್ಯ ನಷ್ಟ ನಿರ್ವಹಣಾ ವ್ಯವಸ್ಥೆಯನ್ನು ಗಮನದಲ್ಲಿರಿಸಿ ನಷ್ಟ ಭರ್ತಿ ಬಂಧ ಪತ್ರವನ್ನುಹೊರತುಪಡಿಸಿ ಇನ್ನಾವುದೇ ದಾಖಲೆಯನ್ನು ಒದಗಿಸುವಂತೆ ಒತ್ತಾಯಪಡಿಸದೇ, ಮೃತ ಠೇವಣಿದಾರರ ಖಾತೆಯಲ್ಲಿರುವ ಹಣದ ಕ್ಲೇಮು ಇತ್ಯರ್ಥಕ್ಕೆ ಒಂದು ಆರಂಭ ಮಿತಿಯನ್ನು ನಿಗದಿಪಡಿಸುತ್ತೇವೆ.

## 8.8.3 ಕ್ಲೇಮುಗಳ ಇತ್ಯರ್ಥಕ್ಕೆ ಸಂಬಂಧ ಕಾಲಮಿತಿ

ಠೇವಣಿದಾರನ ಮರಣ ಸಂಬಂದಿ ಸಾಕ್ಷ್ಯ ಮತ್ತು ಕ್ಲೇಮುಗಳ ಸೂಕ್ತ ಗುರುತನ್ನು ಬ್ಯಾಂಕಿಗೆ ತೃಪ್ತಿದಾಯಕವಾಗುವಂತೆ ಒದಗಿಸುವ ಷರತ್ತಿಗೊಳಪಟ್ಟು, ಕ್ಲೇಮು ಸ್ವೀಕರಿಸಿದ ದಿನಾಂಕದಿಂದ 15 ದಿನಗಳನ್ನು ಮೀರದ ಅವಧಿಯೊಳಗೆ ಮೃತ ಠೇವಣಿದಾರರ ಸಂಬಂಧ ಕ್ಲೇಮುಗಳನ್ನು ಇತ್ಯರ್ಥ ಮಾಡುತ್ತೇವೆ ಮತ್ತು ಜೀವಂತವಿರುವವ(ರು) ನಾಮನಿರ್ದೇಶಿತ(ರು)ರಿಗೆ ಹಣ ಬಿಡುಗಡೆ ಮಾಡಲಾಗುವುದು.

## 8.8.4 ಅವಧಿ ಠೇವಣಿಗಳನ್ನು ಅವಧಿಯ ಮುನ್ನ ಕೊನೆಗೊಳಿಸುವಿಕೆ

ಅವಧಿ ಠೇವಣಿಗಳ ಪ್ರಕರಣಗಳಲ್ಲಿ, ಠೇವಣಿದಾರನು ಮರಣಿಸಿದ ಸಂದರ್ಭದಲ್ಲಿ ಅವಧಿ ಠೇವಣಿಗಳನ್ನು ಅವಧಿಯ ಮುನ್ನ ಕೊನೆಗಾಣಿಸುವುದಕ್ಕೆ ಅನುಮತಿಸಲಾಗುವುದು ಎಂಬ ಕರಾರನ್ನು ಖಾತಾ ತೆರೆಯುವ ನಮೂನೆಯಲ್ಲಿಯೇ ಅಳವಡಿಸಿಕೊಳ್ಳುತ್ತೇವೆ. ಅಂತಹ ಅವಧಿಯ ಮುನ್ನ ಹಿಂತೆಗೆಯುವುದಕ್ಕೆ ಅನುಮತಿಸಲು ಇರುವ ಷರತ್ತುಗಳನ್ನೂ ಸಹ ಖಾತಾ ತೆರೆಯುವ ನಮೂನೆಯಲ್ಲಿ ನಿರ್ದಿಷ್ಟವಾಗಿ ತಿಳಿಸುತ್ತೇವೆ. ಇಂತಹ ಅವಧಿ ಮುನ್ನ ಹಿಂತೆಗೆತಕ್ಕೆ ಯಾವುದೇ ಶುಲ್ಕವನ್ನು ವಿಧಿಸಲಾಗುವುದಿಲ್ಲ.

## 8.8.5 ಮೃತ ಠೇವಣಿದಾರರ ಹೆಸರಿನಲ್ಲಿ ಮಾಡಬಹುದಾದ ನಿಧಿ ಸಂಬಂಧಿತ ವರ್ಗಾವಣೆಗಳು

ಅವಧಿ ಠೇವಣಿಗೆ ಸಂಬಂಧಿಸಿದ "ಜೀವಂತವಿರುವವರು / ನಾಮನಿರ್ದೇಶನ" ದ ವ್ಯಕ್ತಿಗಳಿಗೆ ಉಂಟಾಗುವ ತೊಂದರೆಗಳನ್ನು ನಿವಾರಿಸುವ ಸಲುವಾಗಿ, ಮೃತ ಖಾತಾದಾರನ ಹೆಸರಿನಲ್ಲಿ ನಿರ್ಬಾಧಿತವಾಗಿ ನಿಧಿ ವರ್ಗಾಯಿಸುವ ಸಲುವಾಗಿ, ಬದುಕುಳಿದವ(ರು)/ ನಾಮನಿರ್ದೇಶಿತ ವ್ಯಕ್ತಿಗಳಿಂದ ಒಂದು ಸೂಕ್ತ ಒಪ್ಪಂದ/ ಅಧಿಕಾರ ಪತ್ರ ಪಡೆದುಕೊಳ್ಳುತ್ತೇವೆ. ಇದಕ್ಕಾಗಿ ಈ ಕೆಳಗೆ ತಿಳಿಸಿರುವ ಎರಡರಲ್ಲೊಂದು ಮಾರ್ಗವನ್ನು ಅನುಸರಿಸುತ್ತೇವೆ.

1. ಮೃತ ಠೇವಣಿದಾರನ ಸಂಬಂಧ ಬದುಕುಳಿದವ(ರು)/ ನಾಮನಿರ್ದೇಶಿತ ವ್ಯಕ್ತಿ ಗಳಿಂದ, ಮೃತ/ದಿವಂಗತ ಶ್ರೀ.................... ಅವರ ಸಂಪತ್ತು (ಎಸ್ಟೇಟ್) ಎಂಬ ಖಾತೆಯನ್ನು ತೆರೆಯಲು ಅಧಿಕಾರವನ್ನು ಪಡೆಯಬಹುದು. ಮತ್ತು ಯಾವುದೇ ಹಿಂತೆಗೆತ ಮಾಡುವುದಿಲ್ಲ ಎಂಬ ಷರತ್ತಿಗೊಳಪಟ್ಟು ಮೃತ ಠೇವಣಿದಾರರ ಹೆಸರಿಗೆ ಎಲ್ಲಾ ಮೂಲಗಳಿಂದ ಬಂದ ನಿಧಿಯನ್ನು ಆ ಖಾತೆಗೇ ಜಮಾ ಮಾಡಲಾಗುವುದು

ಅಥವಾ

2. "ಖಾತಾದಾರರು ಮೃತಪಟ್ಟಿದ್ದಾರೆ" ಎಂಬ ಷರಾದೊಂದಿಗೆ ಸಂದಾಯ ಮಾಡಿದ ವ್ಯಕ್ತಿಗೆ ವಾಪಸ್ಸು ಮಾಡಲು ಮತ್ತು ಅದರ ತಿಳುವಳಿಕೆಯನ್ನು ಜೀವಂತವಿರುವವ (ರು)/ ನಾಮನಿರ್ದೇಶಿತ ವ್ಯಕ್ತಿಗೆ ನೀಡಲು, ಅವರುಗಳಿಂದ ಅಧಿಕಾರ ಪಡೆಯ ಬಹುದಾಗಿದೆ. ನಂತರ ಜೀವಂತವಿರುವವ(ರು)/ನಾಮನಿರ್ದೇಶಿತರು/ ಕಾನೂನು ಸಮ್ಮತ ವಾರಸುದಾರರು, ವರ್ಗಾವಣೆ ಸಂಲೇಖ ಅಥವಾ ವಿದ್ಯುನ್ಮಾನ ವರ್ಗಾವಣೆ ಮೂಲಕ ಹಣ ಪಡೆದುಕೊಳ್ಳಲು ಸೂಕ್ತ ಪ್ರಯೋಜನದಾರರ ಹೆಸರಿಗೆ ಸಂದಾಯ ಮಾಡಿದ ವ್ಯಕ್ತಿಯನ್ನು ಸಂಪರ್ಕಿಸಬಹುದು.

## 8.8.9 ಭದ್ರತಾ ಕಪಾಟುಗಳು/ಲಾಕರುಗಳು

ಭದ್ರತಾ ಲಾಕರುಗಳ ಹಂಚಿಕೆ ಮಾಡಲು ಇರುವ ನಿಯಮ ಮತ್ತು ಪ್ರಕ್ರಿಯೆಗಳ ಸಂಪೂರ್ಣ ವಿವರಗಳನ್ನು ನಿಮಗೆ ನೀಡುತ್ತೇವೆ ಮತ್ತು ಅಮೂಲ್ಯ ವಸ್ತುಗಳನ್ನು ಇಡಲು ಅನುಸರಿಸಬೇಕಾದ ನಿಯಮಗಳನ್ನು, ನಾವು ನಿಮಗೆ ಅಂತಹ ಸೇವೆನೀಡಿದಲ್ಲಿ, ನಿಮಗೆ ತಿಳಿಸುತ್ತೇವೆ.ಠೇವಣಿಗಳನ್ನು ಅಪೇಕ್ಷಿಸದೆಯೇ ನಿಮಗೆ ಲಾಕರುಗಳ ಹಂಚಿಕೆ ಮಾಡಲಾಗುವುದು. ಆದಾಗ್ಯೂ ಲಾಕರುಗಳ ಬಾಡಿಗೆಯನ್ನು ನಿಯಮಿತವಾಗಿ ಪಡೆಯುವ ಸಲುವಾಗಿ ಮೂರು ವರ್ಷದ ಬಾಡಿಗೆ ಸರಿತೂಗಿಸುವಂತೆ ಮತ್ತು ಕಾರಣಾಂತರದಿಂದ ಲಾಕರುಗಳನ್ನು ಒಡೆದು ತೆರೆಯುವ ಶುಲ್ಕ ಭರಿಸಲು ನಿಮ್ಮಿಂದ ನಿಶ್ಚಿತ ಠೇವಣಿ ಪಡೆಯಬಹುದು.

## 8.10 ವಿದೇಶಿ ವಿನಿಮಯ ಸೇವೆಗಳು

ಎ. ವಿದೇಶಿ ಹಣವನ್ನು ನೀವು ಕೊಳ್ಳುವಾಗ ಅಥವಾ ಮಾರಾಟ ಮಾಡುವಾಗ

ನಾವು  ನೀಡುವ ಸೇವೆ, ವಿನಿಮಯ ದರ ಮತ್ತು ವಿದೇಶಿ ವಿನಿಮಯ ವ್ಯವಹಾರಕ್ಕೆ ಅನ್ವಯಿಸುವ ದರಗಳ ಮಾಹಿತಿ ನೀಡುತ್ತೇವೆ. ಇದು ಸಾಧ್ಯವಾಗದ ಸಂದರ್ಭದಲ್ಲಿ ಇವುಗಳ ಸಂಬಂಧ ಹೇಗೆ ವ್ಯವಹರಿಸಬಹುದು ಎಂಬುದನ್ನು ತಿಳಿಸುತ್ತೇವೆ.

ಬಿ. ನೀವು ಹಣವನ್ನು ವಿದೇಶಕ್ಕೆ ವರ್ಗಾಯಿಸಬಯಸಿದಲ್ಲಿ, ಇದನ್ನು ಹೇಗೆ ಮಾಡ ಬೇಕೆಂಬುದನ್ನು ತಿಳಿಸುತ್ತೇವೆ ಮತ್ತು ಕೆಳಗೆ ಕಂಡಂತೆ ಮಾಹಿತಿ ನೀಡುತ್ತೇವೆ.

i. ಸೇವಾವಿವರಗಳು ಮತ್ತು ಅವುಗಳ ಬಳಕೆ ಬಗ್ಗೆ

ii. ನೀವು ಕಳುಹಿಸಿದ ಹಣ ಎಂದು ತಲುಪುತ್ತದೆ ಎಂಬ ಬಗ್ಗೆ ವಿವರಗಳು ಮತ್ತು ವಿಳಂಬಕ್ಕೆ, ಇದ್ದಲ್ಲಿ ಕಾರಣಗಳ ಬಗ್ಗೆ

iii. ವಿದೇಶಿ ಹಣವನ್ನು ಪರಿವರ್ತಿಸುವಾಗ ಅನ್ವಯಿಸಿದ ವಿನಿಮಯ ದರದ ಬಗ್ಗೆ. (ವ್ಯವಹಾರದ ಸಮಯದಲ್ಲಿ ಇದು ಸಾಧ್ಯವಾಗದಿದ್ದಲ್ಲಿ, ನಂತರ ದರ ಎಷ್ಟೆಂಬುದರ ಬಗ್ಗೆ ತಿಳಿಸುತ್ತೇವೆ.)

iv. ನೀವು ಕೊಡಬೇಕಾದ ಯಾವುದೇ ದಲ್ಲಾಳಿ ರುಸುಮು ಅಥವಾ ಶುಲ್ಕದ ವಿವರಗಳು ಮತ್ತು ಹಣ ಸ್ವೀಕರಿಸುವ ವ್ಯಕ್ತಿಯೂ ಸಹ ವಿದೇಶಿ ಬ್ಯಾಂಕಿನ ಶುಲ್ಕವನ್ನು ಪಾವತಿಸಬೇಕಾಗಬಹುದೆಂಬ ಎಚ್ಚರಿಕೆಯ ಬಗ್ಗೆ.

ಸಿ. ವಿದೇಶದಲ್ಲಿ ಪಾವತಿಸುವುದಕ್ಕೆ ನೀವು ಒದಗಿಸಿದ ಮಾಹಿತಿಯು ಸಾಕಾಗುವುದೋ ಇಲ್ಲವೋ ಎಂಬುದರ ಬಗ್ಗೆ ತಿಳಿಸಲಾಗುವುದು. ಒಂದು ವೇಳೆ ವ್ಯತ್ಯಾಸವಿದ್ದಲ್ಲಿ ಅಥವಾ ದಾಖಲೀಕರಣವು ಅಪೂರ್ಣವಾಗಿದ್ದಲ್ಲಿ ನಿಮಗೆ ತಕ್ಷಣ ತಿಳಿಸುತ್ತೇವೆ ಮತ್ತು ಅದನ್ನು ಸರಿಪಡಿಸಲು/ ಪೂರ್ಣಗೊಳಿಸಲು ನಿಮಗೆ ಸಹಾಯ ಮಾಡುತ್ತೇವೆ.

ಡಿ. ವಿದೇಶದಿಂದ ನಿಮ್ಮ ಬ್ಯಾಂಕು ಖಾತೆಗೆ ಹಣ ವರ್ಗಾವಣೆಯಾದಲ್ಲಿ, ಸ್ವೀಕರಿಸಿದ ಮೂಲ ಮೊತ್ತ ಮತ್ತು ಯಾವುದಾದರೂ ಶುಲ್ಕ ವಿಧಿಸಿದ್ದಲ್ಲಿ ಅದರ ಬಗ್ಗೆ ತಿಳಿಸುತ್ತೇವೆ. ರವಾನೆ ಮಾಡಿದವರು ಎಲ್ಲಾ ವೆಚ್ಚಗಳನ್ನು  ಭರಿಸಲು ಒಪ್ಪಿದಲ್ಲಿ ನಿಮ್ಮ ಖಾತೆಗೆ ಹಣ ಪಾವತಿಸುವಾಗ ನಾವು ಯಾವುದೇ ಶುಲ್ಕವನ್ನು ತೆಗೆದುಕೊಳ್ಳುವುದಿಲ್ಲ.

ಇ. ನಿಯಂತ್ರಣ ಅಗತ್ಯತೆಗಳ ಬಗ್ಗೆ ಅಥವಾ ನಮ್ಮಿಂದ ನೀಡಲಾಗುವ ವಿನಿಮಯ ಸೇವೆಗಳ ಸಂಬಂಧ ಷರತ್ತುಗಳ ಬಗ್ಗೆ ಮತ್ತು ನೀವು ಕೋರಿದಾಗ ಮಾರ್ಗ ದರ್ಶನ ನೀಡುತ್ತೇವೆ.

ಎಫ್. ನಿಗದಿತ ದಿನಾಂಕದಂದು ಜಮೆಯಾಗದೇ ಇದ್ದರೆ, (ಎ) ನಿಗದಿತ  ದಿನಾಂಕದ ನಂತರ ಪಾವತಿ ಮಾಡುವ ದಿನಾಂಕದವರೆಗೂ ಉಂಟಾಗುವ ಬಡ್ಡಿ ನಷ್ಟವನ್ನು ಭರಿಸುತ್ತೇವೆ ಮತ್ತು (ಬಿ) ವಿದೇಶಿ ವಿನಿಮಯ ದರದ ವ್ಯತ್ಯಯದಿಂದ ಉಂಟಾಗುವ ನಷ್ಟವನ್ನು  ಬ್ಯಾಂಕಿನ  ಪರಿಹಾರ ನೀತಿಯನುಸಾರ ಭರಿಸುತ್ತೇವೆ.

ಜಿ. ನಿಯಂತ್ರಣ/ಶಾಸನಬದ್ಧವಾಗಿ ನೀಡಬೇಕಾದ ಎಲ್ಲಾ ಪ್ರಮಾಣ ಪತ್ರಗಳನ್ನು ಶುಲ್ಕವಿಲ್ಲದೆಯೇ ನೀಡಲಾಗುವುದು.

## 8.11 ಭಾರತದ ಒಳಗಿನ ರವಾನೆಗಳು

ನೀವು ಭಾರತದೊಳಗೆ ಹಣರವಾನೆ ಮಾಡಬೇಕಾದರೆ, ಅದನ್ನು ಹೇಗೆ ಮಾಡಬಹುದು ಎಂಬುದರ ಬಗ್ಗೆ ತಿಳಿಸುತ್ತೇವೆ ಮತ್ತು ನಿಮಗೆ ಕೆಳಕಂಡಂತೆ ಮಾಹಿತಿ ನೀಡುತ್ತೇವೆ:

ಎ. ಸೇವಾ ವಿವರಗಳನ್ನು ಹಾಗೂ ಬಳಸುವುದರ ಬಗ್ಗೆ ನಿಮಗೆ ತಿಳಿಸುತ್ತೇವೆ.

ಬಿ. ನಿಮ್ಮ ಅಗತ್ಯಕ್ಕೆ ತಕ್ಕ ಹಾಗೆ, ಹಣರವಾನೆ ಮಾಡುವ ಉತ್ತಮ ಮಾರ್ಗವನ್ನು ತಿಳಿಸುತ್ತೇವೆ

ಸಿ. ಕಾಲಕಾಲಕ್ಕೆ ತಿದ್ದುಪಡಿಯಾಗುವ ದರಸೂಚಿಯನ್ವಯ ಸೇವೆಯ ಬಳಕೆಗೆ, ದಲ್ಲಾಳಿ ರುಸುಮು ಸೇರಿದಂತೆ ನೀವು ನೀಡಬೇಕಾದ ಶುಲ್ಕಗಳ ವಿವರಗಳನ್ನು ತಿಳಿಸುತ್ತೇವೆ.

ಡಿ. ಎಸ್ ಎಮ್ ಎಸ್ /ಎ–ಅಂಚೆ ಮೂಲಕ ನೀವು ಮಾಡಿರುವ ಮೊಬೈಲ್ ಬ್ಯಾಂಕಿಂಗ್ /ಎನ್ಎಫ್ಟಿ /ಆರ್‌ಟಿಜಿಎಸ್ ಮೂಲಕ ಮಾಡಿರುವ ಹಣ ರವಾನೆಯ ಸ್ಥಿತಿ ಗತಿಯ ಬಗ್ಗೆ ನಿಮಗೆ ತಿಳಿಸಲಾಗುವುದು.

ಇ. ಎನ್ ಎ ಎಫ್ ಟಿ /ಆರ್ ಟಿ ಜಿ ಎಸ್ ವ್ಯವಹಾರಗಳಿಗೆ ಸಂಬಂಧಿಸಿದ ನಿಮ್ಮ ದೂರುಗಳನ್ನು ನಿರ್ವಹಿಸುವ ಗ್ರಾಹಕ ಸೌಕರ್ಯ ಕೇಂದ್ರಗಳ ಇತ್ತೀಚಿನ ಪರಿಷ್ಕೃತ ವಿವರಗಳನ್ನೂ ನಮ್ಮ ವೆಬ್ ತಾಣದಲ್ಲಿ ಪ್ರದರ್ಶಿಸಲಾಗುವುದು.

ಎಫ್. ಒಂದು ವೇಳೆ ವಿಲಂಬವಾದ ಪಕ್ಷದಲ್ಲಿ ಈ ಸಂಬಂಧ ಯಾವುದೇ ನಷ್ಟ / ಅಧಿಕ ವೆಚ್ಚವನ್ನು ಪರಿಹಾರ ರೂಪದಲ್ಲಿ ನೀಡಲಾಗುವುದು.

ಜಿ. ರವಾನೆ ಸೌಲಭ್ಯಗಳನ್ನು ನಿರ್ದಿಷ್ಟ ಮಿತಿಗಳೊಳಗೆ ನೇರ ಗ್ರಾಹಕರಿಗೂ ನೀಡಲಾಗುವುದು.

## 8.12 ಸಾಲ ನೀಡಿಕೆ

ಎ. ಸಾಲ ಮತ್ತು ಮುಂಗಡ ನೀಡಿಕೆ ಸಂಬಂಧಿಸಿದಂತೆ, 'ಮಂಡಳಿ ಅಂಗೀಕೃತ' ನೀತಿಯನ್ನು ಹೊಂದಲಾಗಿದೆ.

ಬಿ. ನಮ್ಮ ಸಾಲ ನೀಡಿಕೆ ನಿರ್ಣಯಗಳನ್ನು ನಿಮ್ಮ ಹಣ ಕಾಸಿನ ಸ್ಥಿತಿ ಹಾಗೂ ಮರುಪಾವತಿ ಸಾಮರ್ಥ್ಯವನ್ನಾಧರಿಸಿ ನಿರ್ಧರಿಸುತ್ತೇವೆ

ಸಿ. ಸಾಲ ನೀಡಿಕೆ ವಿಷಯದಲ್ಲಿ, ನಾವು, ಲಿಂಗ, ಜಾತಿ ಮತ್ತು ಧರ್ಮದ ಬಗ್ಗೆ ಭೇದ ಭಾವ ಮಾಡುವುದಿಲ್ಲ. ಅದರೂ, ಇದು, ವಿವಿಧ ಪಂಗಡಗಳಿಗೆ ರಚಿಸಿರುವ /

ವಿಶಿಷ್ಟವಾದ ವರ್ಗಕ್ಕೆ ಸೀಮಿತವಾದ ಯೋಜನೆಗಳಲ್ಲಿ ಭಾಗಿಯಾಗಲು/ ಯೋಜನೆ ಏರ್ಪಡಿಸಲು ಅಡ್ಡಿಯಾಗುವುದಿಲ್ಲ.

## 8.12.1 ಸಾಲಗಳು

### 8.12.1.1 ಸಾಮಾನ್ಯ ಮಾಹಿತಿ

ಎ. ನೀವು ಪಡೆದುಕೊಂಡ ಸಾಲ/ ಸೌಲಭ್ಯಗಳ ಸಂಬಂಧ ಅತಿ ಮುಖ್ಯ ನಿಬಂಧನೆ ಮತ್ತು ಷರತ್ತುಗಳ ಮಾಹಿತಿ (ಎಮ್.ಐ.ಟಿ.ಸಿ) ನೀಡುತ್ತೇವೆ

ಬಿ. ಸಾಲ/ ಕ್ರೆಡಿಟ್ ಕಾರ್ಡ್ ಮಂಜೂರಾತಿ ಬಗ್ಗೆ ನಿಮಗೆ ತಿಳಿಸುವಾಗ ಅನ್ವಯಿಸಲಾಗುವ ಶುಲ್ಕ ಮತ್ತು ದರಗಳೂ ಸೇರಿದಂತೆ ನಮ್ಮ ಸಾಲ ಮತ್ತು ಕ್ರೆಡಿಟ್ ಕಾರ್ಡ್ ಉತ್ಪನ್ನದ ಮುಖ್ಯ ಲಕ್ಷಣಗಳ ಬಗ್ಗೆ ಮಾಹಿತಿ ನೀಡುತ್ತೇವೆ.

ಸಿ. ನೀವು ಅರ್ಜಿ ಸಲ್ಲಿಸಲು ನಿಮ್ಮಿಂದ ನಮಗೆ ಬೇಕಾದ ಮಾಹಿತಿ/ ದಾಖಲೆಗಳ ಬಗ್ಗೆ ಸೂಚನೆ ನೀಡುತ್ತೇವೆ. ನಿಮ್ಮ ಗುರುತು, ವಿಳಾಸ, ನೌಕರಿ ಮುಂತಾದವುಗಳ ಸಂಬಂಧ ಯಾವ ದಾಖಲೆಗಳು ನಿಮ್ಮಿಂದ ಬೇಕಾಗುವುದು ಎಂಬುದರ ಬಗ್ಗೆ ತಿಳಿಸುತ್ತೇವೆ ಮತ್ತು ಕಾನೂನು ಹಾಗೂ ನಿಯಂತ್ರಣ ಅಗತ್ಯತೆಗಳನ್ನು ಪೂರೈಸುವುದಕ್ಕೆ ಶಾಸನಬದ್ಧ ಪ್ರಾಧಿಕಾರ ನಿರ್ಧರಿಸಬಹುದಾದ ಇತರ ಯಾವುದೇ ದಾಖಲೆ (ಉದಾಹರಣೆಗೆ ಶಾಶ್ವತ ಖಾತಾ ಸಂಖ್ಯೆ ವಿವರಗಳು[ಪ್ಯಾನ್ ವಿವರಗಳು])ಕೋರಿಕೆಯ ಬಗ್ಗೆ ಮಾಹಿತಿ ನೀಡುತ್ತೇವೆ.

ಡಿ. ನಿಮ್ಮನ್ನು ನಿಮ್ಮ ಮನೆಯಲ್ಲಿ / ಅಥವಾ ವ್ಯವಹಾರ ದೂರವಾಣಿ ಸಂಖ್ಯೆಗಳ / ಮತ್ತು /ಅಥವಾ ಖುದ್ದಾಗಿ ನಿಮ್ಮ ಮನೆಗೆ ಮತ್ತು / ಅಥವಾ ವ್ಯವಹಾರ ವಿಳಾಸದಲ್ಲಿ, ನಮ್ಮಿಂದ ಇದಕ್ಕಾಗಿಯೇ ನೇಮಕವಾದ ಏಜೆನ್ಸಿಗಳ ಮುಖಾಂತರ, ನಮಗೆ ಅವಶ್ಯವೆನಿಸಿದಲ್ಲಿ, ನೀವು ಸಾಲ/ ಕ್ರೆಡಿಟ್ ಕಾರ್ಡ್ ಅರ್ಜಿಯಲ್ಲಿ ನಮೂದಿಸಿರುವ ದಾಖಲೆಗಳನ್ನು ಪರಿಶೀಲಿಸುತ್ತೇವೆ.

ಇ. ನಿಮಗೆ ಮೀರೆಳೆತ ಸೌಲಭ್ಯ ನೀಡಿದಲ್ಲಿ ಅಥವಾ ಈಗಿನ ಮೀರೆಳೆತದ ಮಿತಿ ಹೆಚ್ಚಿಸಿದಲ್ಲಿ, ನಿಮಗೆ ನಿಮ್ಮ ಮೀರೆಳೆತವು ಬೇಡಿಕೆಯ ಮೇರೆಗೆ ಮರುಪಾವತಿಸಬೇಕೋ ಅಥವಾ ಇಲ್ಲವೋ ಎಂಬುದರ ಬಗ್ಗೆ ತಿಳಿಸುತ್ತೇವೆ. ಅಗತ್ಯ ಬಿದ್ದರೆ, ಮೀರೆಳೆತ ಮಾಡಿದ ಮೊತ್ತಕ್ಕೆ ಲೆಕ್ಕಾಚಾರ ಮಾಡುವ ವಿಧಾನದ ಬಗ್ಗೆ ಮತ್ತು ಅವಧಿ ಮೀರಿದ ಸಾಲಕ್ಕೆ ಹಾಕುವ ಬಡ್ಡಿ ಲೆಕ್ಕಾಚಾರದ ಬಗ್ಗೆಯೂ ತಿಳಿಸುತ್ತೇವೆ.

ಎಫ್. ಒಂದು ವೇಳೆ ದೂರವಾಣಿ ಮೂಲಕ ಸಾಲ ಸೌಲಭ್ಯ ಕೊಡುಗೆ/ ಅಂಗೀಕಾರ ನೀಡಿದರೆ ನಿಮ್ಮಿಂದ ಲಿಖಿತ ಸಮ್ಮತಿ ಅಥವಾ ಇನ್ನಾವುದೇ ಮಾರ್ಗದ ಮೂಲಕ ಬಂದ ನಂತರವೇ ಮತ್ತು ನಿಮ್ಮಿಂದ ಅಧಿಕೃತ ವಿದ್ಯುನ್ಮಾನ ಸಾಧನದ ಮೂಲಕ ಸ್ವೀಕೃತವಾದ ಸಮ್ಮತಿಯು ಅಧಿಕೃತವಾಗಿ ಮಾನ್ಯವಾದ ನಂತರವೇ ನಿಮ್ಮ ಖಾತೆಗೆ ಜಮಾ ಮಾಡಲಾಗುವುದು.

ಜಿ. ನಿಮ್ಮ ಕೋರಿಕೆಯಿಲ್ಲದೇ ಕ್ರೆಡಿಟ್ ಕಾರ್ಡ್ ಮಿತಿ ಹೆಚ್ಚಳ ಮತ್ತು ವೈಯಕ್ತಿಕ ಸಾಲ ಮಿತಿ ಮರು ಭರ್ತಿ ಸೇರಿದಂತೆ ಯಾವುದೇ ರೂಪದ ಪೂರ್ವ ಅಂಗೀಕೃತ ಸಾಲ ಸೌಲಭ್ಯ ಮುಂತಾದವುಗಳನ್ನು ನೀಡುವುದಿಲ್ಲ.

## 8.12.1.2. ಸಾಲಗಳಿಗೆ ಅರ್ಜಿಗಳು ಮತ್ತು ಅವುಗಳ ಸಂಸ್ಕರಣೆ

ಎ. ಒಂದು ಸಾಲನೀಡಿಕೆ ಉತ್ಪನ್ನವನ್ನು ನೀಡುವಾಗ, ಅರ್ಜಿಯ ಒಂದು ಭಾಗವಾಗಿ, ಅನ್ವಯಿಸುವ ಬಡ್ಡಿದರ, ಚರದರವೋ, ಸ್ಥಿರದರವೋ ಎಂಬುದರ ಬಗ್ಗೆ ಸಂಸ್ಕರಣಾ ಶುಲ್ಕ/ ದರಗಳು, ಒಂದು ವೇಳೆ ಸಾಲ ಮಂಜೂರಾಗದಿದ್ದರೆ/ಬಟವಾಡೆ ಮಾಡದಿದ್ದರೆ ಅಂತಹ ಶುಲ್ಕಗಳ ವಾಪಸಾತಿ ಮಾಡಲಾಗುವ ಮೊತ್ತದ ಬಗ್ಗೆ, ಅವಧಿ ಪೂರ್ವ ಪಾವತಿ ಮತ್ತು ಶುಲ್ಕಗಳು ಇದ್ದಲ್ಲಿ ಅವುಗಳ ಬಗ್ಗೆ ವಿಳಂಬ ಮರುಪಾವತಿಗಾಗಿ ವಿಧಿಸಲಾಗುವ ದಂಡ ಬಡ್ಡಿ ದರ ಇದ್ದಲ್ಲಿ, ಅವುಗಳ ಬಗ್ಗೆ, ನಿಮ್ಮ ಸಾಲಖಾತೆಗಳನ್ನು ಸ್ಥಿರ ದರದಿಂದ ಚರ ದರಕ್ಕೆ ಅಥವಾ ವಿರುದ್ಧವಾಗಿ ಬದಲಾಯಿಸಿಕೊಳ್ಳುವುದಕ್ಕಾಗಿ ಇರುವ ಶುಲ್ಕಗಳ ಬಗ್ಗೆ, ಯಾವುದೇ 'ಬಡ್ಡಿ ಪುನರ್ನಿರ್ಧರಣೆ' ಷರತ್ತಿನ ಅಸ್ತಿತ್ವದ ಬಗ್ಗೆ ಮತ್ತು ಸಾಲ ಪಡೆಯುವವನ ಹಿತಕ್ಕೆ ಧಕ್ಕೆ ತರುವಂತಹ ಇತರೇ ವಿಷಯಗಳ ಬಗ್ಗೆ ಮಾಹಿತಿ ನೀಡುತ್ತೇವೆ. ಇದರಿಂದ ನೀವು ಇತರೇ ಬ್ಯಾಂಕುಗಳೊಡನೆ ಅರ್ಥಪೂರ್ಣ ತುಲನೆ ಮಾಡಿ ಒಂದು ಪೂರ್ವ ನಿರ್ಧಾರಕ್ಕೆ ಬರಬಹುದು.

ಬಿ. ನೀವು ಸಾಲದ ಅರ್ಜಿಯ ಜೊತೆಯಲ್ಲಿ ಸಲ್ಲಿಸಬೇಕಾದ ದಾಖಲೆಗಳ ಪಟ್ಟಿಯನ್ನು ನೀಡುತ್ತೇವೆ. (ಕಾನೂನು ಮತ್ತು ನಿಯಂತ್ರಣಗಳ, ಅಗತ್ಯಗಳ ಅನುಗುಣವಾಗಿ). ಇದು ಅರ್ಜಿಯು ಎಲ್ಲಾ ವಿಧದಲ್ಲೂ ಪರಿಪೂರ್ಣವಾಗಿರಲು ಸಹಾಯಕಾರಿ ಯಾಗಿರುತ್ತದೆ. ಅಗತ್ಯ ಬಿದ್ದಲ್ಲಿ ಅರ್ಜಿಯನ್ನು ಭರ್ತಿ ಮಾಡಲು ನಿಮಗೆ ಸಹಾಯ ಮಾಡುತ್ತೇವೆ.

ಸಿ. ನೀವು ಅರ್ಜಿಯನ್ನು ಆನ್ ಲೈನಿನಲ್ಲಿ ಅಥವಾ ಖುದ್ದಾಗಿಯೇ ಸಲ್ಲಿಸಿರಲಿ, ನಿಮಗೆ ಅರ್ಜಿಯನ್ನು ವಿಲೇವಾರಿ ಮಾಡುವ ಕಾಲಮಿತಿ ಸೂಚನೆಯೊಂದಿಗಿನ ಸ್ವೀಕೃತಿಯನ್ನು ಕೊಟ್ಟೇ ಕೊಡುತ್ತೇವೆ.

ಡಿ. ರೂ. ಇಪ್ಪತ್ತು ಲಕ್ಷದ ನಿಮ್ಮ ಸಾಲದ ಅರ್ಜಿಯು ಎಲ್ಲಾ ವಿಧದಲ್ಲೂ ಪರಿಪೂರ್ಣವಾಗಿದ್ದು ಅಪೇಕ್ಷಿತ ದಾಖಲೆಗಳನ್ನು ಹೊಂದಿದ್ದರೆ , ನಿಮ್ಮ ಅರ್ಜಿಯು ತಲುಪಿದ ಮೂವತ್ತು ದಿನಗಳ ಒಳಗೆ ನಮ್ಮ ನಿರ್ಧಾರವನ್ನು ನಿಮಗೆ ತಿಳಿಸುತ್ತೇವೆ.

ಇ. ಸಾಮಾನ್ಯವಾಗಿ ಅರ್ಜಿ ಸಲ್ಲಿಸಿರುವ ವೇಳೆಯಲ್ಲಿಯೇ ಸಾಲ ಅರ್ಜಿಯ ಸಂಸ್ಕರಣೆಗೆ ಬೇಕಾದ ಎಲ್ಲಾ ವಿಷಯಗಳನ್ನು ಸಂಗ್ರಹಿಸಲಾಗುತ್ತದೆ. ಒಂದು ವೇಳೆ ನಮಗೆ ಹೆಚ್ಚುವರಿ ಮಾಹಿತಿ ಬೇಕಿದ್ದಲ್ಲಿ, ನಿಮ್ಮನ್ನು ತಕ್ಷಣವೇ ಸಂಪರ್ಕಿಸುತ್ತೇವೆ.

ಎಫ್. ನಿಮ್ಮ ಸಾಲ ಅರ್ಜಿಯು ತಿರಸ್ಕೃತ ವಾದುದಕ್ಕೆ ಕಾರಣಗಳನ್ನು ನಿಮಗೆ ತಿಳಿಸುತ್ತೇವೆ.

ಜಿ. ಮಂಜೂರಾದ ಮೊತ್ತ, ನಿಬಂಧನೆಯ ಷರತ್ತುಗಳು (ಪ್ಯಾರಾ 3.5 ಗಮನಿಸಿ) ನಿಮ್ಮ ಮತ್ತು ಬ್ಯಾಂಕಿನ ಹೊಣೆಗಾರಿಕೆ ಮುಂತಾದ ಮಾಹಿತಿಗಳನ್ನು ಒಳಗೊಂಡ ಮಂಜೂರಾತಿ ಪತ್ರವನ್ನು ನಿಮಗೆ ನೀಡುತ್ತೇವೆ.

ಎಚ್. ನಿಮಗೆ ಮರುಪಾವತಿ ವೇಳಾ ಸೂಚಿಯನ್ನು ಒದಗಿಸುತ್ತೇವೆ (ಸಾಲ ಅವಧಿಗೆ ಪಾವತಿಸಬೇಕಾದ ಮೂಲ ಮೊತ್ತ, ಬಡ್ಡಿಯ ಮೊತ್ತದ ಪಾವತಿ ವೇಳಾ ಸೂಚಿ) ಬಡ್ಡಿದರದ ಹೆಚ್ಚಳವಾದಾಗ ಸಮಾನ ಮಾಸಿಕ ಕಂತುಗಳು ಸ್ಥಿರವಾಗಿದ್ದು, ಅವಧಿಯ ಹೆಚ್ಚಳ ಮಾಡಿಕೊಳ್ಳುವುದಕ್ಕೆ ಅಥವಾ ಇದರ ವಿರುದ್ಧವಾಗಿ ಆಯ್ಕೆ ಮಾಡಿಕೊಳ್ಳುವುದಕ್ಕೆ ನಿಮಗೆ ಅವಕಾಶವಿದೆಯೇ ಎಂಬುದರ ಬಗ್ಗೆ ನಿಮಗೆ ತಿಳಿಸುತ್ತೇವೆ. ನೀವು ನಮಗೆ ಬರೆದುಕೊಟ್ಟ ಎಲ್ಲಾ ಸಾಲ ದಾಖಲೆಗಳ ಅಧಿಕೃತ ಪ್ರತಿಗಳನ್ನು, ಸಾಲ ದಾಖಲೆಗಳಲ್ಲಿ ತಿಳಿಸಿರುವ ಎಲ್ಲಾ ಅಡಕಗಳ ಒಂದೊಂದು ಪ್ರತಿಯೊಡನೆ ನಮ್ಮ ವೆಚ್ಚದಲ್ಲಿ ನಿಮಗೆ ಒದಗಿಸುತ್ತೇವೆ.

ಐ. ಯಾವುದೇ ಸಾಲದ ಸಂಬಂಧ ಸ್ವಾಮ್ಯದ ಸಲುವಾಗಿ ಭದ್ರತೆ/ ಸಹ ಭದ್ರತೆಗಾಗಿ ತೆಗೆದುಕೊಂಡ ಎಲ್ಲಾ ದಾಖಲೆಗಳ ಹಾಗೂ ನಿಮ್ಮಿಂದ ಸ್ವೀಕರಿಸಲ್ಪಟ್ಟ ದಿನಾಂಕಿತ/ ದಿನಾಂಕವಿಲ್ಲದ ಚೆಕ್ಕುಗಳ ಬಗ್ಗೆ ನಿಮಗೆ ಲಿಖಿತ ಸ್ವೀಕೃತಿಯನ್ನು ನೀಡುತ್ತೇವೆ.

ಜೆ. ಸಮಾನ ಮಾಸಿಕ ಕಂತುಗಳ/ ಸಾಲದ ಸಂಪೂರ್ಣ ಮೊತ್ತವನ್ನು ಸ್ವೀಕರಿಸಿದ ಸಂದರ್ಭದಲ್ಲಿ ನೀವು ನೀಡಿದ ನಗದೀಕರಣವಾಗದ ಚೆಕ್ಕುಗಳು/ ಮುಂದಿನ ದಿನಾಂಕಿತ ಚೆಕ್ಕುಗಳನ್ನು ನಿಮಗೆ ಹಿಂತಿರುಗಿಸುತ್ತೇವೆ.

ಕೆ. ಎಲ್ಲಾ ಬಾಕಿಗಳ ಬಗ್ಗೆ ಒಪ್ಪಂದದ ಅಥವ ಗೊತ್ತುಪಡಿಸಿದ ಪ್ರಕಾರ ಮರುಪಾವತಿ ಯಾದ 15 ದಿನಗಳ ಬಗ್ಗೆ ಎಲ್ಲಾ ಭದ್ರತೆಗಳನ್ನು/ದಾಖಲೆಗಳನ್ನು / ಅಡಮಾನ ಮಾಡಿದ ಆಸ್ತಿಗಳ ಸ್ವಾಮ್ಯಪತ್ರಗಳನ್ನು ನಿಮಗೆ ಹಿಂತಿರುಗಿಸುತ್ತೇವೆ. ಬೇರೆ ಯಾವುದೇ ಕ್ಲೇಮಿನ ಸಂಬಂಧ ಈಡು ಮಾಡಲು ಅಧಿಕಾರ ಚಲಾಯಿಸುವ ಮುನ್ನ, ಅಂತಹ ಕ್ಲೇಮಿನ ಪೂರ್ಣ ವಿವರಗಳೊಂದಿಗೆ ಸಾಕಷ್ಟು ಮುನ್ಸೂಚನೆ ನೀಡುತ್ತೇವೆ ಮತ್ತು ಸಂಬಂಧಪಟ್ಟ ಕ್ಲೇಮಿನ ಇತ್ಯರ್ಥ/ ಪಾವತಿಯಾಗುವವರೆಗೆ ಭದ್ರತೆಗಳು/ ದಾಖಲೆಗಳು/ ಅಡಮಾನ ಮಾಡಿದ ಆಸ್ತಿಗಳ ಸ್ವಾಮ್ಯಪತ್ರಗಳನ್ನು ನಮ್ಮಲ್ಲಿಯೇ ಇಟ್ಟುಕೊಂಡಿರುತ್ತೇವೆ. ನಿಮಗೆ ಭದ್ರತೆಗಳು/ ದಾಖಲೆಗಳು/ ಅಡಮಾನ ಮಾಡಿದ ಆಸ್ತಿಗಳ ಸ್ವಾಮ್ಯ ಪತ್ರಗಳ ಹಿಂತಿರುಗಿಸುವುದರ ಸಂಬಂಧ ಒಪ್ಪಂದ/ ಕರಾರಿನ ಪ್ರಕಾರ ಎಲ್ಲಾ ಬಾಕಿಗಳ ಪಾವತಿ ಮಾಡಿದ ದಿನಾಂಕದಿಂದ 15 ದಿನಗಳ ನಂತರದ ಯಾವುದೇ ವಿಳಂಬಕ್ಕೆ ನಿಮಗೆ ಪರಿಹಾರ ನೀಡುತ್ತೇವೆ.

ಎಲ್. ನಿಮ್ಮ ಖಾತೆಯ ಸ್ಥಿತಿ ಗತಿಯ ಬಗ್ಗೆ ಅದು ಅನುತ್ಪಾದಕ ಆಸ್ತಿಯಾಗಿ ಪರಿವರ್ತನೆ

ಯಾಗುವ ಮೊದಲೇ ಪತ್ರ / ಇ ಅಂಚೆ ಅಥವಾ ಎಸ್ ಎಮ್ ಎಸ್ ಮುಖಾಂತರ ತಿಳಿಸಲು ಪ್ರಯತ್ನಿಸುತ್ತೇವೆ.

ಎಮ್. ನಾವು ನೀಡಿದ ಸಾಲದ ಮೊತ್ತವನ್ನು ಹಿಂಪಡೆಯಲು / ಒಪ್ಪಂದದಲ್ಲಿ ಸೂಚಿಸಿರುವಂತೆ ತ್ವರಿತ ಪಾವತಿ/ ಸಾಮರ್ಥ್ಯ ಹೆಚ್ಚಳಕ್ಕೆ ಅಥವಾ ಹೆಚ್ಚುವರಿ ಭದ್ರತೆ ಬಯಸಿದಲ್ಲಿ, ನಿಮಗೆ ಸಾಕಷ್ಟು ಮುಂಚಿತವಾಗಿ ಸೂಚನೆ ನೀಡುತ್ತೇವೆ.

ಎನ್. ನಾವು ನಿಮಗೆ ನಿಮ್ಮ ಸಾವಧಿ/ಠೇವಣಿ ಆಧಾರಿತ /ಬೇಡಿಕೆ ಸಾಲದ ವಾರ್ಷಿಕ ಸಾಲ ವಿವರಣಾ ಪಟ್ಟಿಯನ್ನು ನೀಡುತ್ತೇವೆ.

ಒ ನಿಮಗೆ ಆಗಾಗ್ಗೆ ಸಾಲ ವಿವರಣಾ ಪಟ್ಟಿಯ ಅಗತ್ಯ ಬಿದ್ದಲ್ಲಿ, ಅದನ್ನು ನಾವು ದರಪಟ್ಟಿಯಲ್ಲಿರುವ ಶುಲ್ಕ ವಿಧಿಸಿ ನಿಮಗೆ ಒದಗಿಸುತ್ತೇವೆ.

ಪಿ. ಎಲ್ಲಾ ಬಾಕಿಗಳ ಬಗ್ಗೆ ಒಪ್ಪಂದದ ಅಥವ ಗೊತ್ತುಪಡಿಸಿದ ಪ್ರಕಾರ ಮರುಪಾವತಿ ಯಾದ 15 ದಿನಗಳ ಬಗ್ಗೆ ಎಲ್ಲಾ ಭದ್ರತೆಗಳನ್ನು ದಾಖಲೆಗಳನ್ನು / ಅಡವಗಾನ ಮಾಡಿದ ಆಸ್ತಿಗಳ ಸ್ವಾಮ್ಯಪತ್ರಗಳನ್ನು ನಿಮಗೆ ಹಿಂತಿರುಗಿಸುತ್ತೇವೆ. ಬೇರೆ ಯಾವುದೇ ಕ್ಲೇಮಿನ ಸಂಬಂಧ ಈಡು ಮಾಡಲು ಅಧಿಕಾರ ಚಲಾಯಿಸುವ ಮುನ್ನ, ಅಂತಹ ಕ್ಲೇಮಿನ ಪೂರ್ಣ ವಿವರಗಳೊಂದಿಗೆ ಸಾಕಷ್ಟು ಮುನ್ಸೂಚನೆ ನೀಡುತ್ತೇವೆ ಮತ್ತು ಸಂಬಂಧಪಟ್ಟ ಕ್ಲೇಮಿನ ಇತ್ಯರ್ಥ/ ಪಾವತಿಯಾಗುವವರೆಗೆ ಭದ್ರತೆಗಳು/ ದಾಖಲೆಗಳು/ ಅಡಮಾನ ಮಾಡಿದ ಆಸ್ತಿಗಳ ಸ್ವಾಮ್ಯಪತ್ರಗಳನ್ನು ನಮ್ಮಲ್ಲಿಯೇ ಇಟ್ಟುಕೊಂಡಿರುತ್ತೇವೆ.

ಕ್ಯು. ಅಡಮಾನ ಮಾಡಿದ ಆಸ್ತಿಗಳ ಸಂಬಂಧ ಬ್ಯಾಂಕಿಗೆ ನೀಡಲ್ಪಟ್ಟ ಭದ್ರತಾ ಪತ್ರ / ದಾಖಲೆ /ಆಸ್ತಿ ಪತ್ರಗಳನ್ನು ಎಲ್ಲಾ ಬಾಕಿ ಅಥವಾ ಒಪ್ಪಂದ ಮತ್ತು ಪಾವತಿ ಮಾಡಿದ ತರುವಾಯ ಹದಿನೈದು ದಿನಗಳ ನಂತರವೂ ನಿಮಗೆ ತಲುಪಿಸಲು ವಿಳಂಬವಾದಲ್ಲಿ ನಿಮಗೆ ಪರಿಹಾರ ನೀಡುತ್ತೇವೆ.

ಆರ್. ನೀವು ನಮ್ಮಲ್ಲಿ ಸಾಲ ಪಡೆದಾಗ ನೀಡಿದ್ದ ಭದ್ರತೆ/ದಾಖಲೆ/ ಆಸ್ತಿ ಪತ್ರಗಳು ಕಳೆದು ಹೋದಲ್ಲಿ ಉಂಟಾದ ನಷ್ಟಕ್ಕೆ ಪರಿಹಾರ ನೀಡುತ್ತೇವೆ. ಕಳೆದು ಹೋದ ಬಗ್ಗೆ ಒಂದು ಪ್ರಮಾಣ ಪತ್ರವನ್ನು ನೀಡುತ್ತೇವೆ. ಮತ್ತು ಅವುಗಳ ಪ್ರತಿಯನ್ನು ಪಡೆಯುವುದಕ್ಕೆ ನಿಮಗೆ ಸಹಾಯ ಮಾಡುತ್ತೇವೆ.

ಎಸ್. ನಿಮ್ಮ ಸಾಲ ಖಾತೆಯ ವರ್ಗಾವಣೆಯ ಬಗ್ಗೆ ನಿಮ್ಮಿಂದ ಅಥವಾ ಬ್ಯಾಂಕು ಅಥವಾ ಹಣಕಾಸು ಸಂಸ್ಥೆಯಿಂದ ಕೋರಿಕೆ ಬಂದಲ್ಲಿ ಅದನ್ನು ಸಹಜ ಗತಿಯಲ್ಲಿ ಸಂಸ್ಕರಿಸುತ್ತೇವೆ. ಮತ್ತು ನಮ್ಮ ಒಪ್ಪಿಗೆ ಅಥವಾ ನಿರಾಕರಣೆಯನ್ನು ಕೋರಿಕೆ ತಲುಪಿದ ಎರಡು ವಾರಗಳಲ್ಲಿ ತಿಳಿಸುತ್ತೇವೆ.

ಟಿ. ನಾವು ಅವಧಿ ಮುಂಚಿತ ತೀರಿಕೆ ಶುಲ್ಕ/ ಅವಧಿ ಮುಂಚಿತ ತೀರಿಕೆ ದಂಡವನ್ನು ಚರ ಬಡ್ಡಿದರ ಗೃಹ ಸಾಲಗಳಿಗೆ ವಿಧಿಸುವುದಿಲ್ಲ.

## 8.13 ಖಾತರಿಗಳು

ಎ. ನಿಮ್ಮ ಸಾಲಗಳಿಗಾಗಿ ಖಾತರಿ ಅಥವಾ ಮೂರನೇ ವ್ಯಕ್ತಿಯ ಖಾತರಿ ಅಥವಾ ಭದ್ರತೆಯನ್ನು ನಾವು ಒಪ್ಪಬೇಕಾದರೆ ನಿಮ್ಮ ಹಣ ಕಾಸಿನ ಬಗ್ಗೆ ಗೌಪ್ಯ ಮಾಹಿತಿಯನ್ನು ಖಾತರಿ ಅಥವಾ ಭದ್ರತೆಯನ್ನು ನೀಡುತ್ತಿರುವ ವ್ಯಕ್ತಿಗೆ ಅಥವಾ ಅವರ ಕಾನೂನು ಸಲಹೆಗಾರರಿಗೆ ನೀಡಲು ನಿಮ್ಮಿಂದ ಲಿಖಿತ ಅನುಮತಿಯನ್ನು ನಾವು ಕೇಳಬಹುದು.

ಬಿ. ಹಾಗೆಯೇ,

i. ಅವರ ಬದ್ಧತೆ ಮತ್ತು ಅವರ ನಿರ್ಣಯದಿಂದುಂಟಾಗುವ ಪರಿಣಾಮಗಳ ಬಗ್ಗೆ ಖಚಿತವಾಗಿ ತಿಳಿಯಲು ಸ್ವತಂತ್ರವಾಗಿ ಕಾನೂನು ಸಲಹೆಯನ್ನು ಪಡೆಯುವುದಕ್ಕೆ ಪ್ರೋತ್ಸಾಹಿಸಲಾಗುವುದು ಸೂಕ್ತ ಕಂಡಲ್ಲಿ ಅವರಿಗೆ ಸಹಿ ಮಾಡಲು ನೀಡುವ ದಾಖಲೆಗಳಲ್ಲಿ ಈ ಶಿಫಾರಸ್ಸನ್ನು ನಾವು ಸ್ಪಷ್ಟ ಮತ್ತು ನಿಖರ ಸೂಚನೆಯನ್ನು ಅಳವಡಿಸಲಾಗುವುದು.

ii. ಖಾತರಿ ಅಥವ ಇತರ ಭದ್ರತೆಯನ್ನು ನೀಡುವ ಮೂಲಕ ಅವರು ನಿಮ್ಮ ಬದಲಾಗಿ ಅಥವಾ ನಿಮ್ಮೊಂದಿಗೇ ಸಾಲಕ್ಕೆ ಹೊಣೆಯಾಗಬಹುದೆಂಬುದನ್ನು ಸೂಚಿಸಲಾಗುವುದು.

iii. ಅವರ ಹೊಣೆಗಾರಿಕೆ ಏನೆಂಬುದನ್ನು ತಿಳಿಸಲಾಗುವುದು

iv. ನಿಮಗೆ ಮಂಜೂರಾದ ಸಾಲಗಳ ಸಂಬಂಧ ನಿಬಂಧನೆ ಮತ್ತು ಷರತ್ತುಗಳ ಪ್ರತಿಯೊಂದನ್ನು ವೆಚ್ಚ ರಹಿತವಾಗಿ ಖಾತರಿದಾರರಿಗೆ ನೀಡಲಾಗುವುದು.

ಸಿ) ನೀವು ಸಾಲಗಳಿಗೆ ಖಾತರಿ ನೀಡುವುದಿದ್ದಲ್ಲಿ ನಾವು ನಿಮಗೆ ಕೆಳಗಿನ ಮಾಹಿತಿ ಯನ್ನು ನೀಡುತ್ತೇವೆ.

i. ಖಾತರಿದಾರರಾಗಿ ನಿಮ್ಮ ಹೊಣೆಗಾರಿಕೆ

ii. ಬ್ಯಾಂಕಿಗೆ ನೀವು ಪಾವತಿಸಬೇಕಾದ ಹೊಣೆಗಾರಿಕೆ ಮೊತ್ತ.

iii. ಯಾವ ಸಂದರ್ಭಗಳಲ್ಲಿ ನೀವು ನಿಮ್ಮ ಹೊಣೆಗಾರಿಕೆಯ ಮೊತ್ತವನ್ನು ಪಾವತಿಸಬೇಕೆಂಬುದನ್ನು ಹೇಳಲಾಗುವುದು

iv. ನೀವು ಖಾತರಿದಾರರಾಗಿ ಪಾವತಿಸಲು ವಿಫಲರಾದಲ್ಲಿ ಬ್ಯಾಂಕಿನಲ್ಲಿರುವ ನಿಮ್ಮ ಇತರೆ ಹಣದ ಮೇಲೆ ನಮಗೆ ಅಧಿಕಾರವಿದೆಯೇ ಎಂಬ ಬಗ್ಗೆ ತಿಳಿಸುತ್ತೇವೆ.

v. ಖಾತರಿದಾರರಾಗಿ ನಿಮ್ಮ ಹೊಣೆಗಾರಿಕೆಯು ಒಂದು ನಿರ್ದಿಷ್ಟ ಮೊತ್ತಕ್ಕೆ ಅನ್ವಯಿಸುವುದೇ ಅಥವಾ ಮಿತಿರಹಿತವೇ ಎಂಬುದನ್ನು ತಿಳಿಸುತ್ತೇವೆ.

vi. ಖಾತರಿದಾರರಾಗಿ ನಿಮ್ಮ ಹೊಣೆಗಾರಿಕೆಯು ಯಾವ ಕಾಲ/ ಸಂದರ್ಭದಲ್ಲಿ ಪಾವತಿಸಬೇಕಾಗುತ್ತದೆ ಹಾಗೂ ಇದರ ಬಗ್ಗೆ ನಿಮಗೆ ಯಾವ ರೀತಿಯಲ್ಲಿ ತಿಳಿಸಲಾಗುವುದು ಎಂಬುದನ್ನು ಸೂಚಿಸುತ್ತೇವೆ.

vii. ನೀವು ಖಾತರಿಯಾಗಿ ನಿಂತ ಸಾಲಗಾರನ ಆರ್ಥಿಕ ಸ್ಥಿತಿಯಲ್ಲಿ ಪ್ರತಿಕೂಲ ಬದಲಾವಣೆಯುಂಟಾಗಿದ್ದರೆ ನಿಮಗೆ ತಿಳಿಸಲಾಗುವುದು.

ಡಿ. ಒಪ್ಪಂದ/ ಕರಾರಿನ ಪ್ರಕಾರ ಎಲ್ಲಾ ಬಾಕಿಯ ಮರುಪಾವತಿಯಾದ 15 ದಿನಗಳ ಒಳಗೆ ಎಲ್ಲಾ ಭದ್ರತೆಗಳು/ ದಾಖಲೆಗಳು/ ಅಡಮಾನ ಮಾಡಿದ ಆಸ್ತಿಯ ಸ್ವಾಮ್ಯ ಪತ್ರಗಳನ್ನು ನಿಮಗೆ ಹಿಂತಿರುಗಿಸುತ್ತೇವೆ.

ಇ. ನಿಮಗೆ ಭದ್ರತೆಗಳು/ದಾಖಲೆಗಳು/ ಅಡಮಾನ ಮಾಡಿದ ಆಸ್ತಿಗಳ ಸ್ವಾಮ್ಯ ಪತ್ರಗಳ ಹಿಂತಿರುಗಿಸುವುದರ ಸಂಬಂಧ, ಒಪ್ಪಂದ/ ಕರಾರಿನ ಪ್ರಕಾರ ಎಲ್ಲಾ ಬಾಕಿಗಳ ಮರುಪಾವತಿ ಮಾಡಿದ ದಿನಾಂಕದಿಂದ 15 ದಿನಗಳ ನಂತರದ ಯಾವುದೇ ವಿಳಂಬಕ್ಕೆ ನಿಮಗೆ ಪರಿಹಾರ ನೀಡುತ್ತೇವೆ.

ಎಫ್. ಭದ್ರತೆಗಳು ಮತ್ತು ದಾಖಲೆಗಳು ಕಳೆದು ಹೋದ ಪಕ್ಷದಲ್ಲಿ ಈ ನಷ್ಟವನ್ನು ನಾವು ಭರಿಸಿಕೊಡುತ್ತೇವೆ. ಭದ್ರತೆ/ ದಾಖಲೆಗಳು ಕಳೆದು ಹೋದ ಬಗ್ಗೆ ನಾವು ಒಂದು ಪ್ರಮಾಣ ಪತ್ರವನ್ನು ನೀಡುತ್ತೇವೆ ಹಾಗೆಯೇ 'ದಾಖಲೆಗಳ ?ನಕಲು ಪ್ರತಿಗಳನ್ನು ಪಡೆಯಲು ಸಹಕರಿಸುತ್ತೇವೆ.

## 8.14 ಮಾಹಿತಿ ನೋಂದಣಿ ಕೇಂದ್ರ

ಸ್ಥಿರಾಸ್ತಿಯನ್ನು ಮೂಲವಾಗಿ ಅಥವಾ ಸಹಭದ್ರತೆಯಾಗಿ ನೀಡಿ ಸಾಲ ಸೌಲಭ್ಯ ಪಡೆದಲ್ಲಿ ನಿಮಗೆ ಮಾಹಿತಿ ನೋಂದಣಿ ಕೇಂದ್ರವು ಕಾರ್ಯ ನಿರ್ವಹಿಸುತ್ತಿರುವುದರ ಬಗ್ಗೆ ಮತ್ತು ಯಾವುದೇ ಸಾಲ ನೀಡುವ ವ್ಯಕ್ತಿಗೆ ಅಥವಾ ಸ್ಥಿರಾಸ್ತಿಯ ವ್ಯವಹಾರ ನಡೆಸಲು ಇಚ್ಛಿಸುವ ವ್ಯಕ್ತಿಗೆ ಅವರ ದಾಖಲೆಗಳು ಪರಿಶೀಲನೆಗೆ ದೊರಕುತ್ತದೆ ಎಂಬ ವಿಷಯವನ್ನು ನಿಮಗೆ ತಿಳಿಸುತ್ತೇವೆ.

## 8.15 ಬಾಕಿ ಮೊತ್ತದ ಇತ್ಯರ್ಥ

ಎ. ನೀವು ನಿಮ್ಮ ಪಾವತಿಯನ್ನು ಸಕಾಲದಲ್ಲಿ ಮಾಡಲಾಗದಿದ್ದರೆ ಅದನ್ನು ಆದಷ್ಟು ಬೇಗ ನಮಗೆ ತಿಳಿಸಬೇಕು.

ಬಿ. ನಮ್ಮ ನಿಯಂತ್ರಣ ಮಾರ್ಗದರ್ಶಿ ಸೂತ್ರ ಮತ್ತು ನಮ್ಮ ನೀತಿಯನುಸಾರವಾಗಿ ನೈಜ ಹಣ ಕಾಸಿನ ತೊಂದರೆಗಳ ಎಲ್ಲಾ ಪ್ರಕರಣಗಳಿಗೆ ಸಹಾನುಭೂತಿ ಮತ್ತು ಸಕಾರಾತ್ಮಕತೆಯಿಂದ ಸ್ಪಂದಿಸುತ್ತೇವೆ.

ಸಿ. ನಿಮ್ಮ ತೊಂದರೆಗಳ ನಿವಾರಣೆಗಾಗಿ ನಿಮಗೆ ಸಹಾಯ ಮಾಡಲು ಯತ್ನಿಸುತ್ತೇವೆ.

ಡಿ. ಒಂದು ವೇಳೆ ನಿಮಗೆ ಸಾಲ ಮರುಪಾವತಿಗಾಗಿ ಏಕ ಕಾಲಿಕ ತೀರುವಳಿ ಸೌಲಭ್ಯ ನೀಡಿದರೆ ಅದರ ವಿವರಗಳನ್ನು ನಿಮಗೆ ತಿಳಿಸುತ್ತೇವೆ.

ಇ. ನಿಮಗೆ ನೀಡಲಾದ ಏಕ ಕಾಲಿಕ ತೀರುವಳಿ ಸೌಲಭ್ಯದ ನಿಬಂಧನೆ ಮತ್ತು ಷರತ್ತುಗಳನ್ನು ಲಿಖಿತವಾಗಿ ನೀಡುತ್ತೇವೆ.

ಎಫ್ ನಿಮ್ಮ ಬಾಕಿ ಮೊತ್ತವನ್ನು ಏಕ ಕಾಲಿಕ ತೀರುವಳಿ ಸೌಲಭ್ಯದಡಿ ಇತ್ಯರ್ಥ ಗೊಳಿಸಿದರೆ ಸಾಲ ಮಾಹಿತಿ ಕೇಂದ್ರಗಳಲ್ಲಿ ನಿರ್ವಹಿಸಲಾದ ನಿಮ್ಮ ಸಾಲ ದಾಖಲೆಗಳಲ್ಲಿ ಸಾಲ ಪಡೆಯುವ ಸಾಮರ್ಥ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯ ಬಗ್ಗೆಯೂ ನಾವು ತಿಳಿಸುತ್ತೇವೆ.

## 8.16 ಸಾಲಗಳ/ ಕಾರ್ಡುಗಳ ಬಾಕಿ ಮೊತ್ತಗಳ ಮಾರಾಟ

ಎ. ಒಂದು ವೇಳೆ ನಿಮ್ಮ ಸಾಲಗಳು/ಕಾರ್ಡುಗಳ ಬಾಕಿ ಮೊತ್ತಗಳನ್ನು ಬೇರೆ ಸಂಸ್ಥೆಗಳಿಗೆ ಮಾರಾಟ ಮಾಡಿದ ಸಂದರ್ಭದಲ್ಲಿ ಆ ಸಂಸ್ಥೆಯ ಹೆಸರು ಮತ್ತು ಸಂಪರ್ಕ ವಿವರಗಳನ್ನು ಹಾಗೂ ಅದಕ್ಕೆ ವರ್ಗಾಯಿಸಲಾದ ನಿಮ್ಮ ಸಾಲ/ ಬಾಕಿ ಮೊತ್ತಗಳನ್ನು ನಿಮಗೆ ತಿಳಿಸುತ್ತೇವೆ. ಸಾಮಾನ್ಯವಾಗಿ ಗುಣಮಟ್ಟವಿಲ್ಲದ ನಿಮ್ಮ ಸಾಲ/ ಬಾಕಿಯನ್ನು ಆಸ್ತಿ ಮರು ನಿರ್ಮಾಣ ಸಂಸ್ಥೆಗಳಿಗೆ ನಿಯೋಜನೆಯ ಮೂಲಕ ಮಾರಾಟ ಮಾಡಲು ಪರಿಗಣಿಸಲಾಗುತ್ತದೆ.ಸಂಧಾನದ ಮೂಲಕ ಬಾಕಿಯನ್ನು ಇತ್ಯರ್ಥ ಪಡಿಸಿದ ಸಂದರ್ಭದಲ್ಲಿ ಅಂತಹ ಆಸ್ತಿಗಳನ್ನು ಆಸ್ತಿ ಮರು–ನಿರ್ಮಾಣ ಸಂಸ್ಥೆಗಳಿಗೆ ನಿಯೋಜಿಸುವ ಪ್ರಶ್ನೆ ಬರುವುದಿಲ್ಲ.

ಬಿ. ಅಂತಹ ಸಂದರ್ಭದಲ್ಲಿ ನೀವು ಬಾಕಿ ಮೊತ್ತವನ್ನು ವರ್ಗಾಯಿತ ಸಂಸ್ಥೆಗೆ ಪಾವತಿಸಬೇಕಾಗುತ್ತದೆ.

ಸಿ. ಅಂತಹ ವರ್ಗಾಯಿತ ಸಂಸ್ಥೆಗಳು ನಿಮ್ಮ ಸಾಲ ಮಾಹಿತಿಯನ್ನು ಸಾಲ ಮಾಹಿತಿಸಂಸ್ಥೆಗಳಿಗೆ ವರದಿ ನೀಡುವುದನ್ನು ಮುಂದುವರಿಸುತ್ತವೆ

ಡಿ. ನಿಮ್ಮ ಸಾಲ ಬಾಕಿಯನ್ನು ವರ್ಗಾಯಿಸಲಾದ ಸಂಸ್ಥೆಯ ಬಗ್ಗೆ ಏನಾದರೂ ದೂರುಗಳಿದ್ದರೆ ಬಗೆಹರಿಸಲು ಸಹಾಯ ಮಾಡುತ್ತೇವೆ.

## 8.17 ವಿದ್ಯುನ್ಮಾನ ಬ್ಯಾಂಕಿಂಗ್

### 8.17.1 ವೈಯಕ್ತಿಕ ಗುರುತು ಸಂಖ್ಯೆಗಳು ಮತ್ತು ಪ್ರವೇಶಾನುಮತಿ ಸಂಖ್ಯೆಗಳು

ಎ. ನಿಮ್ಮ ಭದ್ರತೆಗಾಗಿ ವೈಯಕ್ತಿಕ ಗುರುತು ಸಂಖ್ಯೆಗಳು(ಪಿ ಐ ಎನ್)ಮತ್ತು ಪ್ರವೇಶಾನುಮತಿ ಸಂಖ್ಯೆಗಳ (ಪಾಸ್ ವರ್ಡ್) ಗೌಪ್ಯತೆ ಕಾಪಾಡಿಕೊಳ್ಳಲು ಸಂಖ್ಯೆಗಳ ಉತ್ಪತ್ತಿ ಸಂಗ್ರಹಣೆ ಮತ್ತು ಟರ್ಮಿನಲ್ ಭದ್ರತೆಗಳ ಬಗ್ಗೆ ಅಂತರ ರಾಷ್ಟ್ರೀಯ ಮಾನದಂಡಗಳನ್ನು ಅನುಸರಿಸುತ್ತೇವೆ.

ಬಿ. ನಿಮ್ಮ ಗುರುತು ಮಾಹಿತಿಯನ್ನು ಖಾತರಿ ಪಡಿಸಿಕೊಂಡು ನಿಮ್ಮ ಪ್ರವೇಶಾನುಮತಿ ಸಂಖ್ಯೆಯನ್ನು ನಾವು ನಿಮ್ಮ ಶಾಖೆಗೆ ಅಥವಾ ನಮ್ಮ ದಾಖಲೆಯಲ್ಲಿರುವ ನಿಮ್ಮ

ವಿಳಾಸಕ್ಕೆ ತಿಳಿಸುತ್ತೇವೆ. ನೀವು ನಿಮ್ಮ ಅನುಕೂಲಕ್ಕೆ ತಕ್ಕಂತೆ  ಪ್ರವೇಶಾನುಮತಿ ಸಂಖ್ಯೆಯನ್ನು ಉತ್ಪತ್ತಿ ಮಾಡಿಕೊಳ್ಳಬಹುದು.

ಸಿ. ನಿಮ್ಮ ಖಾತೆಯ ಸುರಕ್ಷತೆಗಾಗಿ ಈ ಕೆಳಗೆ ನೀಡಲಾದಂತಹ ಸರಳ ವೈಯಕ್ತಿಕ ಗುರುತು ಸಂಖ್ಯೆ ಅಥವಾ ಸರಳ ಪ್ರವೇಶಾನುಮತಿ ಸಂಖ್ಯೆಗಳಿಂದ ದೂರವಿಡಿ

i. ಜನ್ಮ ದಿನಗಳು, ತಿಂಗಳುಗಳು ಅಥವಾ ವರ್ಷಗಳು

ii. ಅನುಕ್ರಮ ಸಂಖ್ಯೆಗಳು(ಉದಾಹರಣೆಗೆ –3456)

iii. ಸುಲಭವಾಗಿ ಊಹಿಸಬಹುದಾದ ಸಮೂಹ ಸಂಖ್ಯೆಗಳು(ಉದಾಹರಣೆಗೆ– 1111)

iv. ನಿಮ್ಮ ದೂರವಾಣಿ ಸಂಖ್ಯೆಯ ಭಾಗಶಃ ಸಂಖ್ಯೆಗಳು.

v. ನಿಮ್ಮ ಯಾವುದೇ ಕಾರ್ಡುಗಳ ಮೇಲೆ ಕ್ರಮವಾಗಿ ಮುದ್ರಿಸಲಾದ ಸಂಖ್ಯೆಗಳ ಕ್ರಮದಲ್ಲೇ ಇರುವ ಸಂಖ್ಯೆಗಳ ಭಾಗಶಃ ಸಂಖ್ಯೆಗಳು

vi. ಸುಲಭವಾಗಿ ದೊರಕಬಲ್ಲ ಇತರ ವೈಯಕ್ತಿಕ ವಿವರ(ಉದಾಹರಣೆಗೆ– ಚಾಲನಾ ಪರವಾನಗಿ, ಅಥವಾ ನಿಮ್ಮೊಂದಿಗೆ ಸುಲಭವಾಗಿ ಬೆರೆತುಕೊಂಡಿರುವ ಇತರ ಸಂಖ್ಯೆಗಳು)ಮತ್ತು

vii. ಕುಟುಂಬದ ಸದಸ್ಯರ, ಸಾಕು ಪ್ರಾಣಿಗಳ ಅಥವಾ ಬೀದಿ  ಹೆಸರುಗಳು.

(ಡಿ) ನಿಮ್ಮ ವೈಯಕ್ತಿಕ ಗುರುತು ಸಂಖ್ಯೆ ಅಥವಾ ಪ್ರವೇಶಾನುಮತಿ ಸಂಖ್ಯೆಗಳನ್ನು ಕಾಪಾಡಿಕೊಳ್ಳಿ.

ಇವುಗಳು ಬೇಡ/ಮಾಡ ಕೂಡದು

i. ಮತ್ತೊಬ್ಬರು ನಿಮ್ಮ ಕಾರ್ಡ್, ಪಿನ್/ಪಾಸ್ ವರ್ಡ್ ಅಥವಾ ಇತರ ಭದ್ರತಾ ಮಾಹಿತಿಯನ್ನು ಉಪಯೋಗಿಸಲು ಆಸ್ಪದ ಕೊಡುವುದು.

ii. ನಿಮ್ಮ ಕಾರ್ಡ್, ಪಿನ್/ಪಾಸ್ ವರ್ಡ್ ಅಥವಾ ಇತರ ಭದ್ರತಾ ಮಾಹಿತಿಯನ್ನು ಬರೆದಿಡುವುದು.

iii. ನಿಮ್ಮ ಮೊಬೈಲಿನಲ್ಲಿ / ಬ್ರೌಸರಿನಲ್ಲಿ ನಿಮ್ಮ ಕಾರ್ಡ್, ಪಿನ್/ಪಾಸ್ ವರ್ಡ್ ಅಥವಾ ಇತರ ಭದ್ರತಾ ಮಾಹಿತಿಯನ್ನು ಸಂಗ್ರಹಿಸಿಡುವುದು.

iv. ಬ್ಯಾಂಕಿನ ಅಧಿಕೃತ ಪ್ರತಿನಿಧಿಗಳೆಂದು ಹೇಳಿಕೊಳ್ಳುವ ವ್ಯಕ್ತಿಗಳೂ ಸೇರಿದಂತೆ ಯಾರಿಗೇ ಆಗಲಿ ನಿಮ್ಮ ಖಾತಾ ವಿವರಗಳನ್ನು ನೀಡುವುದು.

v. ಬ್ಯಾಂಕ್ ಖಾತಾ ವಿವರಗಳನ್ನು ಕೇಳುವ ಯಾವುದೇ ಉದ್ದೇಶ, ಯಾವುದೇ ಕೋರಿಕೆಗಳಿಗೆ ಸ್ಪಂದಿಸುವುದು.

vi. ಹಲವು ನಿರ್ದಿಷ್ಟ ವಿದೇಶಿ ಸಂಸ್ಥೆಗಳು / ವ್ಯಕ್ತಿಗಳು ಅಥವಾ ಅವರನ್ನು ಪ್ರತಿನಿಧಿಸುವ ಭಾರತೀಯ ನಿವಾಸಿಗಳ ಸುಳ್ಳು ಕೊಡುಗೆಗಳು/ ಲಾಟರಿ ಗೆಲುವುಗಳು/ವಿದೇಶಿ ಕರೆನ್ಸಿಯಲ್ಲಿರುವ ಅಗ್ಗದ ನಿಧಿಯ ವರ್ಗಾವಣೆಯಂತಹ ಪ್ರಲೋಭನೆಗಳಿಗೆ ಬಲಿಯಾಗಬೇಡಿ. ಇಂತಹ ಕೊಡುಗೆಗಳು, ಸಾಮಾನ್ಯವಾಗಿ ಪತ್ರಗಳ, ಇ–ಅಂಚೆ, ಮೊಬೈಲ್ ಕರೆ, ಎಸ್ಎಮ್ಎಸ್, ಮೂಲಕ ನೀಡಲ್ಪಡುತ್ತವೆ.

ಇದನ್ನು ಮಾಡಿ

i. ನಿಮ್ಮ ಪಿನ್, ಪಾಸ್ ವರ್ಡ್ ಮತ್ತು ಇತರೆ ಭದ್ರತಾ ಮಾಹಿತಿಯನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ. ಮತ್ತು ಇವುಗಳನ್ನು ನೀವು ಲಿಖಿತವಾಗಿ ಸ್ವೀಕರಿಸಿದ್ದಲ್ಲಿ ಅದನ್ನು ನಾಶ ಪಡಿಸಿ.

ii. ನಿಮ್ಮ ಪಿನ್–ಅನ್ನು ಬದಲಾಯಿಸುವಾಗ ಹೊಸ ಪಿನ್ ಸಂಖ್ಯೆಯನ್ನು ಜಾಗರೂಕತೆಯಿಂದ ಆಯ್ಕೆ ಮಾಡಿಕೊಳ್ಳಿ.

iii. ನಿಮ್ಮ ಪಾಸ್ ವರ್ಡ್ ಸುಲಭವಾಗಿರದೇ ಕಠಿಣವಾಗಿರಲಿ ಮತ್ತು ಕಾಲ ಕಾಲಕ್ಕೆ ಬದಲಾಯಿಸಿರಿ.

iv. ನಿಮ್ಮ ಕಾರ್ಡನ್ನು ಭದ್ರವಾಗಿಟ್ಟು ಕೊಳ್ಳಿ ಮತ್ತು ನಿಮ್ಮ ಪಿನ್, ಪಾಸ್ ವರ್ಡ್ ಮತ್ತು ಇತರ ಭದ್ರತಾ ಮಾಹಿತಿಯು ಯಾವಾಗಲೂ ಗೌಪ್ಯವಾಗಿರುವಂತೆ ನೋಡಿಕೊಳ್ಳಿ.

v. ಎ ಟಿ ಎಮ್ ಗಳಲ್ಲಿ ಅಥವಾ ಕಾರ್ಡ್ ಉಜ್ಜುವ ಸಂದರ್ಭದಲ್ಲಿ ನಿಮ್ಮ ಪಿನ್ ಸಂಖ್ಯೆಯನ್ನು ಯಾರೂ ಗಮನಿಸದಂತೆ ನೋಡಿಕೊಳ್ಳಿ.

vi. ನಿಮ್ಮ ಪಿನ್ ಸಂಖ್ಯೆ ಅಥವಾ ಪಾಸ್ ವರ್ಡ್ ಬಹಿರಂಗವಾಗಿದೆ ಅಥವಾ ಆಗಿರಬಹುದೆಂಬುದು ನಿಮ್ಮ ಅರಿವಿಗೆ ಬಂದರೆ ನಮಗೆ ತಿಳಿಸಿ ಅಂತಹ ಸಂದರ್ಭದಲ್ಲಿ ನಿಮ್ಮ ಪಿನ್ ಸಂಖ್ಯೆ/ ಪಾಸ್ವರ್ಡ್ ತಕ್ಷಣ ಬದಲಾಯಿಸಿ.

vii. ಬೇರೆ ಬೇರೆ ಕಾರ್ಡ್ ಅಥವಾ ಉಪಕರಣಗಳಿಗೆ ಬೇರೆ ಬೇರೆ ಪಿನ್/ಪಾಸ್ ವರ್ಡ್ ಬಳಸಿ.

viii. ನಿಮ್ಮ ಕಂಪ್ಯೂಟರ್/ ಮೊಬೈಲ್ ಗೆ ಪಾಸ್ ವರ್ಡನ್ನು ಅಳವಡಿಸಿ. ಇದರಿಂದ ನಿಮ್ಮ ಅನುಮತಿಯಿಲ್ಲದೇ ಇವುಗಳನ್ನು ಬಳಸುವುದು ಅಸಾಧ್ಯ.

(ಇ) ನಿಮ್ಮ ಪಿನ್ ಮತ್ತು ಇತರೆ ಭದ್ರತಾ ಮಾಹಿತಿ ಬೇರೆಯವರಿಗೆ ತಿಳಿದುಬಂದ ಸಂದರ್ಭದಲ್ಲಿ, ನೀವು ನಮಗೆ ತಿಳಿಸಿದಲ್ಲಿ ದುರ್ಬಳಕೆಯಾಗುವುದನ್ನು ತಡೆಯುವುದಕ್ಕೆ ನಾವು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

## 8.17.2 ಅಂತರ್ಜಾಲ ಬ್ಯಾಂಕಿಂಗ್

ಎ. ಸುರಕ್ಷಿತ ಅಂತರ್ಜಾಲ ಬ್ಯಾಂಕಿಂಗ್ ವ್ಯವಹಾರಗಳಿಗಾಗಿ ಭದ್ರತಾ ವ್ಯವಸ್ಥೆಯನ್ನು ಒದಗಿಸಲು ನಾವು ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಬಿ. ನಮ್ಮ ಅಂತರ್ಜಾಲ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ತಂತ್ರ ಜ್ಞಾನವು ಸುರಕ್ಷಿತ ವಾಗಿರಲು ಕ್ರಮ ತೆಗೆದುಕೊಳ್ಳುವುದನ್ನು ಖಚಿತಪಡಿಸುತ್ತೇವೆ ಮತ್ತು ಈ ಉದ್ದೇಶಕಾಗಿ ಇವುಗಳನ್ನು ನಿಯತವಾಗಿ ಇತ್ತೀಚಿನವರೆಗೂ ಪರಾಮರ್ಶಿಸಲಾಗು ತ್ತದೆ.

ಸಿ. ಆನ್– ಲೈನ್ ಭದ್ರತೆಯ ಬಗ್ಗೆ  ನಿಯತವಾದ ಇ–ಮೇಲ್‌ಗಳು /ನಮ್ಮ ವೆಬ್ ತಾಣಗಳ ಮುಖಾಂತರ, ಗ್ರಾಹಕರ ವ್ಯವಹಾರ ಕೇಂದ್ರಗಳಾದ ಎ. ಟಿ ಎಮ್ ಗಳಂತಹವುಗಳ ಮೂಲಕ ಕ್ರಮ ಕೈಗೊಳ್ಳುತ್ತೇವೆ.

ಡಿ. ನಾವು ಯಾವುದೇ ಕಾರಣಕ್ಕೂ ಖುದ್ದಾಗಿ ಅಥವಾ ಲಿಖಿತವಾಗಿ (ಇ– ಅಂಚೆಯೂ ಸೇರಿದಂತೆ)ನಮ್ಮ ಅಂತರ್ಜಾಲ ಬ್ಯಾಂಕಿಂಗ್ ಭದ್ರತಾ ಮಾಹಿತಿಯನ್ನು ದೃಢೀಕರಿಸಲು ಕೇಳುವುದಿಲ್ಲ ಅಥವಾ ಪಾಸ್ ವರ್ಡ್‌ನ್ನು ಬಹಿರಂಗಗೊಳಿಸಲು ಕೇಳುವುದಿಲ್ಲ.

ಇ. ನಮ್ಮ ಅಂತರ್ಜಾಲ ಬ್ಯಾಂಕಿಂಗ್ ಸೇವೆಗೆ ನಿಮಗೆ ಮೊದಲು ಪ್ರವೇಶಾನುಮತಿ (ಪಾಸ್ ವರ್ಡ್) ನೀಡುವಾಗ ನಿಮ್ಮ ಆನ್– ಲೈನ್ ಮಾಹಿತಿಯನ್ನು ಸಂರಕ್ಷಿಸಿಡಲು ಬೇಕಾದ ಮಾಹಿತಿಯು ಎಲ್ಲಿ ಸಿಗುತ್ತದೆ ಎಂಬುದನ್ನು ಹೇಳುತ್ತೇವೆ ಹಾಗೂ ವಂಚನೆ ಹಗರಣಗಳು ಅಥವಾ ಅನಧಿಕೃತ ವ್ಯವಹಾರಗಳಿಂದ ನಿಮ್ಮನ್ನು ಮತ್ತು ಕಂಪ್ಯೂಟರನ್ನು ಸುರಕ್ಷಿತವಾಗಿಡಲು ಈ ಮಾಹಿತಿಯನ್ನು ಕಾಲ ಕಾಲಕ್ಕೆ ಪರಿಷ್ಕರಿಸಲಾಗುವುದು.

ಎಫ್. ನಿಮ್ಮ ಖಾತೆಗಳಿಗೆ/ ಮಾಹಿತಿಗೆ ಅನಧಿಕೃತವಾಗಿ ಬೇರೊಬ್ಬರು ಸಂಪರ್ಕ ಸಾಧಿಸಿದಲ್ಲಿ ಅಥವಾ ಅಂತರ್ಜಾಲ ಬ್ಯಾಂಕಿಂಗ್ ಸೇವೆಯ ಸಹಾಯದಿಂದ ವ್ಯವಹಾರಗಳನ್ನು ಅಸ್ತವ್ಯಸ್ತಗೊಳಿಸಿದರೆ ಅವುಗಳನ್ನು ವರದಿ ಮಾಡಲು ಯಾವ ಕ್ರಮ ಅನುಸರಿಸಬೇಕೆಂದು ನಿಮಗೆ ತಿಳಿಸುತ್ತೇವೆ ಮತ್ತು ಇಂತಹ ಅನಧಿಕೃತ ಚಟುವಟಿಕೆ ಕಂಡುಬಂದ ಕ್ಷಣವೇ ವರದಿ ಮಾಡಲು ಯಾರನ್ನು ಸಂಪರ್ಕಿಸಬೇಕೆಂದು ತಿಳಿಸುತ್ತೇವೆ.

ಜಿ. ಅಂತರ್ಜಾಲ ಬ್ಯಾಂಕಿಂಗ್ ಸೇವೆಗಳಿಗೆ ನಿಮಗೆ ಪ್ರವೇಶಾನುಮತಿ ಸಿಕ್ಕಾಗ ಸೇವೆಗೆ ಅನ್ವಯಿಸುವ ನಿಬಂಧನೆ ಮತ್ತು ಷರತ್ತುಗಳನ್ನು ತಿಳಿಸುತ್ತೇವೆ. ಅಂತರ್ಜಾಲ ಬ್ಯಾಂಕಿಂಗ್ ನಿಬಂಧನೆ ಮತ್ತು ಷರತ್ತುಗಳ ಪೂರ್ಣ ವಿವರಗಳು ನಮ್ಮ ವೆಬ್ ತಾಣದಲ್ಲೂ ದೊರಕುತ್ತವೆ.

ಎಚ್. ಎಲ್ಲಾ ಅಂತರ್ಜಾಲ ಬ್ಯಾಂಕಿಂಗ್ ಸಂಬಂಧಿತ ಸೇವೆಗಳು ಮತ್ತು ಅವುಗಳಿಗೆ

ತಗಲುವ ವೆಚ್ಚಗಳು ಇದ್ದಲ್ಲಿ ಅವುಗಳನ್ನು ಪ್ರದರ್ಶಿಸಲಾಗುವುದು ಮತ್ತು ಆನ್‌ಲೈನ್ ಮೂಲಕವೂ ಮಾಹಿತಿ ನೀಡಲಾಗುವುದು ಹಾಗೂ ನಮ್ಮ ದರ ಪಟ್ಟಿಯಲ್ಲೂ ಸಹ ಮಾಹಿತಿ ಲಭ್ಯವಿರುತ್ತದೆ.

ಐ. ನಿಯಂತ್ರಕರಿಂದ ಕಾಲ ಕಾಲಕ್ಕೆ ನಿರ್ದಿಷ್ಟ ಪಡಿಸಲ್ಪಟ್ಟಂತೆ ಹಣಕಾಸು ವ್ಯವಹಾರಗಳಿಗೆ ಎರಡನೆ ಹಂತದ ಮಾನದಂಡಗಳನ್ನು ಅಳವಡಿಸಿ ಹೆಚ್ಚುವರಿ ದೃಢೀಕರಣ ಪ್ರಕ್ರಿಯೆ ಕೈಗೊಳ್ಳುತ್ತೇವೆ.

ಜೆ. ನೀವು ನಿರ್ದಿಷ್ಟ ಮೊತ್ತಕ್ಕಿಂತ ಹೆಚ್ಚು ಪ್ರಮಾಣದ ಹಣ ಕಾಸು ವ್ಯವಹಾರವನ್ನು ಮಾಡಿದರೆ ನಮ್ಮಲ್ಲಿ ನೋಂದಣಿ ಮಾಡಿದ ನಿಮ್ಮ ಸಂಪರ್ಕ ಸಾಧನಗಳಿಗೆ ಎಸ್ ಎಮ್ ಎಸ್/ ಇ–ಅಂಚೆ ಎಚ್ಚರಿಕೆ ಸಂದೇಶಗಳನ್ನು ಕಳುಹಿಸುತ್ತೇವೆ

ಕೆ. ಅಂತರ್ಜಾಲ ಬ್ಯಾಂಕಿಂಗ್ ಮೂಲಕ ಮಾಡಿದ ಎಲ್ಲಾ ಪಾವತಿಗಳಿಗೆ / ಬಿಲ್ಲು ನೋಂದಣಿಗಳಿಗೆ ಎಸ್ ಎಮ್ ಎಸ್/ ಇ–ಅಂಚೆ ಎಚ್ಚರಿಕೆ ಸಂದೇಶಗಳನ್ನು ನಿಮಗೆ ಕಳುಹಿಸುತ್ತೇವೆ.

ಎಲ್. ಈ ಕೆಳ ಕಂಡ ಸೌಲಭ್ಯಗಳನ್ನು ನೀಡುತ್ತೇವೆ: ಮೊತ್ತಕ್ಕೆ ಮಿತಿ ವಿಧಿಸುವುದು , ವಿದ್ಯುನ್ಮಾನ ವ್ಯವಹಾರಗಳಿಗೆ ಸಂಬಂಧಿಸಿದಂತೆ ವ್ಯವಹಾರ ವಿಧಾನ ಮತ್ತು ಪ್ರಯೋಜನದಾರ–ಇವುಗಳ ಆಯ್ಕೆ . ನೀವು ನಿಮ್ಮ ಆಯ್ಕೆಯನ್ನು ಬದಲಾವಣೆ ಮಾಡಬೇಕಾದ ಸಂದರ್ಭದಲ್ಲಿ ನೀವು ನಮಗೆ ಹೆಚ್ಚುವರಿ ಅಧಿಕಾರವನ್ನು ನೀಡಬೇಕಾಗುತ್ತದೆ.

ಎಮ್. ನೀವು ಯಾವುದೇ ಸಮಯದಲ್ಲಿ ಅಂತರ್ಜಾಲ ಬ್ಯಾಂಕಿಂಗ್ ಸೇವೆಗಳಿಂದ ಆಚೆ ಬರುವ ಆಯ್ಕೆಗಳನ್ನು ಮಾಡಿಕೊಳ್ಳಬಹುದು. ಆದಾಗ್ಯೂ ನಿಮ್ಮ ನಿರ್ಧಾರವನ್ನು ನಮಗೆ ತಿಳಿಸಬೇಕು ಮತ್ತು ಅದಕ್ಕೆ ಅಗತ್ಯವಾದ ಔಪಚಾರಿಕತೆಗಳ ಪೂರೈಸುವಿಕೆ ಯನ್ನು ಖಚಿತಪಡಿಸಿಕೊಳ್ಳಬೇಕು.

ಎನ್. ನಿಮ್ಮ ಅಂತರ್ಜಾಲ ಬ್ಯಾಂಕಿಂಗ್ ಸೌಲಭ್ಯವು ಕಾರ್ಯ ಪ್ರವೃತ್ತಿ / ವ್ಯವಹಾರಾರಂಭಕ್ಕೆ ಪ್ರವೇಶಾನುಮತಿ ಸಿಗುವ ಮೊದಲೇ ನಡೆಸಿದ ವ್ಯವಹಾರದಿಂದ ಉಂಟಾಗುವ ನಷ್ಟಕ್ಕೆ ನಾವು ಹೊಣೆಗಾರರಲ್ಲ.

ಓ. ನಿಮಗೆ ಪಾಸ್ ವರ್ಡ್ ಗಳು ಅಥವಾ ಭದ್ರತಾ ಮಾಹಿತಿಯ ಸ್ವೀಕೃತಿಯ ಸಂಬಂಧ ಖುದ್ದಾಗಿ ನೀಡದೇ ಇರುವ ಸಂದರ್ಭದಲ್ಲಿ ಉಂಟಾಗುವ ಯಾವುದೇ ವಿವಾದಗಳಿಗೆ ಸಂಬಂಧಿಸಿದಂತೆ ನಾವು ನಿಮ್ಮ ಸರಿಯಾದ ವಿಳಾಸಕ್ಕೆ ಕಳುಹಿಸಿರುವ ರವಾನೆ ದಾಖಲೆಯಾದ 'ನಿಮ್ಮಿಂದ ಸ್ವೀಕರಿಸಲ್ಪಟ್ಟಿದೆ' ಎಂಬುದನ್ನೇ ಮುಖ್ಯ ಸಾಕ್ಷಿಯಾಗಿ ನಾವು ಪರಿಗಣಿಸುವುದಿಲ್ಲ.

ಪಿ. ಅಂತರ್ಜಾಲ ಬ್ಯಾಂಕಿಂಗ್ ಪ್ರವೇಶಾನುಮತಿ ಪಡೆದ ನಂತರ ಉಂಟಾಗುವ

ಯಾವುದೇ ಅನಧಿಕೃತ ವ್ಯವಹಾರಗಳಿಗೆ ನಿಮ್ಮ ಹೊಣೆಗಾರಿಕೆ ಈ ಕೆಳಗಿನವು ಗಳಿಗಿಂತ ಕಡಿಮೆಯಾಗಿರುತ್ತದೆ:

i. ನಮಗೆ ಸೂಚಿಸಿದ ವೇಳೆಯಲ್ಲಿ ಇದ್ದಂತಹ ವಾಸ್ತವಿಕ ನಷ್ಟ ಅಥವಾ

ii. ನಿಮ್ಮ ಖಾತೆಗಳಲ್ಲಿ ಹಿಂತೆಗೆತಕ್ಕೆ ಲಭ್ಯವಿರುವ ಶಿಲ್ಕು ಅಥವಾ

iii. ಅಂತಹ ವ್ಯವಹಾರಗಳಿಗೆ ನಿಮ್ಮಿಂದ ವಿಧಿಸಲ್ಪಟ್ಟಿರುವ ಮಿತಿ

iv. ಮೇಲೆ ಹೇಳಿರುವ i ರಿಂದ iii ಗಳಿಗಿಂತ ಕಡಿಮೆಯದಾಗಿರುತ್ತದೆ ಅಥವಾ ಗರಿಷ್ಠ 10000/– (ಹತ್ತು ಸಾವಿರ ರೂಪಾಯಿಗಳ ಮಾತ್ರ)

ಕ್ಯು. ಬೇರೊಬ್ಬರಿಗೆ ನಿಮ್ಮ ಪಾಸ್ ವರ್ಡ್ ಅಥವಾ ಭದ್ರತಾ ಮಾಹಿತಿಯು ತಿಳಿದು ಬಂದ ಅಥವಾ ಗೊತ್ತಾಗುವ ಸಂದರ್ಭದಲ್ಲಿ ಅಥವಾ ನಿಮ್ಮ ಅಂತರ್ಜಾಲ ಬ್ಯಾಂಕಿಂಗ್ ಅಥವಾ ಖಾತೆಗಳಿಗೆ ಅನಧಿಕೃತ ಪ್ರವೇಶ ಪಡೆದಾಗ ನೀವು ಪ್ರಾಮಾಣಿಕವಾಗಿ ಹಾಗೂ ಸಮಯೋಚಿತವಾಗಿ ಸೂಚನೆ ನೀಡಿದ ಸಂದರ್ಭದಲ್ಲಿ ಸೂಚನೆ ನೀಡಿದ ಸಮಯದಿಂದ ನಷ್ಟಕ್ಕೆ ನಿಮ್ಮನ್ನು ಹೊಣೆ ಮಾಡುವುದಿಲ್ಲ. ಆದರೆ ನಿಮ್ಮದು ವಂಚನೆಯ ಉದ್ದೇಶ, ನಿರ್ಲಕ್ಷ್ಯ ಧೋರಣೆಯಾಗಿರಬಾರದು.

ಆರ್. ನಾವು ಸಾಕಷ್ಟು ಎಚ್ಚರಿಕೆ ಕ್ರಮ ತೆಗೆದುಕೊಳ್ಳಲು ವಿಫಲರಾದ ಪರಿಣಾಮವಾಗಿ ನಮ್ಮ ಅಂತರ್ಜಾಲ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಉಂಟಾದ ಭದ್ರತಾ ವೈಫಲ್ಯದಿಂದ ನಿಮಗೆ ನೇರವಾಗಿ ನಷ್ಟ ಉಂಟಾದರೆ ಅಂತಹ ನಷ್ಟವನ್ನು ನಾವು ಭರಿಸಿ ಕೊಡುತ್ತೇವೆ/ ಪರಿಹಾರ ನೀಡುತ್ತೇವೆ.

ಎಸ್. ಸರಳ ಮುನ್ನೆಚ್ಚರಿಕಾ ಕ್ರಮಗಳನ್ನು ನೀವು ತೆಗೆದುಕೊಂಡದ್ದೇ ಆದಲ್ಲಿ ಆನ್–ಲೈನ್ ಬ್ಯಾಂಕಿಂಗ್ ಸುರಕ್ಷಿತ ಹಾಗೂ ಅನುಕೂಲಕರವಾದುದಾಗಿರುತ್ತದೆ. ಈ ಕೆಳಗಿನ ಸಲಹೆಗಳನ್ನು ನೀವು ಅನುಸರಿಸುವುದರ ಬಗ್ಗೆ ಖಚಿತಪಡಿಸಿಕೊಳ್ಳಿ.

i. ನಮ್ಮ ಅಂತರ್‌ಜಾಲ ಬ್ಯಾಂಕಿಂಗ್ ತಾಣವನ್ನು ನೇರವಾಗಿ ಸಂದರ್ಶಿಸಿ. ಇ–ಅಂಚೆಯ ಮೂಲಕವಾಗಲೀ ಅಥವಾ ಬೇರಾವುದೇ ತಾಣದ ಮೂಲಕ ವಾಗಲೀ ಈ ತಾಣವನ್ನು ಸಂಪರ್ಕಿಸಲು ಪ್ರಯತ್ನಿಸದಿರಿ ಮತ್ತು ಕಪಟ ವೆಬ್ ತಾಣದ ಕುತಂತ್ರಕ್ಕೆ ಬಲಿಯಾಗದಿರಲು ಎದ್ದು ಕಾಣುವ ವೆಬ್ ತಾಣದ ಹೆಸರನ್ನು ಪರೀಕ್ಷಿಸಿ ಬಳಸಿ.

ii. ನಿಮ್ಮ ಪ್ರವೇಶಾನುಮತಿ ಸಂಖ್ಯೆ (ಪಾಸ್ ವರ್ಡ್))ಯನ್ನೋ ಅಥವಾ ಪಿನ್ ಸಂಖ್ಯೆಯನ್ನು ತಿಳಿಸುವಂತೆ ಕೋರುವ ಇ–ಅಂಚೆಯನ್ನು ನಿರ್ಲಕ್ಷಿಸಿ ಮತ್ತು ಅಂತಹ ಮಾಹಿತಿಯನ್ನು ನಮಗೆ ತಿಳಿಸಿದರೆ ಅದರ ತನಿಖೆಯನ್ನು ಮಾಡಲು ಸಾಧ್ಯವಾಗುತ್ತದೆ. ಪೊಲೀಸಿನವರಾಗಲೀ, ನಾವಾಗಲೀ ನಿಮ್ಮ ಅಂತರ್‌ಜಾಲ ಬ್ಯಾಂಕಿಂಗ್‌ನ ಮಾಹಿತಿಯನ್ನು ಅಥವಾ ಕಾರ್ಡ್‌ನ ಪಿನ್ ಸಂಖ್ಯೆಯನ್ನು

ಅಥವಾ ನಿಮ್ಮ ಪ್ರವೇಶಾನುಮತಿ ಸಂಖ್ಯೆ (ಪಾಸ್‌ವರ್ಡ್)ಯ ಮಾಹಿತಿಯನ್ನು ನಮಗೆ ನೀಡಿ ಎಂದು ಯಾವ ಸಮಯದಲ್ಲೂ ಕೇಳುವುದಿಲ್ಲ.

iii. ನಿಮ್ಮ ಕಾರ್ಯಾವಧಿ ಮುಗಿದ ನಂತರ ಲಾಗ್– ಆಫ್ ಒತ್ತುವುದರ ಮೂಲಕ ಅಂತರ್ಜಾಲ ಬ್ಯಾಂಕಿಂಗ್ ನಿಂದ ಆಚೆ ಬನ್ನಿ. ಲಾಗ್ ಆಫ್ ಆಗುವುದಕ್ಕಾಗಿ ಕೇವಲ ವಿಂಡೋಸ್ ಮುಚ್ಚುವುದು ಸುರಕ್ಷಿತವಲ್ಲ.

iv. ಸೈಬರ್‌ಕೆಫೆ/ಹಂಚಿಕೊಂಡು ಉಪಯೋಗಿಸುವ ಕಂಪ್ಯೂಟರ್– ಮುಂತಾದವುಗಳ ಮೂಲಕ ನಮ್ಮ ಅಂತರ್‌ಜಾಲ ಬ್ಯಾಂಕಿಂಗ್ ತಾಣವನ್ನು ಸಂಪರ್ಕಿಸದಿರಿ, ಎಂದು ನಾವು ಸಲಹೆ ನೀಡುತ್ತೇವೆ.

v. ಇತ್ತೀಚಿನ ಆಂಟಿ ವೈರಸ್ ಸ್ಪೈವೇರ್ ಸಾಫ್ಟ್‌ವೇರ್ ನ್ನು ನಿಮ್ಮ ಕಂಪ್ಯೂಟರ್‌ನಲ್ಲಿ ಬಳಸುತ್ತಾ ಇರಿ.

vi. ಮಾಹಿತಿ ಚೌರ್ಯ ವೈರಸ್ ದಾಳಿ ದುರುದ್ದೇಶಪೂರ್ವಕ ಪ್ರೋಗ್ರಾಮ್‌ಗಳಿಂದ ರಕ್ಷಣೆ ಪಡೆಯಲು ಭದ್ರತಾ ಪ್ರೋಗ್ರಾಮ್‌ಗಳನ್ನು ಅಳವಡಿಸಿ.

vii. ಕಂಪ್ಯೂಟರ್ ನಲ್ಲಿರುವ ಮಾಹಿತಿಯನ್ನು ಹೊರಗಿನವರಿಂದ ರಕ್ಷಿಸಲು ಸೂಕ್ತ ರಕ್ಷಣಾ ತಡೆಯನ್ನು ಅಳವಡಿಸಿ.

viii. ನಿಮ್ಮ ಆಪರೇಟಿಂಗ್ ವ್ಯವಸ್ಥೆಯಲ್ಲಿ ಇರುವ 'ಫೈಲ್ ಮತ್ತು ಪ್ರಿಂಟಿಂಗ್' ಆಯ್ಕೆಯನ್ನು ನಿಷ್ಕ್ರಿಯಗೊಳಿಸಿ.

ix. ಬಳಸದಿದ್ದಾಗ ನಿಮ್ಮ ಕಂಪ್ಯೂಟರನ್ನು ಲಾಗ್ ಆಫ್ ಮಾಡಿ.

x. ಅಂತರ್‌ಜಾಲ ಬ್ರೌಸರ್‌ನಲ್ಲಿ ನಿಮ್ಮ ಪ್ರವೇಶಾನುಮತಿ ಸಂಖ್ಯೆ (ಪಾಸ್ ವರ್ಡ್) ಅಥವಾ ಪಿನ್‌ಸಂಖ್ಯೆಯನ್ನು ಸಂಗ್ರಹಿಸಿಡದಿರಿ.

xi. ನಿಮ್ಮ ಖಾತೆಯನ್ನು ಮತ್ತು ಅದರಲ್ಲಿರುವ ವ್ಯವಹಾರಗಳ ದಾಖಲೆಗಳನ್ನು ನಿಯತವಾಗಿ ಕ್ರಮವಾಗಿ ಪರೀಕ್ಷಿಸಿ.

xii. ನಮ್ಮ ಸಲಹೆಯನ್ನು ಅನುಸರಿಸಿ– ಸುರಕ್ಷಿತ ಆನ್ ಲೈನ್ ಬ್ಯಾಂಕಿಂಗ್ ನಿರ್ವಹಣೆಗಾಗಿ ಸಹಾಯ ಪಡೆಯಲು ನಮ್ಮ ವೆಬ್ ತಾಣಗಳು ಒಳ್ಳೆಯ ಆಯ್ಕೆ.

### 8.17.3 **ಮೊಬೈಲ್ ಬ್ಯಾಂಕಿಂಗ್**

ಎ. ನಮ್ಮ ಮೊಬೈಲ್ ಅಪ್ಲಿಕೇಶನ್ ಸುರಕ್ಷಿತವಾಗಿರುವುದನ್ನು ಖಚಿತ ಪಡಿಸಿಕೊಳ್ಳಲು ನಾವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಮತ್ತು ನಿಯತವಾಗಿ ಪರಾಮರ್ಶಿಸುತ್ತೇವೆ ಹಾಗೂ ಇತ್ತೀಚಿನವರೆಗೂ ಪರಿಷ್ಕರಿಸುತ್ತೇವೆ.

ಬಿ ಅಂತರ್ಜಾಲ ಬ್ಯಾಂಕಿಂಗ್ ಅನ್ನು ಉಪಯೋಗಿಸುವಾಗ ನಿಮ್ಮ ಹೊಣೆಗಾರಿಕೆ ಗಳಲ್ಲದೇ ಬ್ಯಾಂಕಿಂಗ್ ಸೇವೆಗೆ ಪ್ರವೇಶಿಸಲು ಮೊಬೈಲ್ ಅಪ್ಲಿಕೇಶನ್ ಅಥವಾ ಇನ್ನಾವುದೇ ಸಾಮಾಜಿಕ ಮಾಧ್ಯಮವನ್ನು ಉಪಯೋಗಿಸುವಾಗ ನೀವು ನಿಮ್ಮ ಸಾಧನವನ್ನು ರಕ್ಷಿಸಿಕೊಳ್ಳಲು ಹೆಚ್ಚಿನ ಎಚ್ಚರಿಕೆ ವಹಿಸಬೇಕು.

i. ಮೊಬೈಲ್ ಬ್ಯಾಂಕಿಂಗ್ ಸೇವೆಗೆ ಲಾಗ್ ಆನ್ ಆಗಿದ್ದಾಗ ನಿಮ್ಮ ಮೊಬೈಲ್‌ನ್ನು ಹಾಗೆಯೇ ಬಿಟ್ಟು ಹೋಗಬೇಡಿ

ii. ನಿಮ್ಮ ಮೊಬೈಲ್ ಬ್ಯಾಂಕಿಂಗ್ ಸೇವೆಯ ಅನಧಿಕೃತ ಬಳಕೆ ತಡೆಯಲು ಸಾಧನವನ್ನು ಲಾಕ್ ಮಾಡಿ ಅಥವಾ ಇತರ ನಿಯಂತ್ರಕ ಕ್ರಮಗಳನ್ನು ತೆಗೆದುಕೊಳ್ಳಿ.

iii. ನಿಮ್ಮ ಸಾಧನವು ಕಳೆದುಹೋದಲ್ಲಿ /ಕಳ್ಳತನವಾದಲ್ಲಿ ನಮಗೆ ಸಾಧ್ಯವಾದಷ್ಟು ಬೇಗ ತಿಳಿಸಿ.

ಸಿ. ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ನೀವು ಆಯ್ಕೆ ಮಾಡಿಕೊಂಡರೆ, ಆ ಸೇವೆಗೆ ನೀವು ನೋಂದಾಯಿಸಿಕೊಳ್ಳುವ ಮುಂಚೆಯೇ, ಈ ಕೆಳಗಿನ ಅಂಶಗಳನ್ನು ನಿಮಗೆ ತಿಳಿಸುತ್ತೇವೆ:

i. ಬಳಕೆದಾರನ ಅಧಿಕೃತತೆ ಬಗ್ಗೆ ನಾವು ಅಳವಡಿಸಿಕೊಳ್ಳುವ ಸುರಕ್ಷತೆಯ ವಿಧಾನಗಳು.

ii. 'ಪಾವತಿ ನಿಲ್ಲಿಸಿ' ನಿರ್ದೇಶನಗಳು ಮತ್ತು ಸೇವೆಯ ಅಂಗೀಕಾರಕ್ಕೆ ಅನ್ವಯಿಸುವ ನಿಯಮಗಳು ಮತ್ತು ಷರತ್ತುಗಳೇನಾದರೂ ಇದ್ದರೆ.

### 8.17.4 ಎಟಿಎಮ್/ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡುಗಳು

ಎ. ನೀವು ಆಯ್ಕೆಮಾಡಿಕೊಂಡ ಖಾತೆಗೆ ಸಾಮಾನ್ಯವಾಗಿ ಎ. ಟಿ. ಎಮ್ /ಡೆಬಿಟ್ ಕಾರ್ಡುಗಳನ್ನು ನೀಡುವಂತಿದ್ದರೆ ಈ ಕಾರ್ಡನ್ನು ನಿಮಗೆ ನೀಡುತ್ತೇವೆ.ನೀವು ಬಯಸದಿದ್ದಲ್ಲಿ ತಿರಸ್ಕರಿಸಬಹುದು.

ಬಿ. ನಿಮಗೆ ಕಾರ್ಡುಗಳನ್ನು ವಿತರಿಸುವ ಮುಂಚೆ ನಿಮ್ಮ ಗುರುತಿನ ಬಗ್ಗೆ ತೃಪ್ತಿಕರ ದಾಖಲೆಯ ಅಗತ್ಯವಿದೆ.

ಸಿ. ನಾವು ಸೇವಾ– ಮಾರ್ಗದರ್ಶಿ/ಸದಸ್ಯತ್ವ ಕಿರುಹೊತ್ತಿಗೆ ಕಳುಹಿಸುತ್ತೇವೆ ಅದರಲ್ಲಿ ನಿಬಂಧನೆ ಮತ್ತು ಷರತ್ತುಗಳು ಕಾರ್ಡ್ ಕಳೆದುಹೋದಲ್ಲಿ/ದುರ್ಬಳಕೆಯಾದಲ್ಲಿ ಉಂಟಾಗಬಹುದಾದ ನಷ್ಟ ಮತ್ತು ನಿಮ್ಮ ಕಾರ್ಡನ್ನು ಬಳಸಲು ಬೇಕಾದ ಅಗತ್ಯ ಮಾಹಿತಿ ಇರುತ್ತದೆ,

ಡಿ. ನಿಮ್ಮ ಕಾರ್ಡ್ ನಿಮ್ಮ ಯಾವ ಯಾವ ಖಾತೆಗೆ ಬಳಸಬಹುದೆಂಬುದನ್ನು ತಿಳಿಸುತ್ತೇವೆ. ನಿಮಗೆ ನೀಡಿದ ಕಾರ್ಡು ಒಂದಕ್ಕಿಂತ ಹೆಚ್ಚು ವ್ಯವಹಾರಕ್ಕೆ ಬಳಸಬಹುದಾಗಿದ್ದಲ್ಲಿ ಅವು ಯಾವ ವ್ಯವಹಾರಗಳು ಎಂಬುದನ್ನೂ ತಿಳಿಸುತ್ತೇವೆ.

ಇ. ನಾವು ಪಿ ಒ ಎಸ್ ಕೌಂಟರ್, ಎ ಟಿ ಎಮ್ ಹಾಗೂ ವಿದೇಶಿ ವಿನಿಮಯ ವ್ಯವಹಾರಗಳ ಪ್ರಸ್ತುತ ವ್ಯವಹಾರ ಮಿತಿಗಳನ್ನು ತಿಳಿಸುತ್ತೇವೆ.

ಎಫ್. ನಿಮ್ಮ ಕಾರ್ಡಿಗೆ ಅನ್ವಯವಾಗುವ ಶುಲ್ಕಗಳು ಹಾಗೂ ದರಗಳನ್ನು ನಾವು ಸೂಚಿಸುತ್ತೇವೆ

ಜಿ. ನಿಮ್ಮ ಎಲ್ಲ ವ್ಯವಹಾರಗಳಿಗೂ ಎಷ್ಟೇ ಮೊತ್ತವಾದರೂ ಇರಲಿ, ಆನ್ ಲೈನ್ ಎಚ್ಚರಿಕೆ ಸಂದೇಶವನ್ನು ಕಳುಹಿಸಲಾಗುವುದು. ಆ ವ್ಯವಹಾರವನ್ನು ನೀವು ಮಾಡದಿದ್ದಲ್ಲಿ, ಅಥವಾ ನಿಮ್ಮ ಕಾರ್ಡಿನ ದುರ್ಬಳಕೆ ಆಗಿದ್ದಲ್ಲಿ, ಕಾರ್ಡನ್ನು ನಿಷ್ಕ್ರಿಯಗೊಳಿಸಲು ಕರೆ ಮಾಡಬೇಕಾದ ದೂರವಾಣಿ ಸಂಖ್ಯೆಯನ್ನು ಕೊಟ್ಟಿರುತ್ತೇವೆ.

ಎಚ್. ನಿಮ್ಮ ಆನ್ ಲೈನ್ ಖಾತೆಯನ್ನು ಪ್ರವೇಶಿಸಲು ಒಂದೇ ದಿನದಲ್ಲಿ ಸತತವಾಗಿ 3 ಬಾರಿ ತಪ್ಪು ಪ್ರಯತ್ನಗಳು ನಡೆದಿದ್ದರೆ, ನಿಮಗೆ ಎಸ್ ಎಮ್ ಎಸ್ ಮೂಲಕ ತಿಳಿಸಲಾಗುವುದು.

ಐ. ನಿಮ್ಮ ಸರಿಯಾದ ಮೊಬೈಲ್ ಸಂಖ್ಯೆ/ಇ ಅಂಚೆ ಐ.ಡಿ.ಯನ್ನು ನಮಗೆ ತಿಳಿಸುವುದನ್ನು ನೀವು ಖಚಿತ ಪಡಿಸಿಕೊಳ್ಳತಕ್ಕದ್ದು. ಇದರಿಂದ ನೀವು ಎಚ್ಚರಿಕೆ ಸಂದೇಶಗಳನ್ನು ಪಡೆಯಬಹುದು. ನಿಮ್ಮ ಪ್ರಸ್ತುತ ಸಂಪರ್ಕ ಮಾಹಿತಿಯನ್ನು ನಮಗೆ ಒದಗಿಸದಿದ್ದಲ್ಲಿ, ನಿಮ್ಮ ಕಾರ್ಡಿನ ದುರ್ಬಳಕೆಯಿಂದ ಉಂಟಾಗಬಹುದಾದ ನಷ್ಟಕ್ಕೆ ನೀವೇ ಹೊಣೆಗಾರರಾಗುತ್ತೀರಿ.

ಜೆ. ನಿಮಗೆ ಕಾರ್ಡ್ ನೀಡಿದಾಗ ಅದರ ಸುರಕ್ಷಣೆಯ ಬಗ್ಗೆ ತಿಳಿಸುತ್ತೇವೆ.ಉದಾಹರಣೆಗೆ, ನೀವು ಮಾಡಬೇಕಾದದ್ದು :

i. ನಿಮಗೆ ತಿಳಿಯದಂತೆ ತೆಗೆಯಬಹುದಾದ ಜಾಗಗಳಲ್ಲಿ, ಅಂದರೆ, ಪರ್ಸುಗಳು, ಅಥವಾ ವಾಹನಗಳಲ್ಲಿ, ನಿಮ್ಮ ಕಾರ್ಡುಗಳನ್ನು ಹಾಗೆಯೇ ಬಿಟ್ಟು ಹೋಗಬೇಡಿ. ನಿಮ್ಮ ಗಮನಕ್ಕೆ ಬರದಂತೆ ತೆಗೆಯಬಹುದಾದ ಸ್ಥಳಗಳಲ್ಲಿಯೂ ಇಡಬೇಡಿ.

ii. ನಿಮ್ಮ ಕಾರ್ಡ್ ಸ್ವೀಕರಿಸಿದ ತಕ್ಷಣವೇ ಅದರ ಹಿಂಬದಿಯಲ್ಲಿ ಸಹಿ ಮಾಡಿ.

iii. ನಿಮ್ಮ ಕಾರ್ಡನ್ನು ಯಾರಿಗೂ ಕೊಡಬೇಡಿ.ಹಾಗೂ ಬಳಸಲು ಬಿಡಬೇಡಿ. ಕಾರ್ಡನ್ನು ಉಪಯೋಗಿಸಿದ ತಕ್ಷಣ ಹಿಂತೆದು ಕೊಳ್ಳುವುದನ್ನು ಮರೆಯಬೇಡಿ.

iv. ನಮ್ಮಲ್ಲಿರುವ ನಿಮ್ಮ ಸಂಪರ್ಕ ಮಾಹಿತಿ ಪರಿಷ್ಕರಣೆಯಾಗಿದ್ದಲ್ಲಿ ನಮಗೆ ತಿಳಿಸಿ

ಇದರಿಂದ ಬದಲಿ ಕಾರ್ಡನ್ನು ಸರಿಯಾದ ವಿಳಾಸಕ್ಕೆ ಕಳುಹಿಸಲು ಸಾಧ್ಯವಾಗುತ್ತದೆ.

v. ನಿಮ್ಮ ಕಾರ್ಡ್ ಕಳೆದುಹೋದಲ್ಲಿ, ಅಥವಾ ಕಳ್ಳತನವಾದದ್ದು ಗೊತ್ತಾದ ತಕ್ಷಣ, ನಮಗೆ ತಿಳಿಸಿ.

### 8.17.4.1 ಕಳೆದು ಹೋದ/ ಕಳುವಾದ/ ವಿವಾದಾತ್ಮಕ ವ್ಯವಹಾರಗಳನ್ನು ವರದಿ ಮಾಡುವುದು

ಎ. ನಿಮ್ಮ ಕಾರ್ಡು ಕಳೆದು ಹೋಗಿದ್ದಲ್ಲಿ , ಕಳುವಾಗಿದ್ದಲ್ಲಿ, ಪ್ರವೇಶಾನುಮತಿಯ ಗುಪ್ತ ಸಂಖ್ಯೆಯ/ ಕಾರ್ಡಿನ ದುರ್ಬಳಕೆಯಾಗಿದ್ದನ್ನು ವರದಿ ಮಾಡಲು ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ನಿಮಗೆ ತಿಳಿಸುತ್ತೇವೆ.

ಬಿ. ನಿಮ್ಮ ಕಾರ್ಡ್ ಕಳವು ಅಥವಾ ಕಳೆದುಹೋದಲ್ಲಿ ಮತ್ತು ನಿಮ್ಮ ವೈಯಕ್ತಿಕ ಗುರುತು ಸಂಖ್ಯೆ / ಪ್ರವೇಶಾನುಮತಿಯ ಗುಪ್ತ ಸಂಖ್ಯೆ ಬೇರೆಯವರಿಗೆ ತಿಳಿದು ಅದರಿಂದ ದುರ್ಬಳಕೆ ಆದಲ್ಲಿ ಅಂಥ ಸಂದರ್ಭಗಳಲ್ಲಿ ನಿಮ್ಮ ಖಾತೆಯಲ್ಲುಂಟಾದ ನಷ್ಟಕ್ಕೆ ನಿಮ್ಮ ಹೊಣೆಗಾರಿಕೆಯನ್ನು ನಿಬಂಧನೆ ಮತ್ತು ಷರತ್ತುಗಳಲ್ಲಿ ತಿಳಿಸಿರುತ್ತೇವೆ.

ಸಿ. ನಿಮ್ಮ ಕಾರ್ಡ್ ಕಳವಾದಲ್ಲಿ ಅಥವಾ ಕಳೆದುಹೋದಲ್ಲಿ ಮತ್ತು ನಿಮ್ಮ ವೈಯಕ್ತಿಕ ಗುರುತು ಸಂಖ್ಯೆ / ಪ್ರವೇಶಾನುಮತಿಯ ಗುಪ್ತ ಸಂಖ್ಯೆಯ ದುರ್ಬಳಕೆ ಆದಲ್ಲಿ ನಿಮಗೆ ತಿಳಿದ ತಕ್ಷಣ ನಮಗೆ ತಿಳಿಸಲು ಬಳಸಬೇಕಾದ ನಮ್ಮ ದೂರವಾಣಿ ಸಂಖ್ಯೆಅಥವಾ ಇ ಅಂಚೆ ವಿಳಾಸವನ್ನು ತಿಳಿಸುತ್ತೇವೆ.

ಡಿ. ನಿಮ್ಮ ವೈಯಕ್ತಿಕ ಗುರುತು ಸಂಖ್ಯೆ / ಪ್ರವೇಶಾನುಮತಿಯ ಗುಪ್ತ ಸಂಖ್ಯೆ ಬೇರೆ ಮೂರನೇ ವ್ಯಕ್ತಿಗೆ ತಿಳಿದಿದೆ ಎಂದು ನಿಮಗೆ ಸಂಶಯ ಬಂದಲ್ಲಿ ಅಥವಾ ತಿಳಿದಲ್ಲಿ ತಕ್ಷಣವೇ ಅದನ್ನು ಬದಲಾಯಿಸುವುದಲ್ಲದೇ ನಮಗೂ ತಿಳಿಸತಕ್ಕದ್ದು.

ಇ. ನಿಮ್ಮ ಎ.ಟಿ.ಎಮ್/ಡೆಬಿಟ್/ ಕ್ರೆಡಿಟ್ ಕಾರ್ಡುಗಳು ಕಳೆದು ಹೋಗಿದ್ದರೆ ಅಥವಾ ಕಳುವಾಗಿರುವುದೆಂದು ನಮಗೆ ಸೂಚನೆ ನೀಡಿದ ತಕ್ಷಣ ನಮ್ಮ ಕಡೆಯಿಂದ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ತೆಗೆದುಕೊಂಡು ಇವು ದುರ್ಬಳಕೆಯಾಗದಂತೆ ತಡೆಯುತ್ತೇವೆ.

ಎಫ್. ನಮ್ಮ ಗಮನಕ್ಕೆ ತರುವ ಮುಂಚೆ ದುರ್ಬಳಕೆಯಿಂದ ಉಂಟಾದ ನಷ್ಟಕ್ಕೆ ನೀವೇ ಬಾಧ್ಯರು.

ಜಿ. ನಿಮ್ಮ ಕಾರ್ಡು ಕಳೆದು ಹೋದಲ್ಲಿ ಅಥವಾ ಕಳ್ಳತನವಾದಲ್ಲಿ, ಅಥವಾ ದುರ್ಬಳಕೆಯಾದಲ್ಲಿ, ನಮಗೆ ತಿಳಿದ ತಕ್ಷಣ ಕಾರ್ಡನ್ನು ನಿಷ್ಕ್ರಿಯಗೊಳಿಸಲಾಗುವುದು. ಇವುಗಳು ಕಾಣೆಯಾದ ಬಗ್ಗೆ ಅಥವಾ ದುರ್ಬಳಕೆಯ ಬಗ್ಗೆ ನಮಗೆ 24 ಗಂಟೆಗಳು ಕಾರ್ಯ ನಿರತವಾಗಿರುವಂತಹ ಶುಲ್ಕರಹಿತ ದೂರವಾಣಿ ಸಂಖ್ಯೆಗೆ ಕರೆ ಮಾಡಿ

ತಿಳಿಸತಕ್ಕದ್ದು. ಮತ್ತು ಲಿಖಿತವಾಗಿ ನಮಗೆ ತಿಳಿಸತಕ್ಕದ್ದು ಈ ಉದ್ದೇಶಕ್ಕಾಗಿ ಇರುವ ಇ–ಅಂಚೆ ವಿಳಾಸಕ್ಕೆ ತಿಳಿಸತಕ್ಕದ್ದು. ನಾವು ನಿಮಗೆ ನಿಮ್ಮ ಕಾರ್ಡನ್ನು ನಿಷ್ಕ್ರಿಯಗೊಳಿಸಿದ ಬಗ್ಗೆ ಖಚಿತಪಡಿಸುತ್ತೇವೆ.

ಎಚ್. ನೀವು ನಿಮ್ಮ ಕಾರ್ಡು ಕಳೆದುಹೋದ ಬಗ್ಗೆ ಅಥವಾ ಕಳ್ಳತನವಾದ ಬಗ್ಗೆ ಅಥವಾ ನಿಮ್ಮ ವೈಯಕ್ತಿಕ ಗುರುತು ಸಂಖ್ಯೆ(ಪಿ ಐ ಎನ್) / ಪ್ರವೇಶಾನುಮತಿಯ ಗುಪ್ತ ಸಂಖ್ಯೆಯ ದುರ್ಬಳಕೆಯ ಬಗ್ಗೆ ನಮಗೆ ತಿಳಿಸಿದ ನಂತರ ಅದರ ದುರ್ಬಳಕೆಯಿಂದ ಆಗುವ ನಷ್ಟದ ಜವಾಬ್ದಾರಿ ನಿಮ್ಮದಾಗಿರುವುದಿಲ್ಲ. ಆದರೆ ನೀವು ಬ್ಯಾಂಕಿಗೆ ಮೋಸ ಮಾಡಲು ಪ್ರಯತ್ನಿಸಿದಲ್ಲಿ ಅಥವಾ ನಿಮ್ಮ ನಿರ್ಲಕ್ಷ್ಯದಿಂದ ನಿಮಗೆ ನಷ್ಟ ಉಂಟಾಗುವುದಾದರೆ ಅದಕ್ಕೆ ನೀವೇ ಜವಾಬ್ದಾರರಾಗುತ್ತೀರಿ.

ಐ. ಯಾವುದಾದರೂ ವಿವಾದಾಸ್ಪದ ವ್ಯವಹಾರ ನಿಮಗೆ ಕಂಡುಬಂದಲ್ಲಿ ನಿಮ್ಮ ಕೋರಿಕೆಯ ಮೇರೆಗೆ ಆ ವ್ಯವಹಾರದ ಬಗ್ಗೆ ಮತ್ತಷ್ಟು ವಿವರಗಳನ್ನು ನೀಡುತ್ತೇವೆ. ನಿಮ್ಮ ನಿಲುವನ್ನು ನಾವು ಒಪ್ಪದೇ ಇರುವ ಪ್ರಕರಣಗಳಲ್ಲಿ ಅಂತಹ ವಿವಾದಾಸ್ಪದ ವ್ಯವಹಾರಕ್ಕೆ ನೀವು ಅನುಮತಿ ನೀಡಿರುವ ಬಗ್ಗೆ ಪುರಾವೆ ನೀಡುತ್ತೇವೆ.

ಜೆ. ನೀವು ಯಾವುದಾದರು ತಪ್ಪು, ಸಿಂಧುವಲ್ಲದ ಅಥವಾ ಅನಧಿಕೃತ ವಹಿವಾಟಿನ ಬಗ್ಗೆ ಮಾಹಿತಿ ನೀಡಿದಲ್ಲಿ, ಅದರ ತನಿಖೆ ಮಾಡಲಾಗುವುದು ಹಾಗೂ ಸಾಬೀತಾದರೆ ಪೂರ್ವ ಸ್ಥಿತಿಗೆ ಮರಳುವ ಪ್ರಕ್ರಿಯಾನುಸಾರ ವ್ಯವಹಾರ ಸಂಬಂಧ ವೆಚ್ಚವನ್ನು ಮರು ಜಮಾ ಮಾಡಲಾಗುವುದು.

ಕೆ. ನಿಮ್ಮ ಕಾರ್ಡು ನಿಮಗೆ ತಲುಪುವುದರ ಮುಂಚೆ ಅಥವಾ ನಿಮ್ಮ ವೈಯಕ್ತಿಕ ಗುರುತು ಸಂಖ್ಯೆ(ಪಿಐಎನ್) / ಪ್ರವೇಶಾನುಮತಿಯ ಗುಪ್ತ ಸಂಖ್ಯೆ(ಅನ್ವಯವಾದಲ್ಲಿ) ನಿಮ್ಮ ಕೈಸೇರುವ ಮುಂಚೆ ಆದ ನಷ್ಟಗಳಿಗೆ, ನಿಮ್ಮ ಪ್ರಸ್ತುತ ವಿಳಾಸ ನಮ್ಮಲ್ಲಿ ಇದ್ದರೆ ಮಾತ್ರ, ನೀವು ಜವಾಬ್ದಾರರಲ್ಲ. ನಿಮ್ಮ ಕಾರ್ಡಿನ ಅಥವಾ ವೈಯಕ್ತಿಕ ಗುರುತು ಸಂಖ್ಯೆ(ಪಿ ಐ ಎನ್) / ಪ್ರವೇಶಾನುಮತಿಯ ಗುಪ್ತ ಸಂಖ್ಯೆ  ನಿಮ್ಮ ಕೈ ಸೇರುವ ಬಗ್ಗೆ ಮುಖತಃ  ನೀಡಲ್ಪಡದಿರುವಾಗ, ಯಾವುದೇ ವಿವಾದವಿದ್ದಲ್ಲಿ,  ನಾವು ನಿಮಗೆ ಅದನ್ನು ರವಾನಿಸಿದ ರಶೀದಿಗಳನ್ನು, ಅವು ನಿಮಗೆ ತಲುಪಿದೆ ಎಂದು ತಿಳಿಯಲು ಪುರಾವೆಗಳಾಗಿ ಬಳಸುವುದಿಲ್ಲ.

ಎಲ್. ಕೆಳಕಂಡ ಸಂದರ್ಭಗಳಲ್ಲಿ  ಉಂಟಾದ ನಷ್ಟಕ್ಕೆ ನೀವು ಜವಾಬ್ದಾರರಲ್ಲ:

i. ವಿದ್ಯುನ್ಮಾನ ಬ್ಯಾಂಕಿಂಗ್ ಸೇವೆಯನ್ನು ಒದಗಿಸುವಾಗ ನಮ್ಮ ಏಜೆಂಟ್ ಗಳು ಅಥವಾ ನಮ್ಮ ನೌಕರರು ಮೋಸ ಮಾಡಿದರೆ ಅಥವಾ ನಿರ್ಲಕ್ಷ್ಯ ಮನೋಭಾವವಿರುವಾಗ.

ii. ನಮ್ಮ ಸಲಕರಣೆಗಳು/ ಯಂತ್ರಗಳು ಕಾರ್ಡ್ ಅಥವಾ ಗಣಕ ಯಂತ್ರದಲ್ಲಿ ಏನಾದರೂ ಲೋಪ ದೋಷಗಳು ಕಂಡುಬಂದಲ್ಲಿ ಮತ್ತು ಅವು

ಸ್ಪಷ್ಟವಾಗಿದ್ದಲ್ಲಿ ಅಥವಾ ನಾವೇ ಸಂದೇಶ ಮುಖಾಂತರ ನಿಮ್ಮ ಗಮನಕ್ಕೆ ತಂದಲ್ಲಿ.

iii. ನಿಮ್ಮ ಕಾರ್ಡು / ವೈಯಕ್ತಿಕ ಗುರುತು ಸಂಖ್ಯೆ/ಪ್ರವೇಶಾನುಮತಿಯ ಗುಪ್ತ ಸಂಖ್ಯೆ ನಿಮಗೆ ತಲುಪುವ ಮುನ್ನ ನಡೆದಂತಹ ಅನಧಿಕೃತ ವಹಿವಾಟುಗಳಿಗೆ.

iv. ಇತರ ಅನಧಿಕೃತ ವಹಿವಾಟಿನಲ್ಲಿ ನಿಮ್ಮ ಪಾತ್ರ ಇಲ್ಲದ ಪಕ್ಷದಲ್ಲಿ.

ಎಮ್. ನೀವು ನಮಗೆ ತಿಳಿಸುವ ಮುಂಚೆ ಆಗಿರುವ ನಷ್ಟಕ್ಕೆ ನೀವು ರೂ. 10,000/– (ಹತ್ತು ಸಾವಿರ ರೂಪಾಯಿ)ಕ್ಕೆ ಜಾಸ್ತಿಯಾಗದಂತೆ ಕೊಡಲು ಜವಾಬ್ದಾರರಾಗಿರುತ್ತೀರಿ. ಆದರೆ ಈ ಮಿತಿ ಕೆಳಗಿನ ಸಂದರ್ಭಗಳಲ್ಲಿ ಅನ್ವಯಿಸುವುದಿಲ್ಲ.

i. ನೀವು ವಂಚನೆ ಅಥವಾ ಅಜಾಗರೂಕತೆಯಿಂದ ನಡೆದುಕೊಂಡಿದ್ದಲ್ಲಿ ಅಥವಾ

ii. ನೀವು ನಿಮ್ಮ ಕಾರ್ಡಿನ ಅನಧಿಕೃತ ಉಪಯೋಗದಲ್ಲಿ ನೆರವಾಗಿದ್ದಲ್ಲಿ

ಎನ್. ಒಂದುವೇಳೆ ಮೇಲಿನ ಅಧಿನಿಯಮ ನಿಮಗೆ ಅನ್ವಯವಾದಲ್ಲಿ ನಿಮ್ಮ ಹೊಣೆಗಾರಿಕೆ ಈ ಕೆಳಗಿನವುಗಳಲ್ಲಿ ಕನಿಷ್ಠದ್ದಾಗಿರುತ್ತದೆ:

i. ನೀವು ತಿಳಿಸುವ ಸಮಯದಲ್ಲಿ ಆಗಿದ್ದ ವಾಸ್ತವಿಕ ನಷ್ಟ ಅಥವಾ

ii. ನಿಮ್ಮ ಕಾರ್ಡ್ ಕಳೆದು ಹೋದ/ಕಳುವಾದ ವೇಳೆ ಹಾಗೂ ನೀವು ಇದರ ಬಗ್ಗೆ ನಮಗೆ ತಿಳಿಸಿದ ಸಮಯದ ನಡುವೆ ನಿಮಗೆ ಖಾತೆಯಿಂದ ಹಣ ಹಿಂತೆಗೆಯಲು ನೀಡಲ್ಪಟ್ಟ ಗರಿಷ್ಟಮಿತಿ

ಒ. ನೀವು ನಿಮ್ಮ ವಹಿವಾಟನ್ನು ಅಲ್ಲಗಳೆಯಲು ಸಮಯದ ಪರಿಮಿತಿ ಇರುತ್ತದೆ. ಈ ಸಮಯದ ಪರಿಮಿತಿಯನ್ನು ನಾವು ನಿಬಂಧನೆ ಮತ್ತು ಷರತ್ತುಗಳೊಂದಿಗೆ ತಿಳುಸುತ್ತೇವೆ. ಸರಿಯಾಗಿಲ್ಲದ ಅಸಿಂಧುವಾದ ಅಥವಾ ಅನಧಿಕೃತ ವಹಿವಾಟನ್ನು ಸಮಯದ ಪರಿಮಿತಿಯೊಳಗೆ ತಿಳಿಸದಿದ್ದಲ್ಲಿ ನಾವು ವಹಿವಾಟನ್ನು ರದ್ದುಗೊಳಿಸಲು ಸಾಧ್ಯವಿಲ್ಲ ಹಾಗೂ ನೀವು ಅದನ್ನು ಪಾವತಿಸಲೇಬೇಕಾಗುತ್ತದೆ. ಕೆಲವೊಂದುಸೀಮಿತ ಸಂದರ್ಭಗಳಲ್ಲಿ ಮಾತ್ರ ಎಂದರೆ ಕ್ರೆಡಿಟ್ ಕಾರ್ಡ್ ಕಂಪನಿಯ ನಿಯಮಗಳು ಅನ್ವಯವಾದಲ್ಲಿ ನಾವು ಕ್ರೆಡಿಟ್ ಕಾರ್ಡ್ ವ್ಯವಹಾರವನ್ನು ರದ್ದುಗೊಳಿಸಬಹುದು. ಉದಾಹರಣೆಗೆ ಸರಕಿನ ಗುಣಮಟ್ಟದ/ಸೇವೆಯ ಬಗ್ಗೆ ಮಾರಾಟಗಾರನೊಂದಿಗೆ ನಿಮ್ಮ ತಗಾದೆಯಿದ್ದಲ್ಲಿ, ಅಥವಾ ಸರಕಿನ ಗುಣಮಟ್ಟದ/ಸೇವೆಯ ಬಗ್ಗೆ ನಿಮ್ಮ ನಿಮ್ಮ ಮನಸ್ಸು ಬದಲಾಯಿಸಿದಲ್ಲಿ ಅಥವಾ ಡೆಬಿಟ್ ಕಾರ್ಡ್ ವ್ಯವಾಹರದಲ್ಲಿ ನಿಮ್ಮಿಂದ ಅಥವಾ ಮಾರಾಟದಾರನಿಂದ ತಪ್ಪಾದಲ್ಲಿ ಕ್ರೆಡಿಟ್ ಕಾರ್ಡ್ ವ್ಯವಹಾರ ರದ್ದುಪಡಿಸಲು ಸಾಧ್ಯವಿಲ್ಲ.

ಪಿ. ನಿಮ್ಮ ದೂರು ದಾಖಲಿಸಲು ಅಥವಾ ದೂರಿನ ನಿವಾರಣೆಗೆ ನಾವು ಎಟಿಎಮ್

ಇರುವಲ್ಲಿ, ಎಟಿಎಮ್ ಬ್ಯಾಂಕಿನ ಸಹಾಯವಾಣಿ/ಸಂಪರ್ಕಾಧಿಕಾರಿಯ ದೂರವಾಣಿ ಸಂಖ್ಯೆಯನ್ನು ಪ್ರದರ್ಶಿಸುತ್ತೇವೆ.

ಕ್ಯೂ. ದೂರು ದಾಖಲಿಸಬಹುದಾದ ಅಧಿಕಾರಿಯ ಹೆಸರು ಹಾಗೂ ದೂರವಾಣಿ ಸಂಖ್ಯೆಯನ್ನು ಸಹಾ ಪ್ರದರ್ಶಿಸುತ್ತೇವೆ.

ಆರ್. ಎಟಿಎಮ್ ನಲ್ಲಿ ವಿಫಲ ವ್ಯವಹಾರದ ಸಂದರ್ಭದಲ್ಲಿ ತಪ್ಪಾಗಿ ಖರ್ಚು ಹಾಕಿದ ಮೊತ್ತವನ್ನು ನಾವು ನಿರ್ಧಿಷ್ಟಪದಿಸಿದ ಸಮಯದಲ್ಲಿ ಮರುಭರ್ತಿ ಮಾಡುತ್ತೇವೆ. ನಿರ್ಧಿಷ್ಟಪಡಿಸಿದ ಸಮಯಕ್ಕಿಂತ ಹೆಚ್ಚು ತಡ ಮಾಡಿದ ಸಂದರ್ಭದಲ್ಲಿ ನಿಯಮದಂತೆ ದಂಡ ಪಾವತಿಸುತ್ತೇವೆ ಆದರೆ ವ್ಯವಹಾರ ಮಾಡಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಎಟಿಎಮ್ ಕಾರ್ಡ್ ನೀಡಿರುವ ಬ್ಯಾಂಕಿಗೆ ದೂರನ್ನು ನೀಡಿರಬೇಕು.

ಎಸ್. ತಗಾದೆ ಇರುವ ಎಟಿಎಮ್ ವ್ಯವಹಾರಗಳಿಗೆ ಸಂಬಂಧಿಸಿದಂತೆ,ತಗಾದೆ ಇತ್ಯರ್ಥವಾಗುವವರೆಗೂ ಕ್ಯಾಮೆರಾ ಚಿತ್ರೀಕರಣ ದೃಷ್ಯಗಳನ್ನು ನಮ್ಮಲ್ಲಿ ಇಟ್ಟುಕೊಂಡಿರುತ್ತೇವೆ. ದಾಖಲೆಗಳ ಸಂರಕ್ಷಣಾವಧಿಯೊಳಗೆ ಆಕ್ಷೇಪಣೆ ಸಲ್ಲಿಸಿದರೆ ಮಾತ್ರ ಕ್ಯಾಮೆರಾ ಚಿತ್ರೀಕರಣ ದೃಷ್ಯ ನಿಮಗೆ ಲಭ್ಯವಾಗುತ್ತದೆ.

### 8.17.5 ಕ್ರೆಡಿಟ್ ಕಾರ್ಡ್

ಎ. ನೀವು ಕ್ರೆಡಿಟ್ ಕಾರ್ಡಿಗೆ ಅರ್ಜಿ ಸಲ್ಲಿಸಿದಾಗೆ, ಅನ್ವಯಿಸುವ ಷರತ್ತುಗಳು ಮತ್ತು ನಿಬಂಧನೆಗಳು ಎಂದರೆ ಶುಲ್ಕ, ಬಡ್ಡಿ ಮತ್ತು ಇತರೇ ದರಗಳು, ಬಿಲ್ಲಿಂಗ್ ಮತು ಪಾವತಿಗಳು, ಸುಸ್ತಿ ಲೆಕ್ಕ ಹಾಕುವ ವಿಧಾನ, ''ಕನಿಷ್ಟ ಬಾಕಿ ಮೊತ್ತ'' ಮಾತ್ರ ಪಾವತಿ ಮಾಡಿದ್ದರೆ ಉಂಟಾಗುವ ಹಣಕಾಸಿನ ಪರಿಣಾಮಗಳು, ನವೀಕರಣ ಮತ್ತು ರದ್ದುಪಡಿಸುವ ಪ್ರಕ್ರಿಯೆಗಳು ಮತ್ತು ಕಾರ್ಡನ್ನು ಉಪಯೋಗಿಸಲು ನಿಮಗೆ ಅಗತ್ಯವಿರುವ ಇತರೇ ಮಾಹಿತಿಗಳನ್ನು ನಿಮಗೆ ನೀಡುತ್ತೇವೆ.

ಬಿ. ಅರ್ಜಿ ಸಲ್ಲಿಸಿದಾಗ, ''ಅತೀ ಮುಖ್ಯ ನಿಬಂಧನೆಗಳು ಮತ್ತು ಷರತ್ತುಗಳ'' (ಎಮ್ಐಟಿಸಿ) ಪ್ರತಿಯೊಂದನ್ನು ನಿಮಗೆ ನೀಡುತ್ತೇವೆ.

ಸಿ. ನೀವೆ ಕಾರ್ಡನ್ನು ಪಡೆಯುವಾಗ ಅಥವಾ ಅರ್ಜಿ ಸಲ್ಲಿಸುವಾಗ ನಿಮಗೆ ಕಾರ್ಡನ್ನು ನೀಡಲು ತಗಲುವ ಸಮಯದ ಬಗ್ಗೆ ಮಾಹಿತಿಯನ್ನು ನೀಡುತ್ತೇವೆ.

ಡಿ. ನಿಮ್ಮ ಸ್ವವಿವರಗಳು ನಮಗೆ ಸೂಕ್ತವೆಂದು ನಮಗೆ ಕಂಡುಬಂದಲ್ಲಿ, ನಾವು ನಿಮಗೆ ಬಳಕೆಗೆಬಾರದ ಕಾರ್ಡನ್ನು ನೀಡುತ್ತೇವೆ ಮತ್ತು ಅದನ್ನುನೀವು ಸ್ವೀಕರಿಸಿದ ಬಗ್ಗೆ ನಮಗೆ ತಿಳಿಸಿದ ನಂತರ ಹಾಗೂ ಅದನ್ನು ಬಳಕೆಯೋಗ್ಯಗೊಳಿಸಲು ಅನುಸರಿಸ ಬೇಕಾದ ಕ್ರಮಗಳನ್ನು ಅನುಸರಿಸಿದ ಮೇಲೆ ನಿರ್ದಿಷ್ಟಪಡಿಸಬಹುದಾದ ಇತರೇ ಷರುತ್ತುಗಳಿಗೆ ಒಳಪಟ್ಟು ಕಾರ್ಡು ಬಳಕೆಗೆ ಯೋಗ್ಯವಾಗುತ್ತವೆ.

ಇ. ಒಂದು ವೇಳೆ ನಾವು ನಿಮ್ಮ ಕಾರ್ಡನ್ನು ನಿಮ್ಮ ಸಮ್ಮತಿಯಿಲ್ಲದೇ ಕ್ರಿಯಾಮುಖ ಗೊಳಿಸಿದಲ್ಲಿ ಅಥವಾ ನಿಮ್ಮ ಸಮ್ಮತಿಯಿಲ್ಲದ ಕಾರ್ಡಿಗೆ ಬಿಲ್ಲು ಮಾಡಿದಲ್ಲಿ ನಾವು ಬಿಲ್ಲನ್ನು ಹಿಂತೆಗೆದುಕೊಳ್ಳುವೆವಲ್ಲದೇ ಬಿಲ್ಲಿನ ಮೊತ್ತದ ಎರಡರಷ್ಟು ಜುಲ್ಮಾನೆ ಹಣವನ್ನು ಸಹ ಸಂದಾಯ ಮಾಡುತ್ತೇವೆ.

ಎಫ್. ನಿಮ್ಮಿಂದ ಲಿಖಿತ ಸಮ್ಮತಿ ಪಡೆದ ಬಳಿಕವಷ್ಟೇ ನಾವು ಕಾರ್ಡ್ ಮೇಲೆ ಸಾಲ ಅಥವಾ ಸಾಲದ ಮಿತಿಯ ಹೆಚ್ಚಳ ಮಾಡುತ್ತೇವೆ. ''ಎಮ್ಐಟಿಸಿ''/ ಅತೀ ಮುಖ್ಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಓದಿಕೊಂಡು ವ್ಯವಹಾರವನ್ನು ಊರ್ಜಿತಗೊಳಿಸಿದ್ದಲ್ಲಿ ಹಾಗೂ ಎಲೆಕ್ಟ್ರಾನಿಕ್ ಸಾಧನಗಳ ಮೂಲಕ ಪಡೆಯಲಾದ ನಿಮ್ಮ ಸಮ್ಮತಿಯನ್ನು ಅಂಶೀಯ ದಾಖಲೆಯಾಗಿ ಮತ್ತೆ ಪಡೆದುಕೊಳ್ಳುವಂತೆ ಇದ್ದಲ್ಲಿ, ಅದನ್ನೂ ಸಹ ನಿಮ್ಮ ಸಮ್ಮತಿ ಎಂದೇ ಪರಿಗಣಿಸಲಾಗುವುದು.

ಜಿ. ''ಕೂಡಿಕೆ'' ಕಾರ್ಡ್ ಗಳನ್ನು ನೀವು ನಿಯೋಜಿಸಿದ ವ್ಯಕ್ತಿಗಳಿಗೆ ನೀಡಲಾಗುವುದು. ನಿಮ್ಮ ಕೋರಿಕೆ ಮೇರೆಗೆ ನಿಮಗೆ ನೀಡಲಾದ ಕೂಡಿಕೆ ಕಾರ್ಡುಗಳಿಗೆ ಸಾಲದ ಮಿತಿಯನ್ನು (ಒಟ್ಟು ಮಿತಿಯ ಒಳಗೆ) ನಿರ್ಧರಿಸಲಾಗುವುದು. ಕೂಡಿಕೆ ಕಾರ್ಡುದಾರರು ಮಾಡಿದ ಎಲ್ಲ ವ್ಯವಹಾರಗಳಿಗೆ ನೀವು ಜವಾಬ್ದಾರರಾಗುತ್ತೀರಿ.

ಎಚ್. ಒಂದು ವೇಳೆ ನಿಮ್ಮ ಕ್ರೆಡಿಟ್ ಕಾರ್ಡಿನ ಸಾಲದ ಮಿತಿಯನ್ನು ಕಡಿಮೆಗೊಳಿಸಲು ನಿರ್ಧರಿಸಿದಲ್ಲಿ ನಾವು ಅದರ ಬಗ್ಗೆ ನಿಮಗೆ ಕೂಡಲೇ ಕಾರಣ ಸಹಿತ ಎಸ್ ಎಮ್ ಎಸ್ / ಇ ಮೇಲ್ ಮೂಲಕ ಹಾಗೂ ಲಿಖಿತರೂಪದಲ್ಲಿ ತಿಳಿಸುತ್ತೇವೆ.

ಐ. ಇನ್ನೂ ಬಾಕಿ ಇರುವ ಮೊತ್ತವನ್ನು ನೀವು ಪಾವತಿ ಗೊಳಿಸಿದ್ದಲ್ಲಿ ಮಾತ್ರ ಕ್ರೆಡಿಟ್ ಕಾರ್ಡನ್ನು ರದ್ದು ಪಡಿಸುವ/ ಕೊನೆಗೊಳಿಸುವ ನಿಮ್ಮ ಲಿಖಿತ ಕೋರಿಕೆ ಅಥವಾ ನಮ್ಮಲ್ಲಿ ನೋಂದಣಿ ಮಾಡಿದ ಇ ಮೇಲ್ ಮೂಲಕ ನಮಗೆ ತಲುಪಿದ 7 ದಿನಗಳ ಒಳಗೆ ರದ್ದುಗೊಳಿಸಿ ಅದನ್ನು ಖಚಿತಪಡಿಸುತ್ತೇವೆ.

### 8.17.5.1 ಕ್ರೆಡಿಟ್ ಕಾರ್ಡ್ ವಿವರಣೆಗಳು

ಎ. ನಿಮ್ಮ ಕ್ರೆಡಿಟ್ ಕಾರ್ಡ್ ಖಾತೆಯನ್ನು ನೀವು ನಿಭಾಯಿಸಲು ಅನುಕೂಲವಾಗಲು ಮತ್ತು ಖರೀದಿ ಹಾಗೂ ನಗದು ಹಿಂತೆಗೆದು ಕೊಳ್ಳುವುದರ ವಿವರ ಪರೀಕ್ಷಿಸಲು, ಕ್ರೆಡಿಟ್ ಕಾರ್ಡ್ ಮೂಲಕ ಮಾಡಿದ ವ್ಯವಹಾರಗಳ ಮಾಸಿಕ ವಿವರಣೆಗಳನ್ನು ನಿಮಗೆ ನಾವು ಉಚಿತವಾಗಿ ಕಳುಹಿಸುತ್ತೇವೆ. ಈ ವಿವರಣೆಗಳು ಪೂರ್ವ ನಿರ್ಧಾರಿತ ದಿನದಂದು ಪ್ರತಿ ತಿಂಗಳು ಅಂಚೆ/ ವೇಗದೂತ ಮೂಲಕ ಅಥವಾ ನೀವು ನಮ್ಮಲ್ಲಿ ದಾಖಲಿಸಿದ ಇ ಮೇಲ್ ವಿಳಾಸಕ್ಕೆ ಕಳುಹಿಸಲಾಗುವುದು. ಈ ವಿವರಣೆಗಳನ್ನು ಅಂತರ್ಜಾಲ ಬ್ಯಾಂಕಿಂಗ್ ಮೂಲಕ ವೀಕ್ಷಿಸಲು ಸಹ ಅನುವು ಮಾಡಿಕೊಡಲಾಗುವುದು.

ಬಿ. ಒಂದು ವೇಳೆ ಈ ವಿವರಣೆಗಳು ನಿಮಗೆ ತಲುಪದಿದ್ದಲ್ಲಿ ನೀವು ನಮ್ಮನ್ನು ಸಂಪರ್ಕಿಸುವುದನ್ನು ನಾವು ನಿರೀಕ್ಷಿಸುತ್ತೇವೆ.ಏಕೆಂದರೆ ನಾವು ಈ ವಿವರಗಳನ್ನು ಮತ್ತೊಮ್ಮೆ ನಿಮಗೆ ಕಳುಹಿಸಬಹುದು ಹಾಗೂ ನೀವು ಸಮಯಕ್ಕೆ ಸರಿಯಾಗಿ ಹಣ ಪಾವತಿಸಬಹುದು ಮತ್ತು ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅದನ್ನು ಕಾಲ ಕಾಲಕ್ಕೆ ಎತ್ತಿತೋರಿಸಬಹುದು.

ಸಿ. ಅನುಸೂಚಿತ ಶುಲ್ಕ / ಬೆಲೆ, ನಿಬಂಧನೆಗಳು ಮತ್ತು ಷರತ್ತುಗಳಲ್ಲಿ ಏನಾದರೂ ಬದಲಾವಣೆಗಳಿದ್ದಲ್ಲಿ ನಾವು ನಿಮಗೆ ತಿಳಿಸುತ್ತೇವೆ. ಸಾಮಾನ್ಯವಾಗಿ ಬದಲಾವಣೆ ಗಳನ್ನು (ಬಡ್ಡಿ ದರ ಹಾಗೂ ಶಾಸನಕ್ಕೊಳಪಟ್ಟು ಆದೇಶಿಸಲಾದ ವಿಷಯಗಳನ್ನು ಹೊರತು ಪಡಿಸಿ) ಕನಿಷ್ಠ ಒಂದು ತಿಂಗಳ ನೋಟಿಸ್ ನೀಡುವುದರ ಮೂಲಕ ಭವಿಷ್ಯದಲ್ಲಿ ಅನ್ವಯವಾಗುವಂತೆ ಜಾರಿ ಮಾಡಲಾಗುವುದು. ಈ ಬದಲಾವಣೆಗಳು ಮಾಸಿಕ ವಿವರಣೆಗಳೊಂದಿಗೆ ಅಥವಾ ಅದರ ಪ್ರತಿಯೊಂದಿಗೆ ಸೂಚಿಸಲಾಗುವುದು.

ಡಿ. ಕ್ರೆಡಿಟ್ ಮಾಹಿತಿ ಕಂಪನಿಗೆ ಕ್ರೆಡಿಟ್ ಕಾರ್ಡ್ ದಾರನ ಸಾಲದ ಕಂತು ಬಾಕಿ ಬಗ್ಗೆ ತಿಳಿಸುವ ಮುನ್ನ, ನಾವು ಕಾರ್ಡ್‌ದಾರನಿಗೆ ಸಾಕಷ್ಟು ಸಮಯ ನೀಡುವುದನ್ನೂ ಒಳಗೊಂಡಂತೆ ಬೋರ್ಡ್‌ನಿಂದ ಅನುಮೋದಿಸಲ್ಪಟ್ಟ ನಿಯಮಾವಳಿಗಳನ್ನು ಅನುಸರಿಸುತ್ತೇವೆ.

## 8.18. ಮೂರನೇ ಪಕ್ಷ ಕಾರರ ಉತ್ಪನ್ನಗಳು

ನಾವು ಮೂರನೇ ಪಕ್ಷ ಕಾರರ ಉತ್ಪನ್ನಗಳು ಅಂದರೆ ಮ್ಯುಚುವಲ್ ಫಂಡ್ಸ್ ಇನ್ಶೂರೆನ್ಸ್ ಇತ್ಯಾದಿಗಳನ್ನು ಮಾರಾಟ ಮಾಡಲು ಅಧಿಕೃತರಾಗಿದ್ದಲ್ಲಿ ಮಾತ್ರ ಅಂತಹವುಗಳನ್ನು ಮಾರಾಟ ಮಾಡುತ್ತೇವೆ. ಮೂರನೇ ಪಕ್ಷ ಕಾರರ ಉತ್ಪನ್ನಗಳ ವ್ಯಾಪಾರ ಹಾಗೂ ವಿತರಣೆ ಮಾಡುವ ಬಗ್ಗೆ ನಾವು ಬೋರ್ಡಿನಿಂದ ಅಂಗೀಕೃತವಾದ ನಿಯಮಾವಳಿಗಳನ್ನು ಅಳವಡಿಸಿಕೊಳ್ಳುತೇವೆ.

ಎ. ನಾವು ಯಾವುದೇ ಹಣ ಹೂಡಿಕೆ / ಆಸ್ತಿ ನಿರ್ವಹಣೆ ಕಂಪನಿ ಅಥವಾ ಇನ್ಶೂರೆನ್ಸ್ ಕಂಪನಿಯ ದಳ್ಳಾಳಿಗಳಾಗಿ ಮೇಲಿನ ಉತ್ಪನ್ನಗಳ ಕೊಡುಗೆ ನೀಡಿದಲ್ಲಿ ನಿಮಗೆ ತಿಳಿಸುತ್ತೇವೆ.

ಬಿ. ನಾವು ಮಾರಾಟ ಮಾಡುವ ಎಲ್ಲ ಹೂಡಿಕೆ ಮತ್ತು ಇನ್ಶೂರೆನ್ಸ್ ಉತ್ಪನ್ನಗಳು ನಿಯಮ ಮತ್ತು ನಿಬಂಧನೆಗಳಿಗೆ ಅನುಸಾರವಾಗಿರುತ್ತವೆ ಎಂಬುದನ್ನು ಖಚಿತ ಪಡಿಸಿಕೊಳ್ಳುತ್ತೇವೆ.

ಸಿ. ನೀವು ನಮ್ಮಿಂದ ಬ್ಯಾಂಕಿಂಗ್ ಸೇವೆ ಅಥವಾ ಉತ್ಪನ್ನ ಪಡೆದುಕೊಂಡಾಗ, ಅದರ ಪ್ರತಿಫಲವಾಗಿ ನಾವು ನಿಮ್ಮನ್ನು ಮೂರನೇ ಪಕ್ಷ ಕಾರರ ಉತ್ಪನ್ನಗಳನ್ನು ಕೊಳ್ಳುವಂತೆ/ ಚಂದಾದಾರರಾಗುವಂತೆ ಒತ್ತಾಯಿಸುವುದಿಲ್ಲ.

ಡಿ. ನೀವು ನಮ್ಮಿಂದ ಪಡೆದ ಸಾಲಗಳ ಭದ್ರತೆಗೆ ಅಧಾರವಾಗಿ ಕೊಟ್ಟಿರುವ ಆಸ್ತಿಯ

ಮೇಲೆ ಇಂತಹದೇ ವಿಮಾ ಸಂಸ್ಥೆಯಿಂದ/ನಮ್ಮದೇ ವಿಮಾ ರಕ್ಷಣೆಯನ್ನು ಪಡೆಯುವಂತೆ ಒತ್ತಾಯಿಸುವುದಿಲ್ಲ. ವಿಮಾ ರಕ್ಷಣೆಯನ್ನು ನೀವು ನಿಮಗೆ ಇಷ್ಟವಾದ ಕಂಪನಿಯಿಂದ ಪಡೆದುಕೊಳ್ಳಬಹುದು. ನಿಮಗಿಷ್ಟವಿದ್ದಲ್ಲಿ ಮಾತ್ರ ಅದನ್ನು ನಮ್ಮ ಮೂಲಕ ಪಡೆದುಕೊಳ್ಳಬಹುದು.

ಇ. ನಾವು ನಿಮಗೆ ನಿಯತ ಕಾಲದಲ್ಲಿ ನಮ್ಮ ಶಾಖೆಗಳಲ್ಲಿ ಮಾರಾಟ ಮಾಡುವ ಉತ್ಪನ್ನಗಳ ಪ್ರಯೋಜನದ ಬಗ್ಗೆ ಜಾಹೀರಾತು/ ನೋಟೀಸ್ ಬೋರ್ಡ್/ ವೆಬ್‌ತಾಣ/ಕರಪತ್ರ ಹಂಚುವಿಕೆ ಮೂಲಕ ಶಿಕ್ಷಣವನ್ನು ನೀಡುತ್ತೇವೆ.

ಎಫ್. ನಾವು ನಮ್ಮ ಶಾಖೆಗಳಲ್ಲಿ ಮಾರಾಟ ಮಾಡುವ ಎಲ್ಲ ಹೂಡಿಕೆ / ವಿಮಾ ಉತ್ಪನ್ನಗಳ ಬಗ್ಗೆ ಆ ಉತ್ಪನ್ನಗಳನ್ನು ಮಾರಾಟ ಮಾಡಲು ಅಗತ್ಯ ಅರ್ಹತೆಗಳನ್ನು ಪಡೆದಿರುವ ವ್ಯಕ್ತಿಗಳು ವಿವರಿಸುವುದನ್ನು ದೃಢಪಡಿಸುತ್ತೇವೆ.

ಜಿ. ನಾವು ಹೂಡಿಕೆ / ವಿಮಾ ಉತ್ಪನ್ನಗಳನ್ನು ನಿಮಗೆ ಮಾರಾಟ ಮಾಡುವ ಮೊದಲು ಗ್ರಾಹಕಪರ ನ್ಯಾಯ ಸಮ್ಮತ ಸಮುಚಿತ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಎಚ್. ಒಂದು ಉತ್ಪನ್ನವು ನಿಮಗೆ ಸೂಕ್ತವಾಗಿದೆ ಎಂದು ನಮಗೆ ಕಂಡುಬಂದಲ್ಲಿ ಮಾತ್ರ ನಿಮಗೆ ಅದನ್ನು ಮಾರಾಟ ಮಾಡುತ್ತೇವೆ.

ಐ. ನೀವು ಚಂದಾದಾರರಾಗಲು/ ಉತ್ಪನ್ನವನ್ನು ಪಡೆಯಲು ನಿಮ್ಮ ಒಪ್ಪಿಗೆಯನ್ನು ಲಿಖಿತವಾಗಿ/ ಪ್ರಮಾಣೀಕೃತ ವಿದ್ಯುನ್ಮಾನ ಸಾಧನಗಳ ಮೂಲಕವಾಗಿ ಅಥವಾ ಅಗತ್ಯ ಪ್ರಮಾಣೀಕೃತದ ನಂತರವೇ ನಾವು ನೀಡಲಾಗುವ ಉತ್ಪನ್ನದ ಬಗ್ಗೆ ನಿಮ್ಮಿಂದ ಅರ್ಜಿಗಳನ್ನು ಮತ್ತು ದಾಖಲೆಗಳನ್ನು ಪಡೆದುಕೊಳ್ಳುತ್ತೇವೆ.

ಜೆ. ನಾವು ನಿಮಗೆ ನೀಡುವ ಉತ್ಪನ್ನಗಳ ಬಗ್ಗೆ ವಿವರವಾದ ನಿಯಮಗಳು ಹಾಗೂ ಷರತ್ತುಗಳನ್ನು ಒದಗಿಸುತ್ತೇವೆ.

ಕೆ. ವಿವಿಧ ಉತ್ಪನ್ನಗಳ ಮಾರಾಟದ ಬಗ್ಗೆ ನಿಗದಿತ ಶುಲ್ಕಗಳನ್ನು ಪ್ರದರ್ಶಿಸುವುದು ಮತ್ತು ನಿಮಗೆ ಒದಗಿಸುವುದನ್ನು ಖಾತರಿ ಪಡಿಸಿಕೊಳ್ಳುತ್ತೇವೆ.

ಎಲ್. ವಿವರಣಾ ಪಟ್ಟಿಗಳು / ಪಾಲಿಸಿ ಕಾಗದ ಪತ್ರಗಳನ್ನು ಪ್ರಕ್ರಿಯೆ ಪೂರ್ಣಗೊಂಡ (ವೈದ್ಯಕೀಯ ತಪಾಸಣೆ ಸಹಿತ) 30 ದಿನಗಳ ಒಳಗೆ ನಿಮಗೆ ಒದಗಿಸುವುದನ್ನು ಖಾತರಿ ಮಾಡುತ್ತೇವೆ.

ಎಮ್. ಎಸ್‌ಐಪಿಯನ್ನು ನೆನಪಿಸುವುದು, ಇತ್ತೀಚಿನ ಎನ್‌ಎವಿ, ವಾಯಿದೆ ಮುಗಿಯುವ ತಾರೀಖು, ಕಂತು ಕಟ್ಟುವ ತಾರೀಖು ಇವೇ ಮುಂತಾದ ‘‘ಮಾರಾಟಾನಂತರದ ಸೇವೆ’’ಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಒದಗಿಸುವ ವ್ಯವಸ್ಥೆ ಮಾಡುತ್ತೇವೆ.

ಎನ್. ನೀವು ತೆಗೆದುಕೊಂಡಿರುವ ಉತ್ಪನ್ನಗಳ / ಯೋಜನೆಗಳ ಸಾಮರ್ಥ್ಯದ ಬಗ್ಗೆ ನಾವು ಕಾಲ ಕಾಲಕ್ಕೆ ನಿಮಗೆ ತಿಳಿಸುತ್ತೇವೆ.

ಒ. ಮ್ಯೂಚುವಲ್ ಫಂಡ್ / ವಿಮಾ / ಇತರೆ ಹಣ ಕಾಸು ಕಂಪನಿಗಳ ಉತ್ಪನ್ನಗಳ ಮಾರಾಟ ದ ಸಂದರ್ಭದಲ್ಲಿ ಸ್ವೀಕೃತಿಯಾದ ಶುಲ್ಕ/ ದಳ್ಳಾಳಿ ರುಸುಮುಗಳ ಮಾಹಿತಿಯ ವಿವರಗಳನ್ನು ಬಹಿರಂಗ ಪಡಿಸುತ್ತೇವೆ.

## 8.19 ಸಾಲ ಸಲಹಾ ಸೌಲಭ್ಯ

ನಾವು ಸಾಲ ಸಲಹಾ ಸೌಲಭ್ಯವನ್ನು ನೀಡಲು ಪ್ರಯತ್ನಿಸುತ್ತೇವೆ. ಅಂತಹ ಸಾಲ ಸಲಹಾ ಕೇಂದ್ರದ ಸೇವೆಯನ್ನು ಪಡೆಯುವ ಸಲುವಾಗಿ ಒಂದು ನಿರ್ದಿಷ್ಟ ಕೇಂದ್ರದ ನಮ್ಮ ಶಾಖೆಗಳಲ್ಲಿ ಯಾವುದೇ ಬ್ಯಾಂಕಿನಿಂದ ಸ್ಥಾಪಿಸಲ್ಪಟ್ಟ ಸಾಲ ಸಲಹಾ ಕೇಂದ್ರದ ವಿಳಾಸ ಸಮಯ ಮುಂತಾದವುಗಳ ಮಾಹಿತಿಯನ್ನು ಪ್ರದರ್ಶಿಸುತ್ತೇವೆ.

## 8.20 ದಾಖಲೆಗಳನ್ನು ಪಡೆಯುವಿಕೆ

ನಿಮ್ಮ ಕೋರಿಕೆಯ ಮೇರೆಗೆ ನಿಮ್ಮ ವ್ಯವಹಾರದ ದಾಖಲಾತಿಗಳನ್ನು ಅವುಗಳು ನಿರ್ದಿಶ್ಟ ಸಂರಕ್ಷಣಾ ಅವಧಿಯಲ್ಲಿ ಲಭ್ಯವಿದ್ದರೆ ವೆಚ್ಚ ಪಡೆದು ನಿಮಗೆ ನೀಡುತ್ತೇವೆ.

## 9. ಶಾಖೆ ಮುಚ್ಚುವಿಕೆ/ಸ್ಥಳಾಂತರ

ಎ. ನಮ್ಮ ಶಾಖೆಯನ್ನು ಮುಚ್ಚುವುದಿದ್ದರೆ ಅಥವಾ ಸ್ಥಳಾಂತರಗೊಳಿಸುವುದಿದ್ದರೆ, ಬ್ಯಾಂಕಿಂಗ್ ಸೇವೆಯನ್ನು ನೀಡಲು ಅಸಾಧ್ಯವಾಗಿದ್ದರೆ–

i. ಆ ಕೇಂದ್ರದಲ್ಲಿ ಯಾವುದೇ ಬ್ಯಾಂಕಿನ ಶಾಖೆಯಿಲ್ಲದೇ ಇದ್ದರೆ ಎರಡು ತಿಂಗಳ ಸೂಚನೆಯನ್ನು ನೀಡುತ್ತೇವೆ.

ii. ಮಿಕ್ಕೆಲ್ಲ ಪ್ರಕರಣಗಳಲ್ಲೂ ಒಂದು ತಿಂಗಳ ಸೂಚನೆಯನ್ನು ನೀಡುತ್ತೇವೆ.

ಬಿ. ಒಂದು ವೇಳೆ ನಾವು ಶಾಖೆಯನ್ನು ಸ್ಥಳಾಂತರಗೊಳಿಸಿದಲ್ಲಿ ನಮ್ಮ ಹೊಸ ಜಾಗದಲ್ಲಿ ಆರಂಭಿಸಲಾಗುವ ಶಾಖೆಯ ಪೂರ್ಣ ವಿಳಾಸವನ್ನು ನಿಮಗೆ ನೀಡುತ್ತೇವೆ.

ಸಿ. ಶಾಖೆಯ ಕೆಲಸದ ವೇಳೆಯಲ್ಲಿ ಬದಲಾವಣೆ ಇದ್ದ ಪಕ್ಷದಲ್ಲಿ ನಿಮಗೆ ತಿಳಿಸುತ್ತೇವೆ.

## 10. ಹಣಕಾಸು ಸೇರ್ಪಡೆ

ಎ. ಬ್ಯಾಂಕ್ ಖಾತೆಗಳನ್ನು ತೆರೆಯುವ ಸಂಬಂಧ, ನಿಮ್ಮ ಗ್ರಾಹಕರನ್ನು ತಿಳಿಯಿರಿ/ ಕಪ್ಪು ಹಣ ಚಲಾವಣೆ ತಡೆಯ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿಂದ ಕಾಲ ಕಾಲಕ್ಕೆ ನೀಡಲಾಗುವ ಸೂಚನೆಗೊಳಪಟ್ಟು ಕನಿಷ್ಠ ಶಿಲ್ಕು ಇಲ್ಲದೆಯೇ ಮೂಲಭೂತ ಉಳಿತಾಯ ಬ್ಯಾಂಕ್ ಠೇವಣಿ ಖಾತೆಯನ್ನು ತೆರೆಯುವ ಸೌಲಭ್ಯವನ್ನು

ಒದಗಿಸುತ್ತೇವೆ. ಎ ಟಿ ಎಮ್ ಕಾರ್ಡ್ ಅಥವಾ ಎಟಿಎಮ್ ಕಮ್ ಡೆಬಿಟ್ ಕಾರ್ಡನ್ನು ಸೇರಿದಂತೆ ಕನಿಷ್ಠ ಸಾಮಾನ್ಯ ಸೌಲಭ್ಯಗಳನ್ನು ಯಾವುದೇ ಶುಲ್ಕವಿಲ್ಲದೆ ಒದಗಿಸುತ್ತೇವೆ. ಖಾತೆ ತೆರೆಯುವ ಸಂದರ್ಭದಲ್ಲಿ ಇದರ ಬಗ್ಗೆ ಮಾಹಿತಿಯನ್ನು ಪಾರದರ್ಶಕವಾಗಿ ನೀಡುತ್ತೇವೆ.

ಬಿ. ಸರಳೀಕೃತ "ನಿಮ್ಮ ಗ್ರಾಹಕರನ್ನು ತಿಳಿಯಿರಿ" ಮಾನದಂಡಗಳ ಆಧಾರದ ಮೇಲೆ ಅಂತಹ ಖಾತೆಗಳನ್ನು ತೆರೆಯುವ ಸೌಲಭ್ಯವನ್ನು ನೀಡುತ್ತೇವೆ. ಆದಾಗ್ಯೂ ಅಂತಹ ಖಾತೆಗಳನ್ನು ನಿರ್ಬಂಧಗಳಿಗೊಳಪಟ್ಟ ಹೆಚ್ಚುವರಿಯಾಗಿ "ಸಣ್ಣ ಖಾತೆಗಳು" ಎಂದು ಪರಿಗಣಿಸಲಾಗುವುದು ಮತ್ತು ಅವುಗಳನ್ನು ನಿಮಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಸ್ಥಳೀಯ ಭಾಷೆಯಲ್ಲಿ ತಿಳಿಸಲಾಗುವುದು.

ಸಿ. "ಮೂಲಭೂತ ಉಳಿತಾಯ ಬ್ಯಾಂಕ್ ಠೇವಣಿ ಖಾತೆ" ತೆರೆಯಲು ಅಗತ್ಯವಿರುವ ದಾಖಲೆಗಳ ಬಗ್ಗೆ ಮಾಹಿತಿಯನ್ನು ನಮ್ಮ ಎಲ್ಲಾ ಶಾಖೆಗಳಲ್ಲಿ ದ್ವಿಭಾಷೆ/ ತ್ರಿಭಾಷೆಗಳಲ್ಲಿ ಎದ್ದು ಕಾಣುವಂತೆ ಪ್ರದರ್ಶಿಸಲಾಗುವುದು ಮತ್ತು ಸರಳೀಕೃತ "ನಿಮ್ಮ ಗ್ರಾಹಕರನ್ನು ತಿಳಿಯಿರಿ" ಮಾನದಂಡದಡಿಯಲ್ಲಿ ಸಣ್ಣ ಖಾತೆಯನ್ನು ತೆರೆಯುವುದಕ್ಕೆ ಬೇಕಾಗುವ ದಾಖಲೆಗಳ ಬಗ್ಗೆಯೂ ಮಾಹಿತಿ ಪ್ರದರ್ಶಿಸ ಲಾಗುವುದು.

ಡಿ. ಮೇಲಿನ ವಿಷಯದ ಬಗ್ಗೆ ನಮ್ಮ ಸಿಬ್ಬಂದಿಗೆ ಬಹು ಮುಖ್ಯವಾಗಿ ಮುಂಚೂಣಿಯಲ್ಲಿರುವ ಸಿಬ್ಬಂದಿಗೆ ಅರಿವು ಮೂಡಿಸುವ ಸಲುವಾಗಿ ತರಬೇತಿಯೂ ಸೇರಿದಂತೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಇ. ಒಂದು ತಿಂಗಳಿನಲ್ಲಿ ನಿರ್ದಿಷ್ಟ ಪಡಿಸಿದ ಸಂಖ್ಯೆಗಳ ಹಿಂತೆಗೆತಗಳಿಗೊಳಪಟ್ಟು ಖಾತೆಗಳ ನಿರ್ವಹಣೆ ಸಾಮಾನ್ಯ ಉದ್ದರಿ ಕಾರ್ಡ್ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರಕಾರಗಳ ಸೌಲಭ್ಯಗಳ ವರ್ಗಾವಣೆಯಂತಹ ಮೂಲಭೂತ ಬ್ಯಾಂಕಿಂಗ್ ಸೌಲಭ್ಯಗಳನ್ನು ವೆಚ್ಚ ರಹಿತವಾಗಿ ನೀಡುತ್ತೇವೆ.

ಎಫ್. ಮೌಲಿಕ ಸೇವೆಗಳನ್ನು ನೀವು ಇಷ್ಟಪಟ್ಟಲ್ಲಿ ವೆಚ್ಚವಿಲ್ಲದೆ ಅಥವಾ ಅತಿ ಕಡಿಮೆ ವೆಚ್ಚದಲ್ಲಿ ನಿಮಗೆ ನೀಡುತ್ತೇವೆ ಮತ್ತು ಇದರ ಬಗ್ಗೆ ಸೂಚನೆಯನ್ನು ನಿಮಗೆ ತಿಳಿದ ಮತ್ತು ಅರ್ಥವಾಗುವ ಭಾಷೆಯಲ್ಲಿ ಮುಂಚಿತವಾಗಿಯೇ ನೀಡುತ್ತೇವೆ.

ಜಿ. ಸೇವೆಗಳು ವ್ಯವಹಾರಗಳು ಅಥವಾ ಶುಲ್ಕಗಳಲ್ಲಿ ಯಾವುದೇ ಬದಲಾವಣೆಯಿದ್ದರೆ ಅವುಗಳು ಜಾರಿಗೆ ಬರುವ ಒಂದು ತಿಂಗಳ ಮುಂಚೆ ನಿಮಗೆ ತಿಳಿಸುತ್ತೇವೆ.

ಎಚ್. ಬದಲಾವಣೆಗಳು ಇದ್ದಲ್ಲಿ, ಶಾಖೆಯ ಸೂಚನಾ ಫಲಕದಲ್ಲಿ ಪ್ರದರ್ಶಿಸುವುದರ ಮೂಲಕ/ವ್ಯವಹಾರ ಪ್ರತಿನಿಧಿಯ ಮೂಲಕ/ ಪತ್ರಗಳ ಮೂಲಕ ನಿಮಗೆ ಸೂಕ್ತವೆನಿಸುವ ವಿಧಾನಗಳ ಮೂಲಕ ತಿಳಿಸುತ್ತೇವೆ.

ಐ. ನಮ್ಮ ಶಾಖೆಗಳಿಲ್ಲದ ಕಡೆ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿ ಯೇನಾದರೂ ಇದ್ದಲ್ಲಿ, ಖಾತ ತೆರೆಯುವಿಕೆ ಮತ್ತು ಮೊತ್ತ ಹಗೂ ವ್ಯವಹಾರಗಳ ಸಂಖ್ಯೆಗಳನ್ನಾಧರಿಸಿ ಶಿಲ್ಕು ವಿಚಾರಣೆ ಹಾಗೂ ಹಣ ವರ್ಗಾವಣೆಯ ಸಲುವಾಗಿ ವ್ಯವಹಾರ ಪ್ರತಿನಿಧಿ/ ವ್ಯವಹಾರ ಸೌಲಭ್ಯದಾತರನ್ನು ಹೊಂದಲು ಪ್ರಯತ್ನಿಸುತ್ತೇವೆ.

ಜೆ. ಮೊಬೈಲ್ ಬ್ಯಾಂಕಿಂಗ್ ಸೌಲಭ್ಯವನ್ನು ನೀಡುವುದಕ್ಕೂ ಪ್ರಯತ್ನಿಸಲಾಗುತ್ತದೆ

ಕೆ. ಮೊಬೈಲ್ ಫೋನುಗಳೂ ಸೇರಿದಂತೆ ವಿದ್ಯುನ್ಮಾನ ವೇದಿಕೆಯ ಇ ಸಿ ಎಸ್ , ಎನ್ ಇ ಎಫ್ ಟಿ ಮುಂತಾದ ಇತರೇ ವರ್ಗಾವಣೆಯ ಸಾಧನಗಳನ್ನೂ ಒದಗಿಸಲು ಪ್ರಯತ್ನಿಸುತ್ತೇವೆ.

ಎಲ್. ವ್ಯವಹಾರ ಪ್ರತಿನಿಧಿ/ ವ್ಯವಹಾರ ಸೌಲಭ್ಯದಾತರಿಂದಾಗುವ ಎಲ್ಲಾ ತಪ್ಪು / ಒಪ್ಪುಗಳಿಗೆ ನಾವೇ ಹೊಣೆಯಾಗಿರುತ್ತೇವೆ ಮತ್ತು ಅವರ ವಿರುದ್ಧ ದಾಖಲಾಗುವ ಯಾವುದೇ ದೂರುಗಳನ್ನು ವಿಚಾರಣೆಗೆ ಒಳಪಡಿಸುತ್ತೇವೆ.

ಎಮ್. ಅವಶ್ಯವಿದ್ದಲ್ಲಿ, ನಿಬಂಧನೆ ಮತ್ತು ಷರತ್ತುಗಳಿಗೊಳಪಟ್ಟ ಕಡಿಮೆ ವೆಚ್ಚ ಸಾಲ ಸೌಲಭ್ಯವನ್ನು ನೀಡಲಗುತ್ತದೆ ಮತ್ತು ಇದನ್ನು ನೀವು ಸಾಲ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿದಾಗ ತಿಳಿಸಲಾಗುತ್ತದೆ.

ಎನ್. ನಿಮ್ಮ ಸಾಲದ ಅರ್ಜಿಯನ್ನು ಸಂಸ್ಕರಿಸಲು ಬ್ಯಾಂಕಿಗೆ ಬೇಕಾಗುವ ಕನಿಷ್ಠ ಮಾಹಿತಿ ಮತ್ತು ಸಾಲಕ್ಕೆ ಸಂಬಂಧಪಟ್ಟಂತೆ ಅತಿ ಮುಖ್ಯವಾಗಿ ಅನ್ವಯಿಸುವ ನಿಬಂಧನೆ ಹಾಗೂ ಷರತ್ತುಗಳು ,ಬ್ಯಾಂಕಿಗೆ ನೀಡಬೇಕಾದ ಭದ್ರತೆಗಳು ,ಕಾಲಾವಧಿ ಮತ್ತು ಅನ್ವಯಿಸುವ ಬಡ್ಡಿ ಹಾಗೂ ವಿಧಾನಗಳೂ ಸೇರಿದಂತೆ ನಾನಾ ರೀತಿಯ ಲಭ್ಯವಿರುವ ಸಾಲ ಯೋಜನೆಗಳನ್ನು ನಿಮಗೆ ವಿವರಿಸುತ್ತೇವೆ.

ಓ. ಒಂದು ಲಕ್ಷ ರೂಪಯಿವರೆಗಿನ ಸಾಲ ಮಿತಿಗೆ ( ಎಮ್ ಎಸ್ ಈ ಗ್ರಾಹಕರಿಗೆ ನೀಡಲಾಗುವ ರೂ. 10 ಲಕ್ಷದವರೆಗಿನ ಸಹ ಭದ್ರತಾ ರಹಿತ ಮಿತಿಯನ್ನು ಹೊರತು ಪಡಿಸಿ ) ನಾವು ಯಾವುದೇ ಸಹ ಭದ್ರತೆಯನ್ನು ಕೇಳುವುದಿಲ್ಲ.

ಪಿ. ಉದ್ದರಿ ಸೌಲಭ್ಯಗಳ ಬಗ್ಗೆ ಹಣಕಾಸಿನ ತೊಂದರೆಯನ್ನೇನಾದರೂ ನೀವು ಎದುರಿಸುತ್ತಿದ್ದರೆ ಅಂತಹ ಪ್ರಕರಣಗಳನ್ನು ನಾವು ಸಹಾನುಭೂತಿಕರವಾಗಿ ಹಾಗೂ ಸಕಾರಾತ್ಮಕವಾಗಿ ಪರಿಗಣಿಸುತ್ತೇವೆ.

ಕ್ಯು. ಮೇಲೆ ತಿಳಿಸಿದಂತಹ ಹಣಕಾಸಿನ ತೊಂದರೆಯನ್ನೇನಾದರೂ ನೀವು ಎದುರಿಸುತ್ತಿದ್ದು ಆ ಬಗ್ಗೆ ನಮಗೆ ಮಾಹಿತಿ ನೀಡಿದರೆ ನಿಮ್ಮ ತೊಂದರೆ ಪರಿಹರಿಸಲು ನಮಗದು ಸಹಕಾರಿಯಾಗುತ್ತದೆ.

ಆರ್. ನಿಮ್ಮ ತೊಂದರೆಗಳ ನಿವಾರಣಾ ಸಂಬಂಧ, ನಮ್ಮಿಬ್ಬರ ಹಿತಾಸಕ್ತಿಯನ್ನು

ಗಮನದಲ್ಲಿರಿಸಿಕೊಂಡು, ಅವಶ್ಯವಿದ್ದಲ್ಲಿ, ಪುಷ್ಟೀಕರಿಸಿದ ಪ್ಯಾಕೇಜನ್ನು ನಿಮಗೆ ನೀಡಲು ಪ್ರಯತ್ನಿಸುತ್ತೇವೆ.

ಎಸ್. ಸಾಮಾನ್ಯ ಶಾಖಾ ಬ್ಯಾಂಕಿಂಗ್ ಅಥವಾ ಮಾಹಿತಿ ಮತ್ತು ಸಂವಹನ ತಂತ್ರ ಜ್ಞಾನ (ಐ ಸಿ ಟಿ) ಅಡಿಯಲ್ಲಿ ಇರುವ ಬ್ಯಾಂಕು ಖಾತೆಗಳ ನಿರ್ವಹಣೆಯ ಬಗ್ಗೆ ಖಾತಾದಾರರಿಗೆ ತಿಳುವಳಿಕೆ ಮತ್ತು ಮಾರ್ಗದರ್ಶನ ನೀಡುತ್ತೇವೆ.

ಟಿ. ಗ್ರಾಹಕರಲ್ಲಿ ಅರಿವು ಮೂಡಿಸಲು ನಾವು ಹಣಕಾಸಿನ ಸಾಕ್ಷರತೆಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತೇವೆ.

ಯು. ಹಳ್ಳಿ ಮತ್ತು ಪಟ್ಟಣಗಳಲ್ಲಿನ ಗಮ್ಯ ಗುಂಪುಗಳನ್ನು ಸೇರಿಸಿಕೊಂಡು ನಾವು ಹಣಕಾಸಿನ ಸೇರ್ಪಡೆಯ ಶಿಬಿರ, ಟೌನ್ ಹಾಲ್ ಕಾರ್ಯಕ್ರಮ ಹಾಗೂ ಸ್ಟಾಲ್ ಪ್ರದರ್ಶನಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತೇವೆ.

ವಿ. ದೇಶಾದ್ಯಂತ ಮತ್ತು ವಿಶೇಷವಾಗಿ ನಮ್ಮ ಬ್ಯಾಂಕಿನಲ್ಲಿ ನಡೆಸಲಾದ ಹಣಕಾಸಿನ ಸೇರ್ಪಡೆಯ ಕೆಲಸ–ಕಾರ್ಯಗಳ ಬಗ್ಗೆ ನಮ್ಮ ಸಿಬ್ಬಂದಿಗೆ ತಿಳುವಳಿಕೆ ನೀಡುವ ವ್ಯವಸ್ಥೆಯನ್ನು ನಾವು ಪರಿಚಯಿಸಲಿದ್ದೇವೆ.

ಡಬ್ಲ್ಯು. ಬ್ಯಾಂಕುಗಳಿಲ್ಲದ ಪ್ರದೇಶಗಳಲ್ಲಿ ಹಣಕಾಸಿನ ಸೇರ್ಪಡೆಯ ಯೋಜನೆಗಳನ್ನು ಕಾರ್ಯಗತಗೊಳಿಸುವಲಿ ಬ್ಯಾಂಕಿನ ಅಧಿಕಾರಿಗಳು ಕೈಗೊಂಡ ಸತತ ಪ್ರಯತ್ನ ಗಳನ್ನು ವ್ಯವಸ್ಥಿತಗೊಳಿಸುವ ದಿಶೆಯಲ್ಲೂ ನಾವು ಕಾರ್ಯ ಪ್ರವೃತ್ತರಾಗುತ್ತೇವೆ.

ಎಕ್ಸ್. ನಿಮ್ಮ ದೂರುಗಳೇನಾದರೂ ಇದ್ದರೆ ಅವುಗಳನ್ನು ಕೂಡಲೇ ಇತ್ಯರ್ಥಗೊಳಿಸುವ ಕಡೆಯೂ ನಾವು ಗಮನ ಹರಿಸುತ್ತೇವೆ.

ವೈ. ವ್ಯವಹಾರ ಪ್ರತಿನಿಧಿ/ ವ್ಯವಹಾರ ಸೌಲಭ್ಯದಾತರ ಬಗ್ಗೆ ನಿಮ್ಮ ದೂರುಗಳೆನಾದರೂ ಇದ್ದರೆ ದೂರು ಸಲ್ಲಿಸುವ ಬಗೆಯ ಬಗ್ಗೆ ಹಾಗೂ ಬ್ಯಾಂಕುಗಳಲ್ಲಿನ ದೂರು–ನಿವಾರಣಾ ಕ್ರಮಗಳ ಬಗ್ಗೆ ತಿಳುವಳಿಕೆ ನೀಡುತ್ತೇವೆ. ಬ್ಯಾಂಕಿನಿಂದ, ನಿಮಗೆ ತೃಪ್ತಿಕರವಾಗುವಂತೆ ದೂರು ಪರಿಹರಿಸಲ್ಪಡದಿದ್ದಲ್ಲಿ ಬ್ಯಾಂಕಿಂಗ್ ಓಮ್‌ಬುಡ್ಸ್ ಮನ್ ಯೋಜನೆಯಡಿ ಪರಿಹಾರೋಪಾಯಗಳ ಬಗ್ಗೆಯೂ ನಿಮಗೆ ತಿಳಿಸಿಕೊಡುತ್ತೇವೆ.

ಝಡ್. ಹಣಕಾಸಿನ ಸೇರ್ಪಡೆಯ ಉತ್ಪನ್ನಗಳು ಮತ್ತು ಸೇವೆಗಳ ಬಗ್ಗೆ ವ್ಯಾಪಕ ಪ್ರಚಾರ ನೀಡುವ ಮೂಲಕ ಹಣಕಾಸಿನ ಸೇರ್ಪಡೆ– ಯೋಜನೆಯ ಸಮರ್ಪಕ ಅನುಷ್ಠಾನ ಮಾಡಲಾಗುವುದು.

## 11. ಹಿರಿಯ ನಾಗರಿಕರು ಹಾಗೂ ವಿಕಲ ಚೇತನರು

ಎ. ಹಿರಿಯ ನಾಗರಿಕರು, ವಿಕಲ ಚೇತನರು ಮತ್ತು ಅನಕ್ಷರಂತಹ ವಿಶಿಷ್ಟ ಗ್ರಾಹಕರು

ಬ್ಯಾಂಕುಗಳೊಂದಿಗೆ ಸುಲಭವಾಗಿ ವ್ಯವಹರಿಸಲು ಅನುವಾಗುವಂತೆ ನಮ್ಮೆಲ್ಲ ಪ್ರಯತ್ನಗಳು ಮುನ್ನಡೆಯುತ್ತಿದ್ದು ಇಂತಹ ಗ್ರಾಹಕರಿಗೆ ಸುಲಭ ನೀತಿಗಳು, ಉತ್ಪನ್ನಗಳು ಮತ್ತು ಸೇವೆಗಳನ್ನು ಒದಗಿಸಲಾಗುತ್ತದೆ.

ಬಿ. ಹೊಸ ಪದ್ಧತಿ/ ವಿಧಾನಗಳ ಮೂಲಕ ಸುಧಾರಿತ ಬ್ಯಾಂಕಿಂಗ್ ಸೇವೆಗಳನ್ನು ನೀಡಲಾಗುವುದು.

ಸಿ. ನಿಮಗೆ ಸುಲಭವಾಗುವಂತಹ ಶಾಖಾ–ಸೇವೆ/ ಎಟಿಎಮ್ ಸೌಲಭ್ಯಗಳನ್ನು ಒದಗಿಸಲಾಗುವುದು.

ಡಿ. ನಿಮ್ಮ ಬ್ಯಾಂಕಿಂಗ್ ವ್ಯವಹಾರಗಳು ಸುಲಲಿತವಾಗುವಂತೆ ನಮ್ಮ ಸಿಬ್ಬಂದಿ ವರ್ಗದವರು ಸಂವೇದನಾಶೀಲರಾಗಿ ವ್ಯವಹರಿಸಲು ಸೂಚಿಸಲಾಗಿದೆ

ಈ. ಈ ಸಂಹಿತೆಯಲ್ಲಿನ ಎಲ್ಲ ಇತರ ಬದ್ಧತೆಗಳ ಜೊತೆಗೆ–

i. ನಿಮಗೆ ಆದ್ಯತೆ ನೀಡುತ್ತೇವೆ. ಬ್ಯಾಂಕಿಂಗ್ ವ್ಯವಹಾರಗಳು ಹಾಗೂ ದೂರು ನಿರ್ವಹಣೆಗಳಲ್ಲಿ ವ್ಯಕ್ತಿಗತ ಸೇವೆಗಳನ್ನು ಕೂಡ ಒದಗಿಸುತ್ತೇವೆ.

ii. ಬ್ಯಾಂಕಿಂಗ್ ಹಾಲ್ ನಲ್ಲಿ ನಿಮಗೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡುತ್ತೇವೆ.

iii. 'ಏಕ ಗವಾಕ್ಷ" ಸೇವೆಯ ಸೌಕರ್ಯ ವನ್ನು ನಿಮಗೊದಗಿಸುತ್ತೇವೆ.

iv. ಪಾಸ್ ಬುಕ್ ಹಾಗೂ ಅಧಿಕಾರ ಪತ್ರಗಳನ್ನು ಪಡೆದು, ನೀವು ನಿರ್ಧರಿಸಿದ ಮಿತಿಯಲ್ಲಿ ನೀವು ಅಧಿಕಾರ ನೀಡಿದ ವ್ಯಕ್ತಿಗೆ ಹಣ ಹಿಂತೆಗೆತಕ್ಕೆ ಅನುವು ಮಾಡಿಕೊಡುತ್ತೇವೆ.

v. ಅನಾರೋಗ್ಯ ಹಾಗೂ ಬ್ಯಾಂಕಿಗೆ ಬರಲಾಗದ ವಿಶೇಷ ಸಂದರ್ಭಗಳಲ್ಲಿ ನಾವು ನಿಮ್ಮ "ಮನೆ ಬಾಗಿಲಿಗೇ" ಬಂದು ನಿಮ್ಮ ಖಾತೆಗೆ ಜಮಾ ಮಾಡಲು ಹಣ / ಸಂಲೇಖಗಳನ್ನು ಸಂಗ್ರಹಿಸುತ್ತೇವೆ.ಮತ್ತು ನಿಮ್ಮ ಲಿಖಿತ ಕೋರಿಕೆಯ ಮೇರೆಗೆ ಚೆಕ್ಕನ್ನು ಪಡೆದು ಬೇಡಿಕೆ ಹುಂಡಿ ನೀಡುತ್ತೇವೆ.

vi. ನಿಮ್ಮ ಖಾತೆಗೆ ಜಮಾಗೊಂಡ ಪಿಂಚಣಿ ಮೊತ್ತದ ಜಮಾ ವಿವರ ಇರುವ ಪಿಂಚಣಿ ಚೀಟಿಯನ್ನು (ಪಿಂಚಣಿದಾರರಿಗೆ)ನೀಡುತ್ತೇವೆ.

vii. ವಿಶೇಷ ಸಂದರ್ಭಗಳಲ್ಲಿ ಪಿಂಚಣಿ ಮೊತ್ತವನ್ನು ಮನೆ ಬಾಗಿಲಿಗೇ ತಲುಪಿಸುವ ಯತ್ನವನ್ನು ಮಾಡುತ್ತೇವೆ.

viii. ನೀವು (ಪಿಂಚಣಿದಾರರು) ನೀಡಬೇಕಾದ "ಜೀವಂತ ಪ್ರಮಾಣ ಪತ್ರ"ವನ್ನು ನಮ್ಮ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಸ್ವೀಕರಿಸುತ್ತೇವೆ.

ix. ಆಟಿಸಮ್, ಸೆರೆಬ್ರಲ್ ಪಾಲ್ಸಿ, ಮಾನಸಿಕ ಅಸ್ವಸ್ಥತೆಮತ್ತು ಬಹು ಅಂಗವಿಕಲತೆ

ಯುಳ್ಳವರ ಬಂಧುಗಳು/ ಪಾಲಕರಿಗೆ ರಾಷ್ಟ್ರೀಯ ಟ್ರಸ್ಟ್ ಕಾಯಿದೆ –1999 ರ ಅಡಿಯಲ್ಲಿ ಕಾನೂನು–ಪೋಷಕರನ್ನು ನೇಮಕಾತಿ ಮಾಡಿ ಖಾತೆ ತೆರೆಯುವಿಕೆ/ ನಿರ್ವಹಣೆಯಲ್ಲಿ ಅವರಿಗೆ ಮಾರ್ಗದರ್ಶನ ಮಾಡುತ್ತೇವೆ.

x. ದೃಷ್ಟಿ ಮಾಂದ್ಯರಿಗೆ ಯಾವುದೇ ರೀತಿಯ ತಾರತಮ್ಯವಿಲ್ಲದೆ ಎಲ್ಲ ತರಹದ ಬ್ಯಾಂಕಿಂಗ್ ಸೌಲಭ್ಯಗಳಾದ ಚೆಕ್ ಪುಸ್ತಕ/ಏಟಿಎಮ್/ನೆಟ್ ಬ್ಯಾಂಕಿಂಗ್ / ಭದ್ರತಾ ಕಪಾಟುಗಳು/ಸಣ್ಣ ಸಾಲಗಳು/ಉದ್ದರಿ ಕಾರ್ಡುಗಳು ದೊರಕಿಸುವುದನ್ನು ಖಚಿತ ಪಡಿಸಿಕೊಳ್ಳುತ್ತೇವೆ.

xi. ದೃಷ್ಟಿಮಾಂದ್ಯರು ನಾನಾ ವಿಧದ ಬ್ಯಾಂಕಿಂಗ್ ಸೌಲಭ್ಯಗಳನ್ನು ಪಡೆದು ಕೊಳ್ಳುವಲ್ಲಿ ನಾವು ಎಲ್ಲ ರೀತಿಯ ಸಹಾಯವನ್ನು ನೀಡುತ್ತೇವೆ.

xii. ನಿಮ್ಮ ಕುಂದು ಕೊರತೆಗಳನ್ನು ತಿಳಿಯಲು ಮತ್ತು ಸಾಮೂಹಿಕ ಅನುಭವಗಳ ಪ್ರಯೋಜನ ಪಡೆಯಲು ನಾವು ನಿಯತವಾಗಿ ಸಭೆಗಳನ್ನೇರ್ಪಡಿಸಲು ಪ್ರಯತ್ನಿಸುತ್ತೇವೆ.

## 12. ನಿಮ್ಮ ಖಾತೆಗಳ ರಕ್ಷಣೆ

### 12.1 ಸುರಕ್ಷಿತ ಮತ್ತು ನಂಬಲರ್ಹ ಬ್ಯಾಂಕಿಂಗ್ ಮತ್ತು ಪಾವತಿ ವ್ಯವಸ್ಥೆಗಳು

ಎ. ನಾವು ಒಂದು ಉದ್ದಿಮೆಯಾಗಿ ನಿಮಗೆ ನೀಡುವ ಸಹಕಾರದಿಂದ ನೀವು ಅತ್ಯಂತ ಸುರಕ್ಷಿತ ಮತ್ತು ನಂಬಲರ್ಹ ಬ್ಯಾಂಕಿಂಗ್ ಮತ್ತು ಪಾವತಿ ವ್ಯವಸ್ಥೆಯಲ್ಲಿ ನಂಬಿಕೆಯಿಡಬಹುದು.

ಬಿ. ನಾವು ಸುರಕ್ಷಿತ ವ್ಯವಸ್ಥೆಯ ಭಾಗವಾಗಿ ನಿಗಾ ಇಡಲು ಸಾಧ್ಯವಾದ ಕಡೆಗಳಲ್ಲೆಲ್ಲ ಸಿಸಿಟಿವಿ(ಕ್ಲೋಸ್ ಸರ್ಕ್ಯೂಟ್ ಟಿವಿ)ಯನ್ನು ಸ್ಥಾಪಿಸುತ್ತೇವೆ.

### 12.2. ಪ್ರಸಕ್ತ ಬೆಳವಣಿಗೆಯ ಬಗ್ಗೆ ನಮಗೆ ತಿಳುವಳಿಕೆ

ಎ. ನಾವು ನಿಮಗೆ ಅಗತ್ಯವಾದ ಎಚ್ಚರಿಕೆಗಳನ್ನು/ಸೂಚನೆಗಳನ್ನು ನೀಡಲು ಅನುವಾಗುವಂತೆ ನೀವು ನಿಮ್ಮ ಪ್ರಚಲಿತವಾದ ವಿಳಾಸ, ದೂರವಾಣಿ ಸಂಖ್ಯೆ , ಮೊಬೈಲ್ ಫೋನ್ ಸಂಖ್ಯೆ ಮತ್ತು ಇ ಮೇಲ್ ವಿಳಾಸ (ಐಡಿ)ವನ್ನು ನಮಗೆ ಒದಗಿಸಿರುತ್ತೀರೆಂದು ಖಚಿತ ಪಡಿಸಿಕೊಳ್ಳಿ.

ಬಿ. ನಾವು, ಅಗತ್ಯವಿದ್ದಲ್ಲಿ, ನಿಮ್ಮನ್ನು ಸಂಪರ್ಕಿಸಲು ಅನುವಾಗುವಂತೆ, ನೀವು ನಿಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಇ ಮೇಲ್ ವಿಳಾಸವನ್ನು ಬದಲಾಯಿಸಿ ದಾಗ ತಪ್ಪದೇ ನಮಗೆ ತಿಳಿಸುವಿರಿ ಎಂಬುದನ್ನು ಖಚಿತ ಪಡಿಸಿಕೊಳ್ಳಿ.

## 12.3 ನಿಮ್ಮ ಖಾತೆಯನ್ನು ಪರೀಕ್ಷಿಸಿಕೊಳ್ಳಿ

ಎ. ನೀವು ನಿಮ್ಮ ಖಾತಾ ವಿವರ ಅಥವಾ ಪಾಸ್ ಪುಸ್ತಕವನ್ನು ಕಾಲಕಾಲಕ್ಕೆ ಪರೀಕ್ಷಿಸಿಕೊಳ್ಳಿರೆಂಬುದು ನಮ್ಮ ಸಲಹೆ. ಯಾವುದಾದರೂ ತಪ್ಪು ದಾಖಲೆಯೆಂದು ಕಂಡುಬಂದರೆ, ನೀವು ಆದಷ್ಟು ಬೇಗ ಅದನ್ನು ನಮಗೆ ತಿಳಿಸುವುದರಿಂದ ನಾವು ಅದನ್ನು ತನಿಖೆ ಮಾಡಲು ಸಾಧ್ಯವಾಗುತ್ತದೆ. ನೇರ ಖರ್ಚುಗಳು ಮತ್ತು ಸ್ಥಾಯಿ ನಿರ್ದೇಶನ ವ್ಯವಹಾರಗಳ ನಿಯತ ಕಾಲಿಕ ಪರೀಕ್ಷೆಯು ನಿಮ್ಮ ಹಣ ನೀವು ಅಪೇಕ್ಷಿಸಿದ ಜಾಗಕ್ಕೇ ಹೋಗುತ್ತದೆಂಬುದನ್ನು ಖಚಿತ ಪಡಿಸಿಕೊಳ್ಳಲು ನೆರವಾಗುತ್ತದೆ.

ಬಿ. ನಿಮ್ಮ ಖಾತೆಯ ವ್ಯವಹಾರವನ್ನು ತನಿಖೆ ಮಾಡಬೇಕೆಂದು ಬಯಸಿದರೆ, ನಮ್ಮೊಡನೆ ಮತ್ತು ಅಗತ್ಯ ಬಿದ್ದರೆ ಪೋಲೀಸ್/ ಇತರ ತನಿಖಾ ಏಜೆನ್ಸಿಗಳನ್ನು ಬಳಸಿಕೊಳ್ಳ ಬೇಕಾದಲ್ಲಿ ಅವರೊಡನೆಯೂ ನೀವು ಸಹಕರಿಸಬೇಕು.

## 12.4 ಕಾಳಜಿ ವಹಿಸಿರಿ

ನೀವು ನಿಮ್ಮ ಚೆಕ್ ಮತ್ತು ಪಾಸ್ ಪುಸ್ತಕಗಳು ಕಾರ್ಡ್‌ಗಳು ಪಿನ್ ಸಂಖ್ಯೆ ಮತ್ತು ಇತರ ಮಾಹಿತಿಯ ಬಗ್ಗೆ ವಹಿಸುವ ಎಚ್ಚರ, ನಮಗೆ ಮೋಸಗಾರಿಕೆಯನ್ನು ತಡೇಯಲು ಮತ್ತು ನಿಮ್ಮ ಖಾತೆಯನ್ನು ರಕ್ಷಿಸಲು ಅಗತ್ಯವಾಗಿದ್ದು ಸಹಕಾರಿಯಾಗಿರುತ್ತದೆ. ಈ ಕೆಳಗಿನ ಸೂಚನೆಗಳನ್ನು ನೀವು ಅನುಸರಿಸುತ್ತಿರುವಿರಿ ಎಂಬುದನ್ನು ಖಚಿತ ಪಡಿಸಿಕೊಳ್ಳಿ.

ಎ. ಹೀಗೆ ಮಾಡಬೇಡಿ

i. ನಿಮ್ಮ ಚೆಕ್ ಪುಸ್ತಕ ಮತ್ತು ಕಾರ್ಡ್‌ಗಳನ್ನು ಒಟ್ಟಿಗೆ ಇಡುವುದು

ii. ಖಾಲಿ ಚೆಕ್‌ಗಳನ್ನು ಸಹಿ ಮಾಡಿ ಇಡುವುದು

iii. ನಿಮ್ಮ ಕಾರ್ಡ್‌ಗಳು, ಪಿನ್ ಸಂಖ್ಯೆ, ಪ್ರವೇಶಾನುಮತಿಯ ಗುಪ್ತ ಸಂಖ್ಯೆ ಅಥವಾ ಇತರ ರಕ್ಷಣಾ ಮಾಹಿತಿಯನ್ನು ಇತರರಿಗೆ ಕೊಡುವುದು / ತಿಳಿಸುವುದು

ಬಿ. ನಿಮ್ಮ ಕಾರ್ಡ್ / ಚೆಕ್ ಪುಸ್ತಕಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುವ ಬಗ್ಗೆ ನಾವು ನಿಮಗೆ ಸೂಚಿಸುತ್ತೇವೆ.

ಸಿ. ನಿಮ್ಮ ಚೆಕ್ ಮತ್ತು ಪಾಸ್ ಪುಸ್ತಕಗಳು ಅಥವಾ ಎಟಿಎಮ್/ ಡೆಬಿಟ್ ಕಾರ್ಡ್‌ಗಳು ಕಳೆದು ಹೋಗಿದ್ದರೆ ಅಥವಾ ಕಳುವಾಗಿರುವುದೆಂದು ಅಥವಾ ಯಾರಾದರೂ ನಿಮ್ಮ ಪಿನ್, ಪ್ರವೇಶಾನುಮತಿಯ ಗುಪ್ತ ಸಂಖ್ಯೆ ಅಥವಾ ಇತರ ಸುರಕ್ಷಣಾ ಮಾಹಿತಿಯ ದುರ್ಬಳಕೆ ಮಾಡಿದ ಸಂದರ್ಭದಲ್ಲಿ ಈ ಬಗ್ಗೆ ನೀವು ಸೂಚನೆಯನ್ನು ನೀಡಿದರೆ, ಆಗ ನಾವು ತಕ್ಷಣ ಕ್ರಮಗಳನ್ನು ತೆಗೆದುಕೊಂಡು ಇವು ದುರ್ಬಳಕೆಯಾಗದಂತೆ ತಡೆಯುತ್ತೇವೆ.

ಡಿ. ನೀವು ನಿಮ್ಮ ಚೆಕ್ ಮತ್ತು ಪಾಸ್ ಪುಸ್ತಕಗಳು ಅಥವಾ ಕಾರ್ಡ್‍ಗಳು ಕಳೆದು ಹೋಗಿರುವ ಅಥವಾ ಕಳುವಾಗಿರುವುದೆಂದು ಬಗ್ಗೆ ಅಥವಾ ಯಾರಿಗಾದರೂ ನಿಮ್ಮ ಪಿನ್, ಪ್ರವೇಶಾನುಮತಿಯ ಗುಪ್ತ ಸಂಖ್ಯೆ ಅಥವಾ ಯಾರಿಗಾದರೂ ಇತರ ಸುರಕ್ಷಣಾ ಮಾಹಿತಿಯು ತಿಳಿದು ಹೋಗಿರುವ ಬಗ್ಗೆ ನಿಮಗೆ ಸಂಶಯ ಬಂದರೆ ಅಥವಾ ಕಂಡುಬಂದರೆ, ಆಗ ತಕ್ಷಣ ನೀವು ಇದನ್ನು ನಮ್ಮ ಗಮನಕ್ಕೆ ತರುವುದು ಅತ್ಯಗತ್ಯ.

ಈ. ಇವುಗಳು ಕಾಣೆಯಾದ ಬಗ್ಗೆ ನಮಗೆ ನೀವು ದೂರವಾಣಿಯ ಮೂಲಕ ನಿಮಗೆ ನೀಡಿರುವ ನಮ್ಮ ಶುಲ್ಕರಹಿತ ದೂರವಾಣಿ ಸಂಖ್ಯೆಗೆ ತಿಳಿಸಿ ಮತ್ತು ಅದಕ್ಕೆ ಸಂಬಂಧಪಟ್ಟ ಲಿಖಿತ ಸೂಚನೆಯನ್ನು ತಕ್ಷಣವೇ ತಿಳಿಸತಕ್ಕದ್ದು. ಈ ಉದ್ದೇಶ ಕ್ಕಾಗಿಯೇ ನಾವು ನಿಮಗೆ ನೀಡಿರುವ ಇ– ಅಂಚೆಯ ವಿಳಾಸಕ್ಕೆ ಸೂಚನೆಯನ್ನು ಕಳುಹಿಸಿ.

ಎಫ್. ನಮ್ಮ ಗಮನಕ್ಕೆ ತರುವವರೆಗಿನ ಮುಂಚಿನ ಸಮಯದಲ್ಲಿ ದುರ್ಬಳಕೆಯಿಂದಾದ ನಷ್ಟಕ್ಕೆ ನೀವೇ ಬಾಧ್ಯರು.

## 12.5 ಪಾವತಿಯ ರದ್ದತಿ

ಎ. ಚೆಕ್‌ನ ಪಾವತಿಯನ್ನು ನಿಲ್ಲಿಸಬೇಕಾದರೆ ಅಥವಾ ನೀಡಿರುವ ಸ್ಥಾಯಿ ನಿರ್ದೇಶನಗಳನ್ನು ರದ್ದುಮಾಡಬೇಕಾದರೆ ಅಥವಾ ನೇರ ಖರ್ಚು ಹಾಕಬೇಕಾದರೆ, ಅದನ್ನು ನೀವು ಲಿಖಿತವಾಗಿ ನಮಗೆ ತಿಳಿಸಬೇಕು.

ಬಿ. ನೀವು ನೀಡಿದ ನಿರ್ದೇಶನವನ್ನು ಹಿಂಪಡೆಯಲು ನಿಮ್ಮಿಂದ ಬಂದ ಯಾವುದೇ ಸೂಚನೆಯನ್ನು ಫಲಾನುಭವಿಯ ಅನುಮತಿ/ ಬಳಕೆದಾರ ಸಂಸ್ಥೆಯ ಪೂರ್ವಾನುಮತಿ ಇಲ್ಲದೆಯೇ ಅಂಗೀಕರಿಸುತ್ತೇವೆ.

ಸಿ. ನಿಮ್ಮ ರದ್ದುಪಡಿಸುವ ನಿರ್ಧಾರದ ಸೂಚನೆಯನ್ನು ನಮಗೆ ತಿಳಿಸದಿದ್ದರೆ, ಅಂತಹ ಪಾವತಿಯನ್ನು ರದ್ದುಪಡಿಸಲು ಸಾಧ್ಯವಾಗದೇ ಇರಬಹುದು.

ಡಿ. ಕ್ರೆಡಿಟ್ ಕಾರ್ಡ್ ಪಾವತಿಯ ರದ್ಧತಿಯು ಗೊತ್ತುಪಡಿಸಬಹುದಾದ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

## 12.6 ನಷ್ಟದ ಹೊಣೆಗಾರಿಕೆ

ನೀವು ಬ್ಯಾಂಕಿಗೆ ಮೋಸ ಮಾಡಲು ಪ್ರಯತ್ನಿಸಿದರೆ, ನಿಮ್ಮ ಖಾತೆಗೆ ಒದಗ ಬಹುದಾದ ಎಲ್ಲ ನಷ್ಟಗಳಿಗೆ ನೀವೇ ಜವಾಬ್ದಾರರು. ನೀವು ಅಗತ್ಯ ಎಚ್ಚರಿಕೆಯಿಂದ ವರ್ತಿಸದಿದ್ದರೆ, ಇದರಿಂದ ನಿಮಗೆ ನಷ್ಟವುಂಟಾಗುವುದಾದರೆ, ನೀವು ಅದಕ್ಕೆ ಜವಾಬ್ದಾರ ರಾಗುತ್ತೀರಿ.

## ಅನುಬಂಧ – ಲಘುಪದಕೋಶ

ಈ ವ್ಯಾಖ್ಯಾನಗಳು ಸಂಹಿತೆಯಲ್ಲಿ ಬಳಕೆಯಾಗಿರುವ ಪದ ಮತ್ತು ಶಬ್ದಗಳ ಅರ್ಥವನ್ನು ವಿವರಿಸುತ್ತವೆ. ಅವು ನಿರ್ದಿಷ್ಟವಾದ ಕಾನೂನಿನ ಅಥವಾ ತಾಂತ್ರಿಕ ವ್ಯಾಖ್ಯಾನವಲ್ಲ.

### ಎಟಿಎಮ್

ಇದು ಗ್ರಾಹಕರು ತಮ್ಮ ವೈಯಕ್ತಿಕ ಗುರುತು ಸಂಖ್ಯೆಯನ್ನು (ಪಿನ್) ಬಳಸಿ ನಗದು ಹಣ, ಮಾಹಿತಿ ಮತ್ತು ಇತರ ಸೇವೆಗಳನ್ನು ಪಡೆಯುವ ಸ್ವಯಂ ಚಾಲಿತ ಹಣನೀಡುವ ಯಂತ್ರ (ಎ ಟಿ ಎಮ್)

### ಬ್ಯಾಂಕಿಂಗ್ ಲೋಕಪಾಲರು

ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪಿಸಿರುವ, ವ್ಯಕ್ತಿಗಳು ಮತ್ತು ಸಣ್ಣ ವ್ಯಾಪಾರಿಗಳು ತಮ್ಮ ಬ್ಯಾಂಕಿನೊಂದಿಗ ಹೊಂದಿರುವ ವ್ಯಾಜ್ಯಗಳನ್ನು ಪರಿಹರಿಸುವ, ಸ್ವಾಯತ್ತ ಅಧಿಕಾರವುಳ್ಳ ಪ್ರಾಧಿಕಾರ.

### ಕಾರ್ಡ್

ಗ್ರಾಹಕರು ಸರಕು ಮತ್ತು ಸೇವೆಯ ಪಾವತಿಗಾಗಿ ಹಾಗೂ ನಗದು ಹಣ ಪಡೆಯಲು ಬಳಸುವ ಯಾವುದೇ ಪ್ಲಾಸ್ಟಿಕ್ ಕಾರ್ಡ್‌ಗೆ ಸಾಮಾನ್ಯವಾಗಿ ಬಳಸುವ ಪದ. ಈ ಸಂಹಿತೆಯಲ್ಲಿ ಅದು ಡೆಬಿಟ್, ಕ್ರೆಡಿಟ್, ಸ್ಮಾರ್ಟ್ ಮತ್ತು ಎಟಿಎಮ್ ಕಾರ್ಡ್‌ಗಳೂ ಸೇರಿರುತ್ತವೆ.

### ಕ್ರೆಡಿಟ್ ಕಾರ್ಡ್

ಸರಕು ಮತ್ತು ಸೇವೆಯ ಪಾವತಿಗಾಗಿ ಹಾಗೂ ನಗದು ಹಣ ಪಡೆಯಲು ಕ್ರೆಡಿಟ್ ಸೌಲಭ್ಯವಿರುವ ಪ್ಲಾಸ್ಟಿಕ್ ಕಾರ್ಡೇ ಕ್ರೆಡಿಟ್ ಕಾರ್ಡ್ ಆಗಿದೆ.

### ಚೆಕ್‌ಗಳ ಸಂಗ್ರಹಣಾ ನೀತಿ

ಚೆಕ್‌ಗಳ ಸಂಗ್ರಹಣಾ ನೀತಿಯೆಂದರೆ ಖಾತೆಗಳಿಗೆ ಜಮೆಮಾಡಲು ಬ್ಯಾಂಕಿಗೆ ಒಪ್ಪಿಸುವ ವಿವಿಧ ಸ್ಥಳೀಯ ಮತ್ತು ಹೊರಗಿನ ಚೆಕ್ ಮತ್ತು ಸಂಲೇಖಗಳನ್ನು ಕುರಿತಂತೆ ಬ್ಯಾಂಕುಗಳು ಅನುಸರಿಸುವ ನೀತಿ. ಇತರೆ ವಿಷಯಗಳ ಜೊತೆಗೆ, ಕೆಳಕಂಡ ವಿಷಯಗಳನ್ನೂ ಈ ನೀತಿಯು ನಿರ್ವಹಿಸುತ್ತದೆ:

- ಚೆಕ್ ಖರೀದಿ ಕೋರಿಕೆ
- ಚೆಕ್‌ಗಳ ಜಮೆಗೆ ತಗಲುವ ಕಾಲಮಿತಿ
- ಚೆಕ್‌ಗಳ ನಗದೀಕರಣದಲ್ಲಿ ಉಂಟಾಗುವ ವಿಳಂಬಕ್ಕೆ ವಿಧಿಸುವ ಬಡ್ಡಿದರ

- ಸ್ಥಳೀಯ ಮತ್ತು ಹೊರಗಿನ ಚೆಕ್‌ಗಳಿಗೆ ತಕ್ಷಣದ ಜಮೆ.
- ವ್ಯವಹಾರ ಪ್ರಕ್ರಿಯೆಯಲ್ಲಿ ಕಳೆದುಹೋಗುವ ಚೆಕ್‌ಗಳು/ ಸಂಲೇಖಗಳಿಗೆ ವಿಧಿಸುವ ದರ

## ಗ್ರಾಹಕರು

ಒಬ್ಬ ವ್ಯಕ್ತಿ ಬ್ಯಾಂಕಿನಲ್ಲಿ ಖಾತೆ ಹೊಂದಿರುವವರು (ಏಕ ವ್ಯಕ್ತಿ ಸಂಸ್ಥೆಗಳು/ ಮಾಲೀಕತ್ವ/ ಪಾಲುದಾರರು, ಕಂಪೆನಿಗಳು, ಕ್ಲಬ್‌ಗಳು ಮತ್ತು ಸಂಘ ಸಂಸ್ಥೆಗಳ ಖಾತೆಗಳನ್ನು ಹೊರತುಪಡಿಸಿ ಮತ್ತೊಬ್ಬರೊಂದಿಗಿನ ಜಂಟಿ ಖಾತೆ ಅಥವಾ ನಿರ್ವಾಹಕರಾಗಿ ಅಥವಾ ಟ್ರಸ್ಟಿಯಾಗಿ ಅಥವಾ ಹಿಂದೂ ಅವಿಭಕ್ತ ಕುಟುಂಬದ ಕರ್ತನಾಗಿ ಹೊಂದಿರುವ ಖಾತೆ) ಅಥವಾ ಬ್ಯಾಂಕಿನಿಂದ ಇತರ ಉತ್ಪನ್ನ/ ಸೇವೆ ಹೊಂದಲು ಬಯಸುವವರು.

## ಚಾಲ್ತಿ ಖಾತೆ

ಖಾತೆಯಲ್ಲಿನ ಶಿಲ್ಕಿನ ಆಧಾರದ ಮೇಲೆ ಅಥವಾ ಮೊದಲೇ ಸಮ್ಮತಿಸಿದ ಮೊತ್ತಕ್ಕೆ ಅನುಗುಣವಾಗಿ ಎಷ್ಟು ಬಾರಿಯಾದರೂ ಹಣ ಹಿಂತೆಗೆಯಲು ಅನುಮತಿಯಿರುವ ಒಂದು ನಮೂನೆಯ ಬೇಡಿಕೆ ಠೇವಣಿ.

## ಮೃತ ವ್ಯಕ್ತಿಯ ಖಾತೆ

ಏಕವ್ಯಕ್ತಿ ಖಾತೆಯ ವ್ಯಕ್ತಿಯಾಗಿರಲಿ ಅಥವಾ ಜಂಟಿ ಖಾತೆಯ ಒಬ್ಬ ಅಥವಾ ಹೆಚ್ಚು ಮಂದಿ ಖಾತಾದಾರರು ಮೃತರಾಗಿದ್ದಲ್ಲಿ ಅಂತಹ ಖಾತೆಯನ್ನು ಮೃತವ್ಯಕ್ತಿ ಖಾತೆ ಎಂದು ಕರೆಯುವರು.

## ಡಿಮ್ಯಾಟ್ ಖಾತೆ

ಇದೊಂದು ಅಭೌತಿಕ ಖಾತೆ ಮತ್ತು ಈ ಖಾತೆಯಲ್ಲಿ ಬಂಡವಾಳಗಾರರ ಸ್ಟಾಕ್‌ಗಳು ವಿದ್ಯುನ್ಮಾನ ರೂಪದಲ್ಲಿರುತ್ತದೆ.

## ಠೇವಣಿ ಖಾತೆಗಳು

- “ಉಳಿತಾಯ ಖಾತೆ”ಯೆಂದರೆ ಬ್ಯಾಂಕಿನಿಂದ ಯಾವುದೇ ನಿರ್ದಿಷ್ಟ ಅವಧಿಯಲ್ಲಿ ಹಣ ಹಿಂತೆಗೆತ ವ್ಯವಹಾರ ಸಂಖ್ಯೆಗೆ ಹಾಗೂ ಹಿಂತೆಗೆಯುವ ಮೊತ್ತಕ್ಕೆ ನಿರ್ಬಂಧನೆ ವಿಧಿಸುವುದಕ್ಕೆ ಒಳಪಡುವ ಒಂದು ಬೇಡಿಕೆ ಠೇವಣಿ.
- “ಸಾವಧಿ ಠೇವಣಿ”ಯೆಂದರೆ ನಿರ್ದಿಷ್ಟ ಅವಧಿಗೆಂದು ಮತ್ತು ನಿರ್ದಿಷ್ಟ ಅವಧಿಯ ಮುಕ್ತಾಯದ ನಂತರ ಮಾತ್ರ ಹಣ ಹಿಂತೆಗೆತಕ್ಕೆ ಸಾಧ್ಯವಿರುವ, ಬ್ಯಾಂಕ್‌ನಿಂದ ಸ್ವೀಕರಿಸಲ್ಪಡುವ ಠೇವಣಿಯಾಗಿದ್ದು ಇದರಲ್ಲಿ ಆವರ್ತನ/ ದುಪ್ಪಟ್ಟು ಲಾಭ ಠೇವಣಿ/

ಸಣ್ಣ ಪ್ರಮಾಣದ ಠೇವಣಿ/ ಸ್ಥಿರ ಠೇವಣಿ/ ಮಾಸಿಕ ಆದಾಯ ಸರ್ಟಿಫಿಕೇಟ್/ ತ್ರೈಮಾಸಿಕ ಆದಾಯ ಸರ್ಟಿಫಿಕೇಟ್ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

- "ಸೂಚನಾ ಠೇವಣಿ" ಯೆಂದರೆ ಒಂದು ಸಂಪೂರ್ಣ ಬ್ಯಾಂಕಿಂಗ್ ದಿನದ ಸೂಚನ ನೀಡಿ ಹಣ ಹಿಂತೆಗೆಯಲು ಸಾಧ್ಯವಿರುವ ನಿರ್ದಿಷ್ಟ ಅವಧಿಯ ಸಾವದಿ ಠೇವಣಿ.

**ಇಎಫ್‌ಟಿ**

ಇತರ ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ಒಂದು ಬ್ಯಾಂಕಿನಿಂದ ಮತ್ತೊಂದು ಬ್ಯಾಂಕಿಗೆ, ಒಂದು ಖಾತೆಯಿಂದ ಮತ್ತೊಂದು ಖಾತೆಗೆ ಇಎಫ್‌ಟಿ ಸೌಲಭ್ಯವಿರುವ ಸ್ಥಳಗಳಲ್ಲಿ ವಿದ್ಯುನ್ಮಾನ ಮಾರ್ಗದ ಮೂಲಕ ಹಣ ರವಾನೆ ಮಾಡುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಯೋಜನೆಯೇ ಇಎಫ್‌ಟಿ. ಭಾರತೀಯ ರಿಸರ್ವ್ ಬ್ಯಾಂಕ್‌ನ 15 ಕೇಂದ್ರಗಳಿಗೆ ಮಾತ್ರ ಇಎಫ್‌ಟಿ ಸೌಲಭ್ಯವನ್ನು ಸೀಮಿತಗೊಳಿಸಲಾಗಿದೆ.

**ಈಕ್ವಿಟಿ**

ಕಂಪೆನಿಯ ಶೇರುಗಳು ಭೌತಿಕ ಇಲ್ಲವೆ ಅಭೌತಿಕ ರೂಪದಲ್ಲಿದ್ದು ಕಂಪೆನಿಯನ್ನು ಪ್ರತಿನಿಧಿಸುವ, ಕಾರ್ಪೊರೇಟ್ ಸಂಸ್ಥೆಯ ಬಂಡವಾಳದ ಒಂದು ಭಾಗವೇ ಈಕ್ವಿಟಿ.

**ವಿದ್ಯುನ್ಮಾನ ತೀರುವೆ ಸೇವೆ**

ತೀರುವ ಮನೆಯ ಸೇವೆಯನ್ನು ಬಳಸಿಕೊಂಡು ಒಂದು ಬ್ಯಾಂಕ್ ಖಾತೆಯಿಂದ ಮತ್ತೊಂದು ಬ್ಯಾಂಕ್ ಖಾತೆಗೆ ಹಣ ರವಾನಿಸುವ ವಿದ್ಯುನ್ಮಾನ ಮಾಧ್ಯಮ

**ನಿಶ್ಚಿತ ಬಡ್ಡಿದರ**

ಸಾಲದ ಮೇಲಿನ ನಿಶ್ಚಿತ ಬಡ್ಡಿದರವೆಂದರೆ ಸಾಲದ ಸಂಪೂರ್ಣ ಅವಧಿಗೆಂದು ನಿರ್ಧರಿಸಲಾಗುವ ಅಥವಾ ಸ್ವಲ್ಪ ವರ್ಷಗಳ ನಂತರ ಆ ಸಾಲದ ಷರತ್ತು ಮತ್ತು ನಿಯಮಗಳನ್ನಾಧರಿಸಿ ಪರಿಷ್ಕರಿಸಲಾಗುವ ಬಡ್ಡಿದರ.

**ಚರಬಡ್ಡಿದರ**

ಸಾಲದ ಮೇಲಿನ ಚರಬಡ್ಡಿದರ ಎಂದರೆ ಅದು ನಿಶ್ಚಿತ ಬಡ್ಡಿದರವಾಗಿರುವುದಿಲ್ಲ. ಆದರೆ ಪ್ರಸ್ತಾಪಿತ ದರಕ್ಕೆ ಸಂಬಂಧ ಹೊಂದಿರುತ್ತದೆ ಮತ್ತು ಸಾಲ ನಿಬಂಧನೆ ಮತ್ತು ಷರತ್ತುಗಳ ಅನ್ವಯ ಪ್ರಸ್ತಾಪಿತ ದರದಲ್ಲಿನ ವ್ಯತ್ಯಾಸಕ್ಕನುಗುಣವಾಗಿ ಬದಲಾವಣೆಯಾಗುತ್ತದೆ.

**ಖಾತರಿ(ಗ್ಯಾರಂಟಿ)**

ವ್ಯಕ್ತಿಯೊಬ್ಬ ನೀಡುವ ವಾಗ್ದಾನ.

**ಸರ್ಕಾರಿ ಬಾಂಡ್**

ಸಾರ್ವಜನಿಕ ಸಾಲವನ್ನು ಎತ್ತಲು ಸರ್ಕಾರವು ಹೊರಡಿಸುವ ಭದ್ರತಾ ಪತ್ರಗಳು.

**ನಿಷ್ಕ್ರಿಯವಾದ/ಬಳಕೆಯಲ್ಲಿರದ ಖಾತೆ**

ಎರಡು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದಲೂ ಬಳಕೆಯಲ್ಲಿರದೆ ನಿಷ್ಕ್ರಿಯವಾಗಿರುವ ಉಳಿತಾಯ/ಚಾಲ್ತಿ ಖಾತೆ.

**ಅಂಚೆ**

ಭೌತಿಕ ಅಥವಾ ವಿದ್ಯುನ್ಮಾನ ರೂಪದಲ್ಲಿನ ಪತ್ರ.

**ಎನ್ಇಎಫ್‌ಟಿ**

ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (ಎನ್ಇಎಫ್‌ಟಿ) ವ್ಯವಸ್ಥೆಯು ರಾಷ್ಟ್ರಾದ್ಯಂತ ಇರುವ ನಿಧಿ ವರ್ಗಾವಣೆಯ ವ್ಯವಸ್ಥೆಯಾಗಿದ್ದು ದೇಶದಲ್ಲಿರುವ ಒಂದು ಬ್ಯಾಂಕಿನ ಶಾಖೆಯಿಂದ ಮತ್ತೊಂದು ಬ್ಯಾಂಕಿನ ಶಾಖೆಗೆ ನಿಧಿ ವರ್ಗಾವಣೆ ಮಾಡಲು ಅನುಕೂಲ ಮಾಡಿಕೊಡುವ ವ್ಯವಸ್ಥೆಯಾಗಿದೆ.

**ನಾಮನಿರ್ದೇಶನದ ಸೌಲಭ್ಯ**

ನಾಮನಿರ್ದೇಶನದ ಸೌಲಭ್ಯವಿದ್ದರೆ ಗತಿಸಿದ ಠೇವಣಿದಾರನಿಗೆ ಸಲ್ಲಬೇಕಾದ ಠೇವಣಿಯ ಹಣವನ್ನು ಅವನ ನಾಮನಿರ್ದೇಶಿತ ವ್ಯಕ್ತಿಗೆ ಪಾವತಿ ಮಾಡುವುದು ಸಾಧ್ಯವಾಗುತ್ತದೆ; ಬ್ಯಾಂಕಿನ ಸ್ವಾಧೀನದಲ್ಲಿರುವ ಗತಿಸಿದ ಠೇವಣಿದಾರನಿಗೆ ಸಂಬಂಧಿಸಿದ ಭದ್ರತಾ ಕಪಾಟಿನಲ್ಲಿರುವ ವಸ್ತುಗಳನ್ನು ನಾಮನಿರ್ದೇಶಿತ ವ್ಯಕ್ತಿಗೆ ಹಿಂತಿರುಗಿಸುವುದು ಸಾಧ್ಯವಾಗುತ್ತದೆ. ಬ್ಯಾಂಕಿನ ಭದ್ರತಾ ಕಪಾಟಿನ ಬಾಡಿಗೆ ನೀಡಿ ಅಲ್ಲಿ ಸುರಕ್ಷಿತವಾಗಿರಲೆಂದು ವಸ್ತುಗಳನ್ನು ಇಟ್ಟಿರುವ ಬಾಡಿಗೆದಾರನು ಗತಿಸಿದ ಸಂದರ್ಭದಲ್ಲಿ ಅವನ ನಾಮನಿರ್ದೇಶಿತ ವ್ಯಕ್ತಿಗೆ ಆ ವಸ್ತುಗಳನ್ನು ಬಿಡುಗಡೆ ಮಾಡಲಾಗುವುದು.

**ಅವಧಿ ಮೀರಿದ (ಹಳೆಯದಾದ) ಚೆಕ್**

ಚೆಕ್ ನೀಡಿದ ದಿನಾಂಕ ಮೂರು ತಿಂಗಳ ಮೀರಿದ ನಂತರ ಇತ್ಯರ್ಥಕ್ಕಾಗಿ ಚೆಕ್‌ನ್ನು ತೀರುವೆಗಾಗಿ ಸಲ್ಲಿಸುವುದು.

**ಶಾಶ್ವತ ಖಾತಾ ಸಂಖ್ಯೆ (ಪ್ಯಾನ್)**

ಶಾಶ್ವತ ಖಾತಾ ಸಂಖ್ಯೆಯೆಂದರೆ ಅಖಿಲ ಭಾರತ ಮಟ್ಟದಲ್ಲಿ ಭಾರತ ಸರ್ಕಾರದ ಆದಾಯ ತೆರಿಗೆ ಇಲಾಖೆಯು ಹಂಚಿಕೆ ಮಾಡಿದ ಹತ್ತು ಅಕ್ಷರಸಂಖ್ಯೆಗಳುಳ್ಳ ವಿಶಿಷ್ಟ ಸಂಖ್ಯೆ. ಪ್ಲಾಸ್ಟಿಕ್ ಹೊದಿಕೆಯಿರುವ ಕಾರ್ಡ್‌ನ ರೂಪದಲ್ಲಿ ಇದನ್ನು ನೀಡಲಾಗುತ್ತದೆ. ಈ ಸಂಖ್ಯೆಯು

ಶಾಶ್ವತವಾಗಿದ್ದು ಆದಾಯ ತೆರಿಗೆ ಪಾವತಿದಾರ ಮತ್ತು ಪಾವತಿಸಿಕೊಳ್ಳುವವರ ವಿಳಾಸ ಬದಲಾದರೂ ಅದು ಬದಲಾಗುವುದಿಲ್ಲ.

**ಪ್ರವೇಶಾನುಮತಿಯ ಗುಪ್ತ ಸಂಖ್ಯೆ (ಪಾಸ್‌ವರ್ಡ್)**

ಒಂದು ಪದ ಅಥವಾ ಸಂಖ್ಯೆಗಳು ಅಥವಾ ಇವುಗಳ ಮಿಶ್ರಣವಾಗಿದ್ದು ಗ್ರಾಹಕರು ದೂರವಾಣಿ ಅಥವಾ ಅಂತರ್ಜಾಲ ಬ್ಯಾಂಕಿಂಗ್‌ಗಾಗಿ ಪ್ರವೇಶಾನುಮತಿಗಾಗಿ ತಾವೇ ಆಯ್ಕೆಮಾಡಿಕೊಂಡು ಬಳಸುವ ಕೋಡ್ ಆಗಿರುತ್ತದೆ. ಇದನ್ನು ಗುರುತಿಸುವುದಕ್ಕಾಗಿಯೂ ಬಳಸಲಾಗುತ್ತದೆ.

**ಪಿನ್ ಸಂಖ್ಯೆ (ವೈಯಕ್ತಿಕ ಗುರುತು ಸಂಖ್ಯೆ)**

ಗ್ರಾಹಕರು ಪದಾರ್ಥ ಮತ್ತು ಸೇವೆಗಾಗಿ ಪಾವತಿ ಮಾಡಲು, ಹಣ ಹಿಂದೆ ಪಡೆಯಲು ಮತ್ತು ಬ್ಯಾಂಕ್ ನೀಡುವ ವಿದ್ಯುನ್ಮಾನ ಸೇವೆ ಪಡೆಯಲು ಬಳಸುವ ಕಾರ್ಡ್‌ಗೆ ಸಂಬಂಧಪಟ್ಟ ಗೋಪನೀಯ ಸಂಖ್ಯೆಯಾಗಿದೆ.

**ಆರ್‌ಟಿಜಿಎಸ್**

ಆರ್‌ಟಿಜಿಎಸ್ ಶಬ್ಧದ ಅರ್ಥವೆಂದರೆ ಶೀಘ್ರ ನಿವ್ವಳ ಇತ್ಯರ್ಥ(ರಿಯಲ್ ಟೈಮ್ ಗ್ರಾಸ್ ಸೆಟಲ್‌ಮೆಂಟ್).

ಆರ್‌ಟಿಜಿಎಸ್ ಪದ್ಧತಿಯು ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ನಿಧಿಗಳ ವರ್ಗಾವಣೆಯನ್ನು ಅತಿ ವೇಗವಾಗಿ ಮಾಡುತ್ತದೆ. ಆರ್‌ಟಿಜಿಎಸ್ ಅಡಿಯಲ್ಲಿ ವ್ಯವಹಾರಗಳ ಇತ್ಯರ್ಥವು 'ಒಬ್ಬರಿಂದ ಒಬ್ಬರಿಗೆ' ಆಧಾರದ ಮೇಲೆ ಮಾಡಲ್ಪಡುತ್ತದೆ. ಇದನ್ನೇ ನಿವ್ವಳ ಇತ್ಯರ್ಥ ಮತ್ತು ಶೀಘ್ರವಾಗಿ, ಎಂದರೆ ಯಾವುದೇ ಕಾಯುವ ಅವಧಿಯಿಲ್ಲದೆ ಇತ್ಯರ್ಥ ಎಂದು ತಿಳಿಯಬಹುದು.

**ಪ್ರಸ್ತಾಪಿತ ದರ**

ಅದು ಬ್ಯಾಂಕಿನ ಮಾನದಂಡ ಬಡ್ಡಿದರದವಾಗಿದ್ದು, ಚರದರದ ಆಧಾರದ ಮೇಲೆ ಬ್ಯಾಂಕ್ ಮಂಜೂರು ಮಾಡುವ ಸಾಲದ ದರವನ್ನು ಇದಕ್ಕೆ ಸಂಬಂಧ ಕಲ್ಪಿಸಲಾಗುತ್ತದೆ. ಆಯಾ ಬ್ಯಾಂಕುಗಳು ಅದರ ನೀತಿಗೆ ಅನುಗುಣವಾಗಿ ಪ್ರಸ್ತಾಪಿತ ದರದ ನಿರ್ಧರಣೆ/ ಮಾರ್ಪಾಟು ಮಾಡುತ್ತದೆ.

**ಹಿರಿಯ ನಾಗರೀಕರು**

ಅರವತ್ತು ವರ್ಷಕ್ಕಿಂತ ಮೇಲ್ಪಟ್ಟ ವ್ಯಕಿಗಳೆಲ್ಲಾ ಹಿರಿಯ ನಾಗರೀಕರಾಗಿರುತ್ತಾರೆ.

**ಸ್ಮಾರ್ಟ್ ಕಾರ್ಡ್**

ಕ್ರೆಡಿಟ್ ಕಾರ್ಡ್‌ನ ಆಕಾರದ ಒಂದು ಪ್ಲಾಸ್ಟಿಕ್ ಕಾರ್ಡ್. ಅದರಲ್ಲಿ ಹುದುಗಿಸಿರುವ

ಮೈಕ್ರೋಚಿಪ್ ದತ್ತಾಂಶವನ್ನು ಸಂಸ್ಕರಿಸುತ್ತದೆ. ಇದರಿಂದ ದತ್ತಾಂಶವನ್ನು ಸುರಕ್ಷಿತವಾಗಿ ಗುರುತಿಸಲು, ಅಧಿಕೃತಗೊಳಿಸಲು ಮತ್ತು ಸಂಗ್ರಹಿಸಲು ಸಾಧ್ಯವಾಗುತ್ತದೆ. ಇದನ್ನು ದೂರವಾಣಿ ಕರೆ, ವಿದ್ಯುನ್ಮಾನ ನಗದು ಪಾವತಿ ಮತ್ತು ತರ ಬಳಕೆಗೆ ಬಳಸಬಹುದಾಗಿದೆ.

**ದರಸೂಚಿ**

ಗ್ರಾಹಕರಿಗೆ ಬ್ಯಾಂಕ್ ನೀಡುವ ಉತ್ಪನ್ನಗಳಿಗೆ ಮತ್ತು ಸೇವೆಗಳಿಗ ಬ್ಯಾಂಕ್ ವಿಧಿಸುವ ದರಗಳ ವಿವರಗಳ ಸೂಚಿ ಪಾವತಿಯಾಗದ ಚೆಕ್ ಪಾವತಿಯಾಗದ ಚೆಕ್ ಬ್ಯಾಂಕ್‌ನಿಂದ 'ಪಾವತಿಯಾಗದೆ'(ಬೌನ್ಸ್ ಆದ) ಹಿಂತಿರುಗಿ ಬಂದ ಚೆಕ್.

ಸಂಹಿತೆಯನ್ನು **ಬ್ಯಾಂಕಿಂಗ್ ಕೋಡ್ಸ್ ಅಂಡ್ ಸ್ಟ್ಯಾಂಡರ್ಡ್ಸ್ ಬೋರ್ಡ್ ಆಫ್ ಇಂಡಿಯಾ (ಬಿಸಿಎಸ್ ಬಿಐ )** ಸಂಸ್ಥೆಯು ಭಾರತೀಯ ರಿಸರ್ವ್ ಬ್ಯಾಂಕ್, ಇಂಡಿಯನ್ ಬ್ಯಾಂಕರ್ಸ್ ಅಸೋಸಿಯೇಷನ್ ಮತ್ತು ಸದಸ್ಯ ಬ್ಯಾಂಕುಗಳ ಸಹಯೋಗದೊಂದಿಗೆ ಪ್ರಕಟಿಸಲಾಗಿದೆ. ಈ ಸಂಹಿತೆಯ ಮುಖ್ಯ ಉದ್ದೇಶವು ಯೋಗ್ಯ, ನ್ಯಾಯ ಸಮ್ಮತ ಆಚರಣೆಗಳು ಕನಿಷ್ಠ ಮಾನದಂಡಗಳ ನಿಗದಿ ಪಡಿಸುವಿಕೆ ಹೆಚ್ಚು ಪಾರದರ್ಶಕತೆ, ಕಾರ್ಯಾಚರಣೆಯ ಹೆಚ್ಚಿನ ಮಾನದಂಡದ ಸಾಧನೆ ಮತ್ತು ಎಲ್ಲಕ್ಕೂ ಮಿಗಿಲಾಗಿ ಬ್ಯಾಂಕರ್– ಗ್ರಾಹಕರ ಸೌಹಾರ್ದಯುತ ಸಂಬಂಧವನ್ನು ಉತ್ತೇಜಿಸುವುದೇ ಆಗಿದೆ. ಇದು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಶ್ರೀಸಾಮಾನ್ಯನ ವಿಶ್ವಾಸ ಹೆಚ್ಚಿಸುತ್ತದೆ.

ಬ್ಯಾಂಕಿಂಗ್ ಸೇವೆ ನೀಡುವಾಗ, ಬ್ಯಾಂಕುಗಳು ಅಳವಡಿಸಿಕೊಂಡ ಬ್ಯಾಂಕಿಂಗ್ ಸಂಹಿತೆಗಳು ಮತ್ತು ಮಾನದಂಡವನ್ನು ಸ್ವಯಂ ಸ್ಫೂರ್ತಿಯಿಂದ ನಿಜವಾಗಿಯೂ ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಲು ಬಿಸಿಎಸ್ ಬಿಐ ಫೆಬ್ರುವರಿ 2006ರಲ್ಲಿ ಸ್ಥಾಪಿತವಾದ ಒಂದು ಸ್ವಾಯತ್ತ ಸಂಸ್ಥೆಯಾಗಿದೆ.

ಬಿಸಿಎಸ್ ಬಿಐ ಎರಡು ಪ್ರತ್ಯೇಕ ಸಂಹಿತೆಗಳನ್ನು ಪ್ರಕಟಿಸಿದೆ.– **ಗ್ರಾಹಕರಿಗಾಗಿ ಬ್ಯಾಂಕಿನ ಬದ್ಧತಾ ಸಂಹಿತೆ** ಮತ್ತು **ಸೂಕ್ಷ್ಮ ಮತ್ತು ಸಣ್ಣ ಉದ್ದಿಮೆಗಳಿಗಾಗಿ ಬ್ಯಾಂಕಿನ ಬದ್ಧತಾ ಸಂಹಿತೆ**. ಈ ಸಂಹಿತೆಗಳನ್ನು ಅನುಸೂಚಿತ ವಾಣಿಜ್ಯ ಬ್ಯಾಂಕುಗಳು, ಪೌರ ಸಹಕಾರಿ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳೂ ಸೇರಿದಂತೆ ಬಿಸಿಎಸ್ ಬಿಐ ನ ಸದಸ್ಯ ಬ್ಯಾಂಕುಗಳು ಅಳವಡಿಸಿಕೊಂಡಿವೆ. ಬಿಸಿಎಸ್ ಬಿಐ ಮತ್ತು ಆಚರಣೆಗಳಲ್ಲಿನ ಕೊರತೆಗಳನ್ನು ಗುರುತಿಸಲು ಬಿಸಿಎಸ್ ಬಿಐ ದೂರುಗಳನ್ನು ಪರಾಮರ್ಶಿಸುತ್ತದೆ ಮತ್ತು ಅವುಗಳನ್ನು ಸರಿ ಪಡಿಸಲು ಕ್ರಮ ತೆಗೆದುಕೊಳ್ಳುತ್ತದೆ.

ಬಿಸಿಎಸ್‌ಬಿಐ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವೆಬ್ ತಾಣ www.bcsbi.org.in ಸಂದರ್ಶಿಸಿ.